ಶ್ರೀ ವಿಜಯದಾಸಾರ್ಯರ ಪಂಚರತ್ನ ಸುಳಾದಿಗಳು-ಅಧ್ಯಯನ

(ಶ್ರೀನರಸಿಂಹ, ಶ್ರೀಕಪಿಲ, ಶ್ರೀಧನ್ವಂತರಿ, ಶ್ರೀದುರ್ಗಾ, ಹಾಗೂ ಶ್ರೀ ಪ್ರಾಣದೇವರ ಸುಳಾದಿಗಳು - ವಿಶೇಷಾರ್ಥ ಸಹಿತ)



ಸಂಪಾದಕರು

ಶ್ರೀನಿವಾಸ ಸು. ಮಠದ

ಇದೇ ಲೇಖಕರ ಪ್ರಕಟಿತ ಕೃತಿಗಳು

01)	ಶ್ರೀಮಜ್ಜಯತೀರ್ಥ ಸುಪ್ರಭಾತ	00-60
02)	ಶ್ರೀಸಪ್ತರ್ಷಿರಾಮಾಯಣ ಹಾಗೂ ಶ್ರೀರಾಮವೇದಪಾದಸ್ತೋತ್ರ (ತೃತೀಯ ಮುದ್ರಣ)	5-00
03)	ದಾಸ ಸಾಹಿತ್ಯ ಸೌರಭ (ಸಂಪುಟ-1)	18-00
04)	ಉಪನೀತರಿಗೆ ಉಪಯುಕ್ತ ಉಪದೇಶ (ದ್ವಿತೀಯ ಮುದ್ರಣ)	30-00
05)	ಶ್ರೀ ಸಂಧ್ಯಾಸಾರ ಸಂಗ್ರಹ (ಪಂಚಮ ಮುದ್ರಣ)	20-00
06)	ಶ್ರೀರುಕ್ಮಿಣೀಶವಿಜಯ ಸಾರಸಂಗ್ರಹ (ಸೈದ್ಧಾಂತಿಕ ಅಧ್ಯಯನ)	20-00
07)	ಶ್ರೀ ದೇವಪೂಜಾ ಸಾರಸಂಗ್ರಹ (ಷಷ್ಠ ಮುದ್ರಣ)	20-00
08)	ಸದಾಚಾರ ಸೌರಭ (ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ ಉಜಿರೆ ಅವರಿಂದ ಪ್ರಕಟಿತ)	25-00
09)	ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್ (ಶ್ರೀ ಶ್ರೀ ಸತ್ಯಸಂಧತೀರ್ಥರ ಭಾಷ್ಯಾನುಸಾರಿ) (ಅಷ್ಟಮ ಮುದ್ರಣ)	25-00
10)	ಶ್ರೀ ವೈಶ್ವದೇವಸಾರಸಂಗ್ರಹ (ತೃತೀಯ ಮುದ್ರಣ)	20-00
11)	ದಾಸ ಸಾಹಿತ್ಯ ಸೌರಭ (ಸಂಪುಟ-2)	20-00
12)	ಶ್ರೀಕೃಷ್ಣಾವತಾರ ಸಂದೇಶ	25-00
13)	ಶ್ರೀ ಅಣುಭಾಷ್ಯ ಸಾರಸಂಗ್ರಹ (ಶ್ರೀ ಬಿದರಹಳ್ಳಿ ಶ್ರೀನಿವಾಸತೀರ್ಥರ ಟಿಪ್ಪಣಿ) (ಕನ್ನಡಾನುವಾದ)	25-00
14)	ವೇದ ಬ್ರಹ್ಮಸೂತ್ರಗಳು ಇತ್ಯಾದಿ (ಆನಂದತೀರ್ಥ ಪ್ರತಿಷ್ಠಾನ, ಬೆಂಗಳೂರು ಪ್ರಕಟಿತ)	50-00
15)	ಗಜೇಂದ್ರಮೋಕ್ಷ (ಒಂದು ಅಧ್ಯಯನ)	30-00
16)	ದಶಾವತಾರ ಸ್ತೋತ್ರಮಂಜರೀ (ಎಸ್.ಎಮ್.ಎಸ್.ಓ.ಸಭಾ ಪ್ರಕಟಿತ)	30-00
17)	ಮಧ್ವಾಷ್ಟಕಮ್ (ವಿವರಣೆ ಸಹಿತ)	10-00
18)	ಗೀತೆಯ ಅಂತರಂಗ	20-00
19)	ಧಾತ್ರೀಮಹಿಮೆ, ಧಾತ್ರೀಹೋಮ ಹಾಗೂ ವನಭೋಜನ ಮಹಾತ್ಮೆ (ದ್ವಿತೀಯ ಮುದ್ರಣ)	10-00
20)	ತೀರ್ಥಪ್ರಬಂಧ : ಒಂದು ಅಧ್ಯಯನ	20-00
21)	ಶ್ರೀನರಸಿಂಹಸ್ತೋತ್ರಮಂಜರೀ (ಚತುರ್ಥ ಮುದ್ರಣ) (ಅಪೂರ್ವ ಸ್ತೋತ್ರಸಂಗ್ರಹ)	30-00
22)	ಪ್ರಾತಃ ಸ್ತೋತ್ರಗಳು (ಕನ್ನಡ ಭಾವಾನುವಾದ ಸಹಿತ)	15-00
23)	ಸಮುದ್ರ ಮಥನ - ಒಂದು ಅಧ್ಯಯನ	30-00
24)	ಶ್ರೀ ರುಕ್ಮಿಣೀಶ ವಿಜಯಃ (ಕನ್ನಡ ಕಥಾರೂಪ)	15-00
25)	ಶ್ರೀವೇದವ್ಯಾಸ ಸ್ತೋತ್ರಮಂಜರೀ (ಹರಿದಾಸರ ಕೃತಿಗಳ ಸಹಿತ)	20-00
26)	ಶ್ರೀನವಗ್ರಹ ಸ್ತೋತ್ರ ಮಂಜರೀ	15-00
27)	The glory of great saint Sri Vadirajteerth	15-00
28)	ಶ್ರೀಕೃಷ್ಣ ಸ್ತೋತ್ರ ಮಂಜರೀ (ಅಪೂರ್ವ ಸ್ತೋತ್ರ ಸಂಗ್ರಹ)	30-00
29)	ಶ್ರೀವಾದಿರಾಜಪೂಜ್ಯಚರಣ ವಿರಚಿತ ಶ್ರೀಮದ್ ಭಾಗವತಾನುಕ್ರಮಣಿಕಾ ಕನ್ನಡಾನುವಾದ	20-00
30)	ಕಾವ್ಯ ಶಾಸ್ತ್ರವಿನೋದ (ಎಸ್.ಎಮ್.ಎಸ್.ಓ.ಸಭಾ ಪ್ರಕಟಿತ)	20-00
31)	ವಿವಾಹಿತರಿಗೆ ವಿಹಿತ ಉಪದೇಶ	30-00
32)	ವೈದ್ಯಮೂರ್ತಿ ಶ್ರೀಧನ್ವಂತರಿ	15-00
33)	ಶ್ರೀ ಋಷಿಪಂಚಮೀ ವ್ರತ, ಶ್ರೀವಿಷ್ಣು ಪಂಚಕ ವ್ರತ, ಶ್ರೀ ಭೀಷ್ಮ ಪಂಚಕ ವ್ರತ	20-00
34)	ಶ್ರೀ ಅಧ್ಯಾತ್ಮಮಾಲಿಕಾ (ಕನ್ನಡಾನುವಾದ, ವಿವರಣೆ ಸಹಿತ)	10-00
35)	ಸಪ್ತಾಹ ಕ್ರಮದಲ್ಲಿ ಶ್ರೀಮದ್ ಭಾಗವತ ಕಥಾಸಾರ ಸಂಗ್ರಹ (ಪಂಚಮ ಮುದ್ರಣ)	120-00
36)	ಶ್ರಾದ್ಧಕರ್ಮ (ಶ್ರೀ ರಾಘವೇಂದ್ರ ದರ್ಶನಕೇಂದ್ರ, ಬೆಂಗಳೂರು ಪ್ರಕಟಿತ) (ತೃತೀಯ ಮುದ್ರಣ)	80-00
37)	ಸೂರ್ಯಪುತ್ರ ಶನೈಶ್ಚರ	10-00

Rarest Archiver

1

ಶ್ರೀ ವಿಜಯದಾಸಾರ್ಯರ
ಪಂಚರತ್ನ ಸುಳಾದಿಗಳು – ಅಧ್ಯಯನ

(ಶ್ರೀನರಸಿಂಹ, ಶ್ರೀಕಪಿಲ, ಶ್ರೀಧನ್ವಂತರಿ, ಶ್ರೀದುರ್ಗಾ, ಹಾಗೂ
ಶ್ರೀ ಪ್ರಾಣದೇವರ ಸುಳಾದಿಗಳು – ಅರ್ಥ ಸಹಿತ)

ಸಂಪಾದಕರು
ಶ್ರೀನಿವಾಸ.ಸು.ಮಠದ

ಪ್ರಕಾಶಕರು
ಗೀತಾ ಪ್ರಕಾಶನ ವಿಜಾಪುರ

Rarest Archiver

SHRI VIJAYADĀSĀRYARA PANCHRATNA SULĀDIGALU

–Adhyayana

Srinivas.S.Mathad B.SC.MA

Recipient of " Parimala Prashasti " "Jnanajyoti Award". and Das Sahitya Seva Praveena.

Ajarekar Chal, Meenaxi Chowk,

BIJAPUR-586101

Mobile No : 9972078061

First Edition : 2011

Copies : 1000

Pages : 60

Price : Rs. 30/-

© : Reserved by the author

Publisher - : Geeta Prakashana
Ajarekar Chal, Meenaxi Chowk
BIJAPUR-586101. Ph : 08352-258362

Printers :

VIJAY OFFSET PRINTERS
Ajrekar chal, meenaxi chowk
BIJAPUR - 586101.Ph : 08352-251792

Rarest Archive

ಆಶೀರ್ವಚನ

ಶ್ರೀಗೋವಿಂದರಾಜೋ ವಿಜಯತೇ

ಶ್ರೀ ದಾಸವರ್ಯ ವಿಜಯದಾಸರು "ಸುಳಾದಿ" ದಾಸರೆಂದೇ ಪ್ರಸಿದ್ಧರಾಗಿದ್ದಾರೆ. ಅನೇಕಾನೇಕ ಸುಳಾದಿಗಳಲ್ಲಿ ಶ್ರೀಮನ್ ಮಧ್ವಮತದ ತತ್ವಗಳನ್ನು ಚೆನ್ನಾಗಿ ತಿಳಿಸಿಕೊಟ್ಟಿದ್ದಾರೆ ಹಾಗೆಯೇ ಭಕ್ತರಿಗೆ ಬರಬಹುದಾದ ವಿಘ್ನಗಳನ್ನು, ಆಪತ್ತುಗಳನ್ನು ದೂರಮಾಡುವ ಶ್ರೀನರಸಿಂಹ, ಕಪಿಲ, ಧನ್ವಂತರಿ ಮೊದಲಾದ ಸುಳಾದಿಗಳನ್ನು ರಚಿಸಿ ಉಪಕರಿಸಿದ್ದಾರೆ.

ನಮ್ಮ ಶಿಷ್ಯ ಚಿ॥ ಶ್ರೀನಿವಾಸ ಸು. ಮಠದನು ಸಜ್ಜನರಿಗೆ ಅರ್ಥವನ್ನು ತಿಳಿದು ಪಾರಾಯಣ ಮಾಡಲು ಶ್ರೀನರಸಿಂಹ ಕಪಿಲ, ಧನ್ವಂತರಿ, ದುರ್ಗಾ, ಶ್ರೀವಾಯುದೇವರು ಹೀಗೆ ಪಂಚರತ್ನಸುಳಾದಿಗಳನ್ನು ಇಲ್ಲಿ ಸಂಪಾದಿಸಿದ್ದಾನೆ.

ಸಜ್ಜನರು ಇದರ ಸದುಪಯೋಗ ಮಾಡಿಕೊಂಡು ಆ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕು.

ಈ ಕೃತಿ ರಚನೆ ಮಾಡಿದ ಶ್ರೀನಿವಾಸ ಸು. ಮಠದ ಈತನಿಗೆ ಜ್ಞಾನ ಭಕ್ತಿ ವೈರಾಗ್ಯಾದಿಗಳು ಲಭಿಸಲಿ ಎಂದು ಶ್ರೀಬಾದರಾಯಣಾಭಿನ್ನ ಶ್ರೀಗೋವಿಂದರಾಜರಲ್ಲಿ ಪ್ರಾರ್ಥಿಸುತ್ತೇವೆ.

18–9–11
ವಿಜಾಪುರ

ಪಂಡಿತ॥ ತ್ರಿವಿಕ್ರಮಾಚಾರ್ಯ ಉಮರ್ಜಿ
ವಿಜಯಪುರ

Rarest Archives

ಲೇಖಕನ ನುಡಿ

ನನ್ನ ಸ್ನೇಹಿತರಾದ ಶ್ರೀಯುತ ರವಿ ಕಟ್ಟಿ ಅವರು "ಶ್ರೀ ವಿಜಯದಾಸಾರ್ಯರ ಪಂಚರತ್ನ ಸುಳಾದಿಗಳು ಅರ್ಥಸಹಿತ" ಪುಸ್ತಕವನ್ನು ಬರೆದು ಕೊಡಬೇಕೆಂದು ತಿಳಿಸಿದರು. ಆ ವಿಜಯದಾಸರ ಪ್ರೇರಣೆಯಿಂದ ಒಪ್ಪಿಕೊಂಡೆ. ಅವರ ಅನುಗ್ರಹದ ಫಲವೇ ಈ ಪುಸ್ತಕ.

ಈ ಕೃತಿಯನ್ನು ನಮ್ಮ ಕುಲಸ್ವಾಮಿಯಾದ ಶ್ರೀಶ್ರೀನಿವಾಸದೇವರ ಅಡಿದಾವರೆಗಳಲ್ಲಿ ಭಕ್ತಿ ಪೂರ್ವಕ ಸಮರ್ಪಿಸಿದ್ದೇನೆ.

ಕೃತಿ ಸಂಪಾದನ ಕಾರ್ಯದಲ್ಲಿ ಮಾರ್ಗದರ್ಶನ ಮಾಡಿದ ನನ್ನ ವಿದ್ಯಾ ಗುರುಗಳಾದ ಶ್ರೀ ಪಂಡಿತ॥ ತ್ರಿವಿಕ್ರಮಾಚಾರ್ಯ ಉಮರ್ಜಿ ವಿಜಯಪುರ ಅವರಿಗೆ ಕೃತಜ್ಞತಾಪೂರ್ವಕ ಶಿ॥ ಸಾ॥ ನಮಸ್ಕಾರಗಳು

ಕೃತಿಯು ಹೊರಬರಲು ಸಹಾಯಮಾಡಿದ ಶ್ರೀ ಪಂ॥ ಪ್ರದ್ಯುಮ್ನಾಚಾರ್ ಪೂಜಾರ ಅವರಿಗೆ ನನ್ನ ನಮಸ್ಕಾರಗಳು ಹಾಗೂ ನನ್ನ ತಮ್ಮ ಚಿ॥ ವಾದಿರಾಜ ಮಠದ, ಸುಪುತ್ರ ಚಿ॥ ಆನಂದತೀರ್ಥ ಮಠದ, ಶ್ರೀ ರಾಘವೇಂದ್ರ ಅಡಬಡ್ಡಿ ಅವರಿಗೆ ನನ್ನ ಆಶೀರ್ವಾದಗಳು.

ಈ ಗ್ರಂಥದ ಮುದ್ರಣಕ್ಕೆ ಶ್ರೀಯುತ ರವಿಕಟ್ಟಿ ವಿಜಾಪುರ ಇವರು ಧನಸಹಾಯ ನೀಡಿದ್ದಾರೆ. ಶ್ರೀಹರಿವಾಯುಗಳು ಅವರಿಗೆ ಜ್ಞಾನ, ಭಕ್ತಿ, ವೈರಾಗ್ಯಾದಿಗಳನ್ನು ನೀಡಲಿ

ಈ ಗ್ರಂಥದ ಮುದ್ರಣಕ್ಕೆ ಬೆಂಗಳೂರು ನಿವಾಸಿಗಳಾದ ಶ್ರೀಯುತ ಬನಾಜಿ ಶ್ರೀನಿವಾಸಮೂರ್ತಿ ಅವರು ತಮ್ಮ ಪುತ್ರ ದಿ॥ ಕೇಶವನ ಸ್ಮರಣಾರ್ಥ ಧನಸಹಾಯ ನೀಡಿದ್ದಾರೆ. ಶ್ರೀಹರಿವಾಯುಗಳು ದಿ॥ಕೇಶವನಿಗೆ ಸದ್ಗತಿ ನೀಡಲಿ

ಈ ಕೃತಿಯನ್ನು ಸಕಾಲದಲ್ಲಿ ಮುದ್ರಣ ಮಾಡಿಕೊಟ್ಟ ಮೆ॥ ವಿಜಯ ಆಫ್‌ಸೆಟ್ ಪ್ರಿಂಟರ್ಸ ಅವರಿಗೆ ಧನ್ಯವಾದಗಳು.

18–9–11 — ಇತಿ ಸಜ್ಜನ ಸೇವಕ
ವಿಜಾಪುರ — ಶ್ರೀನಿವಾಸ ಸು. ಮಠದ

Rarest Archiver

ವಿಷಯಾನುಕ್ರಮಣಿಕಾ

1) ಶ್ರೀ ವಿಜಯದಾಸರು – ಸಂಕ್ಷಿಪ್ತಜೀವನಚರಿತ್ರೆ 6

2) ಶ್ರೀ ಸುಳಾದಿ ಸಾಹಿತ್ಯ – ಪರಿಚಯ 10

3) ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀನರಸಿಂಹದೇವರ ಸ್ತೋತ್ರಸುಳಾದಿ 12

4) ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀಕಪಿಲದೇವರ ಸ್ತೋತ್ರಸುಳಾದಿ 14

5) ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀಧನ್ವಂತರಿದೇವರ ಸ್ತೋತ್ರಸುಳಾದಿ 17

6) ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀ ದುರ್ಗಾ ಸ್ತೋತ್ರಸುಳಾದಿ 19

7) ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀಪ್ರಾಣದೇವರ ಚರಣಮಹಿಮಾ ಸುಳಾದಿ 23

8) ಶ್ರೀ ವಿಜಯದಾಸಾರ್ಯ ವಿರಚಿತ ಶ್ರೀನರಸಿಂಹದೇವರ ಸ್ತೋತ್ರಸುಳಾದಿ
ಭಾವಾರ್ಥ, ವಿಶೇಷಾರ್ಥಗಳು 28

9) ಶ್ರೀ ವಿಜಯದಾಸಾರ್ಯ ವಿರಚಿತ ಶ್ರೀಕಪಿಲದೇವರ ಸ್ತೋತ್ರಸುಳಾದಿ
ಭಾವಾರ್ಥ, ವಿಶೇಷಾರ್ಥಗಳು 37

10) ಶ್ರೀ ವಿಜಯದಾಸಾರ್ಯ ವಿರಚಿತ ಶ್ರೀಧನ್ವಂತರಿದೇವರ ಸ್ತೋತ್ರಸುಳಾದಿ
ಭಾವಾರ್ಥ, ವಿಶೇಷಾರ್ಥಗಳು 41

11) ಶ್ರೀ ವಿಜಯದಾಸಾರ್ಯ ವಿರಚಿತ ಶ್ರೀದುರ್ಗಾಸ್ತೋತ್ರಸುಳಾದಿ
ಭಾವಾರ್ಥ, ವಿಶೇಷಾರ್ಥಗಳು 47

12) ಶ್ರೀ ವಿಜಯದಾಸಾರ್ಯ ವಿರಚಿತ ಶ್ರೀ ಪ್ರಾಣದೇವರ ಚರಣಮಹಿಮಾ ಸುಳಾದಿ
ಭಾವಾರ್ಥ, ವಿಶೇಷಾರ್ಥಗಳು 53

Rarest Archives

ಶ್ರೀ ವಿಜಯದಾಸರ ಸಂಕ್ಷಿಪ್ತ ಜೀವನ ಚರಿತ್ರೆ

ಕನ್ನಡ ಹರಿದಾಸ ಚತುಷ್ಟಯರಲ್ಲಿ ಮೊದಲನೆಯವರು ದಾಸ ಶ್ರೇಷ್ಠರಾದ ಶ್ರೀ ಪುರಂದರದಾಸರು. ಎರಡನೆಯವರೇ ಶ್ರೀ ವಿಜಯದಾಸರು. ಇವರು ಶ್ರೀ ಪುರಂದರದಾಸರಿಂದ ಹರಿದುಬಂದ ದಾಸಸಾಹಿತ್ಯವನ್ನು ಅಭಿವೃದ್ಧಿಗೊಳಿಸಿ ಪೋಷಿಸಿದ ಮಹನೀಯರು.

ಸಂಗೀತ, ಸಾಹಿತ್ಯ, ನೀತಿಬೋಧನೆ, ಸಮಾಜರಚನೆ, ಅದರ ಸುಧಾರಣೆಗಳ ವಿಷಯದಲ್ಲಿ ನಮ್ಮ ಹರಿದಾಸರು ಮಾಡಿದ ಸೇವೆ ಅಪಾರವಾದುದು. ಸಮಾಜದಲ್ಲಿ ನೈತಿಕ ಉನ್ನತಿಯನ್ನು ಸಾಧಿಸುವುದು, ಹರಿಭಕ್ತಿಯನ್ನು ಜನರಿಗೆ ಬೋಧಿಸುವುದು, ಶುದ್ಧವಾದ ಆಚರಣೆಯನ್ನು ತಿಳಿಸಿಕೊಡುವುದು ದಾಸರಾಯರ ಮುಖ್ಯ ಗುರಿಯಾಗಿತ್ತು.

ಈ ದಿಶೆಯಲ್ಲಿ ಶ್ರೀ ವಿಜಯದಾಸರು ಮಾಡಿರುವ ಸಾಧನೆ ಗಣನೀಯವಾದುದು. ಶ್ರೀಮನ್ ಮಧ್ವಮತದ ಮುಖ್ಯಪ್ರಮೇಯಗಳಾದ ಜಗತ್‌ಸತ್ಯತ್ವ, ಪಂಚಬೇಧಗಳು, ತಾರತಮ್ಯ, ಮುಕ್ತಿಯಸ್ವರೂಪ, ಭಕ್ತಿಯೇ ಮುಕ್ತಿಗೆ ಸಾಧನ ಮತ್ತು ಶ್ರೀಹರಿಯೇ ಸರ್ವೋತ್ತಮವಸ್ತು ಇತ್ಯಾದಿಗಳನ್ನು ಶ್ರೀ ವಿಜಯದಾಸರು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶದಿಂದ ಅನೇಕ ಕೀರ್ತನೆಗಳನ್ನು, ಸುಳಾದಿಗಳನ್ನು ರಚಿಸಿಕೊಟ್ಟು ಸಜ್ಜನವೃಂದಕ್ಕೆ ಮರೆಯಲಾಗದ ಉಪಕಾರ ಮಾಡಿದ್ದಾರೆ.

ಶ್ರೀ ವಿಜಯದಾಸರ ಪೂರ್ವ ಜನ್ಮಗಳ ಕುರಿತು ಕಿಂಚಿತ್ತಾಗಿ ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

ತ್ರೇತಾಯುಗದಲ್ಲಿ ಇವರು ನಾರದರ ಸೇವೆಯನ್ನು ಮಾಡಿ "ಸುರಲೀಲ" ಕಪಿಯಾಗಿ ಜನಿಸಿ ಶ್ರೀರಾಮದೇವರ ಸೇವೆಯನ್ನು ಮಾಡಿದರು.

ದ್ವಾಪರಯುಗದಲ್ಲಿ ಇವರು ಯಾದವರಲ್ಲಿ "ನಿಕಂಪ"ನಾಗಿ ಹುಟ್ಟಿ ಶ್ರೀಕೃಷ್ಣನ ಸೇವೆಯನ್ನು ಮಾಡಿದರು. ಕಲಿಯುಗದಲ್ಲಿ ಶ್ರೀ ಪುರಂದರದಾಸರ ಮನೆಯಲ್ಲಿ ಆಕಳಕರುವಾಗಿ ಹುಟ್ಟಿದರು. ನಂತರ ಶ್ರೀ ದಾಸರಾಯರ ವಚನಾಮೃತವನ್ನು ಕೇಳಿ ಆ ಪುಣ್ಯಪ್ರಭಾವದಿಂದ ಎರಡು ಸಲ ಬ್ರಾಹ್ಮಣ ಜನ್ಮದಲ್ಲಿ ಬಂದರು. ಶ್ರೀ ದಾಸರ ಮಗನಾದ "ಮಧ್ವಪತಿ"ಯೇ ಇವರು. ಈ ವಿಷಯವನ್ನು ಶ್ರೀ ವಿಜಯದಾಸರೇ ತಮ್ಮ ಸುಳಾದಿಯೊಂದರಲ್ಲಿ ತಿಳಿಸಿರುವ ಪರಿ ಹೀಗಿದೆ.

ದಾಸ ಪುರಂದರರ ಪಾದವನು ಪೊಂದಿದೆನು
ಏಸು ಜನ್ಮದ ಪುಣ್ಯ ರಾಶಿ ಫಲಿಸಿತೋ ಎನಗೆ
ಕಾಸಿಗಾಗದವನು ಸಾಸಿರಕೆ ಬೆಲೆಯಾದೆ

Rarest Archive

ಸೂಸುವ ಭಕುತಿಯಲ್ಲಿ ಶ್ರೀಶನನಾಮ ಪೀ
ಯೂಷವನ್ನುಂಡೆನೋ ಉಚಿತಸಾಧನದಿಂದ
ಲೇಸಾಗಿ ಪುರಂದರದಾಸರನ ಪಾಲಿಸಿದ
ಸಾಸಿರಪಾದ ನಮ್ಮ ವಿಜಯವಿಠ್ಠಲನ್ನ
ದಾಸರ ದಾಸನಾದೆ ದೋಷ ವಿರಹಿತನಾದೆ ॥ ಎಂದು ಹೇಳುತ್ತ

ಸುರಲೀಲನಾಗಿ ನಿಕಂಪನೆಂದೆನಿಸಿ ದ್ವಾ
ಪರದಲ್ಲಿ ಜನಿಸಿದೆ ಕೆಲವು ದಿನ ಬಿಡದೆ
ತರುವಾಯ ವರ ಕಲಿಯುಗದಲ್ಲಿ ಈಗ ಜನನ
ಮರಣವಾಗುತ ಬಂದು ಧರೆಯೊಳಗೆ ಮೆರೆದು
ಹರಿ ಕೃಪೆಯಿಂದಲಿ ಇವರ ಸದನದೊಳಗೆ
ತುರುಕರುವು ಆಗಿ ಜನಿಸಿದೆನು ಸುಕೃತದಿಂದ
ಸಿರಿಪತಿಸ್ಥ ವಿಷ್ಣು ನಮ್ಮ ವಿಜಯವಿಠ್ಠಲನ್ನದಾ
ಸರು ಪೇಳಲು ಕವನ ಎರಗಲು ಕರ್ಣಕ್ಕೆ ॥

ಶ್ರವಣ ಫಲದಿಂದ ಅವನಿಯೊಳಗೆ ಎರಡು
ಅವನಿಸುರರ ಜನ್ಮವೀಗ ಧರಿಸಿದೆ
ಕವನ ಪೇಳಿದೆ ಸಂಸಾರದಲ್ಲಿ ಇದ್ದು
ಅವಸರನಾಗಿ ಅವಧಿಯಿಲ್ಲದೆ ಮತ್ತೆ
ಅವನಿಯೊಳಗೆ ಬಂದೆ ಭವ ದೂರನಾಗಿ
ಕವಿನಾಮ ವಿಜಯವಿಠ್ಠಲನ್ನ ದಿವ್ಯನಾ
ಮವನು ಕೊಂಡಾಡುವ ಅಧಿಕಾರಿ ನಾನಾದೆ ॥

ಈ ಪ್ರಕಾರ ತಮ್ಮ ಜನ್ಮಾಂತರದ ವಿಷಯಗಳನ್ನೆಲ್ಲ ಹೇಳಿಕೊಂಡ ಶ್ರೀ ವಿಜಯದಾಸರು ನಿಜವಾಗಿಯೂ ಅಪರೋಕ್ಷಜ್ಞಾನಿಗಳು. ಇವರ ಮೂಲ ಸ್ವರೂಪದ ವಿಷಯವನ್ನು ಶ್ರೀ ಮೋಹನದಾಸರು ಹೀಗೆ ತಿಳಿಸಿದ್ದಾರೆ.

ಮೊದಲು ಋಷಿಗಳು ಕೂಡಿ ಸತ್ರಯಾಗವ ನಾಕ
ನದಿಯ ತೀರದಲಿ ರಚಿಸಿಯಿರಲು
ಪದುಮಸಂಭವ ಭವಬಂದು ಮುನಿವೃಂದ
ಹೃದಯ ಸಂಶಯ ಹೊಂದಲು
ವಿಧಿ ವಿಷ್ಣು ಶಿವರೊಳಗೆ ಉತ್ತಮರ ತೋರದಲೆ
ಮುದಡಭಾವವ ವೊಹಿಸಲು
ಒದಗಿ ಭೃಗುಮುನಿಗಳೇ ಸರ್ವೇಶ ವೈಕುಂಠ
ಸದನನೆಂದರುಹಿದವರೋ ಇವರೋ ॥

Rarest Archiver

ಇದನ್ನೇ ಶ್ರೀ ಕನಕದಾಸರು ತಮ್ಮ ಅಪರೋಕ್ಷಜ್ಞಾನದಿಂದ ತಿಳಿಸಿದ್ದಾರೆ.
ನಾರದರ ಅಂಶವು ಪುರಂದರದಾಸರು

....

ತಮ್ಮ ಕೂಸಾದ ಭೃಗುಮುನಿಯಲಿ ತಾವೊಂದು
ಅಂಶದಲ್ಲಿ ನಿಂದು ವಿಜಯದಾಸರೆಂದು ಹೆಸರು ಪಡೆದರು ॥

ಈ ಮೇಲಿನ ಆಧಾರವಚನಗಳಿಂದ ಭೃಗುಋಷಿಗಳೇ ಶ್ರೀ ವಿಜಯದಾಸರಾಗಿ ಅವತರಿಸಿ ಬಂದಿರುವುದು ತಿಳಿದುಬರುತ್ತದೆ.

ಮಾನವೀ ತಾಲೂಕಿಗೆ ಸೇರಿದ ಚೀಕಲಪರವಿ ಗ್ರಾಮದಲ್ಲಿ ಸುಮಾರು 18ನೆಯ ಶತಮಾನದಲ್ಲಿ ಶ್ರೀನಿವಾಸಪ್ಪ, ಕೂಸಮ್ಮ ಎಂಬ ಸದ್ವೈಷ್ಣವ ದಂಪತಿಗಳಿದ್ದರು. ಇವರ ಭಕ್ತಿ ಭಾವಕ್ಕೆ ಮೆಚ್ಚಿ ಶ್ರೀಅಶ್ವತ್ಥನಾರಾಯಣನು ಒಂದು ಗಂಡು ಶಿಶುವನ್ನು ದಯಪಾಲಿಸಿದನು. ಆ ಶಿಶುವಿಗೆ "ದಾಸಪ್ಪ"ನೆಂದು ನಾಮಕರಣ ಮಾಡಿದರು.ಇವರೇ ಭೃಗುಋಷಿಗಳ ಅಂಶಸಂಭೂತರಾದ "ವಿಜಯದಾಸರು".

ಇವರು ಬಾಲ್ಯದಲ್ಲಿ ತುಂಬಾ ಬಡತನವನ್ನು ಅನುಭವಿಸಿದರು. ಬಡತನದ ಬೇಗೆಯಲ್ಲಿ ಬೆಂದು ಜನರು ಮಾಡುವ ಅವಮಾನವನ್ನು ಸಹಿಸಲಾರದೇ ಚಿಕ್ಕಂದಿನಲ್ಲಿಯೇ ಮನೆ ಬಿಟ್ಟು ಕಾಶಿಗೆ ಬಂದು ಆ ಪುಣ್ಯಕ್ಷೇತ್ರದಲ್ಲಿ ಅನೇಕ ಸಾಧುಸಜ್ಜನರ ಸಹವಾಸದಲ್ಲಿದ್ದು, ಗಂಗೆಯಲ್ಲಿ ಮಿಂದು ಕೆಲವು ದಿನಗಳ ತರುವಾಯ ತಮ್ಮ ಊರಿಗೆ ಬಂದು ನೆಲೆಸಿದರು. ಅರಳಮ್ಮ ಕನ್ಯೆಯೊಡನೆ ಇವರ ವಿವಾಹ ನೆರವೇರಿತು. ನಾಲ್ಕು ವರ್ಷಗಳಕಾಲ ಗೃಹಸ್ಥ ಜೀವನವನ್ನು ನಡೆಸಿ ಸಂಸಾರದಲ್ಲಿ ಸುಖವಿಲ್ಲೆಂದು ತಿಳಿದು ಮತ್ತೆ ಕಾಶಿಗೆ ಪ್ರಯಾಣ ಬೆಳೆಸಿದರು.

ಒಂದೆರಡು ವರ್ಷ ಕಾಶಿಯಲ್ಲಿದ್ದು ಶ್ರೀಹರಿಯಧ್ಯಾನದಲ್ಲಿ ನಿರತರಾಗಿ ಕಾಲ ಕಳೆಯುತ್ತಿದ್ದರು. ಒಂದುದಿನ ರಾತ್ರಿ ಸ್ವಪ್ನದಲ್ಲಿ ಶ್ರೀಹರಿಯು ಪುರಂದರದಾಸರ ರೂಪದಿಂದ ಬಂದು ಇವರನ್ನು ಗಂಗೆಯ ಆಚೆಯ ದಡದಲ್ಲಿರುವ "ವ್ಯಾಸಕಾಶಿ"ಗೆ ಕರೆದೊಯ್ದನು. ವೇದವ್ಯಾಸದೇವರ ದರ್ಶನ ಮಾಡಿಸಿದನು. ದಾಸಪ್ಪನು ನಮಸ್ಕಾರ ಮಾಡಿ ಕೈಜೋಡಿಸಿ ನಿಂತನು. ಆಗ ಪುರಂದರದಾಸರೂಪೀ ಶ್ರೀಹರಿಯು ದಾಸಪ್ಪನ ಸಕಲ ಸಂಚಿತಾಗಾಮಿ ಪಾಪರಾಶಿಯನ್ನು ಕಳೆದು, ಪರಿಶುದ್ಧನಾದ ದಾಸಪ್ಪನಿಗೆ ತೈತ್ತರೀಯ ಉಪನಿಷತ್ತಿನಲ್ಲಿ ಹೇಳಿದಂತೆ ಶಾಂತಿ ಮಂತ್ರಪೂರ್ವಕ ಮಂತ್ರೋಪದೇಶವನ್ನು ಮಾಡಿದನು. ದಾಸಪ್ಪನ ನಾಲಿಗೆಯ ಮೇಲೆ "ವಿಜಯ" ಎಂಬ ಬೀಜಾಕ್ಷರವನ್ನು ಬರೆದು "ವಿಜಯವಿಠ್ಠಲ" ಎಂಬ ಅಂಕಿತವನ್ನು ಪ್ರದಾನ ಮಾಡಿದನು. "ನಿನ್ನನ್ನು ಸೇವೆ ಮಾಡಿ ನಂಬಿದ ಜನರು ಸದ್ಗತಿಯನ್ನೈದಲಿ" ಎಂದು ಮುಂತಾದ ಅನೇಕ ಸದ್ವಾಕ್ಯಗಳಿಂದ, ಸದ್‍ವರಗಳಿಂದ ಸಂತೈಸಿ ಅನುಗ್ರಹಿಸಿದನು. ಗುರ್ವನುಗ್ರಹವಾದೊಡನೆಯೇ ದಾಸಪ್ಪನು ವಿಜಯದಾಸರಾಗಿ ಪುಳಕಾಂಕಿತರಾಗಿ ಶ್ರೀಹರಿಯನ್ನು ನತಿಸಿ ಸ್ತುತಿಸಿದರು. ತಮ್ಮ ಹೃದಯದಲ್ಲಿ ಬಿಂಬರೂಪೀ ಹರಿಯ ಸಂದರ್ಶನವನ್ನು ಪಡೆದು ಆನಂದಿತರಾದರು.

Rarest Archiver

ಶ್ರೀ ವಿಜಯದಾಸರಿಗೆ ಲೋಕದಲ್ಲಿ ವಿಜಯವಾಗುತ್ತ ಬಂತು "ಪರಶು ಸೋಂಕಲು ಲೋಹ ಚಿನ್ನವಾದಂತೆ" "ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ" ಉಕ್ತಿಯಂತೆ ಕೆಲವೇ ದಿನಗಳಲ್ಲಿ ಇವರಿಗೆ ಎಷ್ಟೋ ಜನ ಶಿಷ್ಯರಾದರು. ಹೋದ ಹೋದಲೆಲ್ಲ ಮೃಷ್ಟಾನ್ನ ಭೋಜನ, ಸತ್ಕಾರಗಳು ನಡೆಯತೊಡಗಿದವು. ಆಗ ದಾಸರು

ನಿನ್ನ ಒಲುಮೆಯಿಂದ । ನಿಖಿಳ ಜನರುಬಂದು ।
ಮನ್ನಿಸುವರೋ ಮಹಾರಾಯ।
ಎನ್ನ ಪುಣ್ಯಗಳಿಂದ ಈ ಪರಿ ಉಂಟೇನೋ
ನಿನ್ನದೇ ಸಕಲ ಸಂಪತ್ತು ॥ಪ॥

ಎಂಬುದಾಗಿ ಹಾಡಿ ಎಲ್ಲವನ್ನು ಆ ಭಗವಂತನಿಗೆ ಸಮರ್ಪಣೆ ಮಾಡುತ್ತ ನಡೆದರು. ಹರಿದಾಸ ಸಾಹಿತ್ಯ ಪರಂಪರೆಯಂತೆ ಶ್ರೀ ವಿಜಯದಾಸರೂ ಕೂಡ ಅನೇಕ ಪದ, ಸುಳಾದಿಗಳನ್ನು ಉಗಾಭೋಗಗಳನ್ನು ರಚಿಸಿ ಮಧ್ವಮತದ ತತ್ವಸಾರಗಳನ್ನು, ಮಾನವೀಯ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ತಿಳಿಸಿಕೊಟ್ಟಿದ್ದಾರೆ. ಇವರ ಸಾಹಿತ್ಯದಲ್ಲಿ ಸಮಾಧಿ ಗುಹ್ಯ ದರ್ಶನಗಳೆಂಬ ಭಾಷಾತ್ರಯಗಳನ್ನು ಕಾಣಬಹುದು. ಜಾನಪದ ಸಾಹಿತ್ಯ ಪ್ರಯೋಗಗಳೂ ಕಂಡು ಬರುತ್ತವೆ. ದಾಸ ಸಾಹಿತ್ಯದಲ್ಲಿ ಇವರ ಸುಳಾದಿಗಳು ವಿಪುಲವಾಗಿವೆ. ಇವರಿಗೆ "ಸುಳಾದಿದಾಸ"ರೆಂದೇ ಕರೆಯುವುದು ವಾಡಿಕೆ.

ಭರತಖಂಡದ ಉದ್ದಗಲಕ್ಕೂ ಸಂಚಾರ ಮಾಡಿದ ಶ್ರೀ ವಿಜಯದಾಸರು ವ್ಯಕ್ತಿಗಳಿಗೆ ಸಮಾಜಕ್ಕೆ ಸುಖೀಬಾಳಿನ ಮರ್ಮವನ್ನೂ, ನಿಜಸುಖದ ಸಾಧನವನ್ನು ತೋರಿ ಮಾರ್ಗದರ್ಶನಗೈದಿದ್ದಾರೆ. ಅವರ ಈ ಉಪಕಾರಕ್ಕೆ ನಾವು "ಭೂಯಿಷ್ಠಾಂತೇ ನಮ ಉಕ್ತಿಂವಿಧೇಮ" ಎಂದು ಹೇಳಬೇಕಷ್ಟೇ !

ಕ್ರಿ.ಶ. 1682 ರಲ್ಲಿ ಅವತರಿಸಿದ ಶ್ರೀ ವಿಜಯದಾಸರು 73 ವರ್ಷಗಳ ಕಾಲ ಸಾರ್ಥಕ ಜೀವನ ನಡೆಸಿ, ಜನರ ಜೀವನವನ್ನು, ಬಾಳನ್ನು ಬೆಳಗಿಸಿ ಕ್ರಿ.ಶ.1755ರ ಕಾರ್ತಿಕ ಶು॥ ದಶಮಿಯ ಶುಭದಿನದಲ್ಲಿ ಭಾಸ್ಕರ ಕ್ಷೇತ್ರವೆನಿಸುವ "ಚಿಪ್ಪಗಿರಿ"ಯಿಂದ ಹರಿಪುರಕ್ಕೆ ತೆರಳಿದರು.

ನಿಜ ವಿಜಯರಾಯ ಸಿರಿ । ವಿಜಯ ವಿಠ್ಠಲನ ಪ್ರಿಯ
ಭಜಕರಿಗೆ ಭಾಗ್ಯೋದಯ ॥ ಎಂಬುದಾಗಿ ಶ್ರೀಬಾದರಾಯಣವಿಠ್ಠಲರು

ಶ್ರೀ ವಿಜಯದಾಸರನ್ನು ಕೊಂಡಾಡಿದ್ದಾರೆ. ಇದು ತ್ರಿಕಾಲಕ್ಕೂ ಸತ್ಯ ಸತ್ಯ. "ಸ್ಮರಿಸಿ ಬದುಕಿರೋ, ದಿವ್ಯಚರಣಕೆರಗಿರೋ" ಎಂಬ ನಕ್ಷತ್ರಮಾಲಿಕಾ ಸ್ತೋತ್ರವನ್ನು "ವ್ಯಾಸವಿಠಲಾಂಕಿತ" ರಾದ ಕಲ್ಲೂರು ಸುಬ್ಬಣ್ಣಾಚಾರ್ಯರು ರಚಿಸಿ– ಶ್ರೀ ವಿಜಯದಾಸರ ಅಗಮ್ಯ ಮಹಿಮೆಯನ್ನು ತಿಳಿಸಿಕೊಟ್ಟಿದ್ದಾರೆ. ಇದರ ಪಠಣ, ಪಾರಾಯಣಾದಿಗಳಿಂದ ಜ್ಞಾನ, ಭಕ್ತಿ, ವೈರಾಗ್ಯಾದಿಗಳು ಸಜ್ಜನರಿಗೆ ದೊರಕುವದು ನಿಶ್ಚಿತವೆಂದು ಜ್ಞಾನಿಗಳು ಹೇಳುತ್ತಾರೆ, ಹಾಗೆ ಅನೇಕ ಭಕ್ತರ ಅನುಭವವೂ ಇದೆ.

****

Rarest Archiver

ಸುಳಾದಿ ಸಾಹಿತ್ಯ - ಪರಿಚಯ

ನಮ್ಮ ಹರಿದಾಸರು ರಚಿಸಿದ ಕೀರ್ತನೆಗಳು ಸಂಗೀತ ಪ್ರಧಾನವಾದವುಗಳು. ಇವರಿಂದ ರಚಿತವಾದ ಕನ್ನಡ ಹರಿದಾಸ ಸಾಹಿತ್ಯದಲ್ಲಿ ಎರಡು ಪ್ರಕಾರದ ಕೀರ್ತನೆಗಳನ್ನು ನಾವು ಕಾಣುತ್ತೇವೆ.

1) ಮೊದಲನೆಯ ಪ್ರಕಾರದಲ್ಲಿ - ಉಗಾಭೋಗ, ಸುಳಾದಿ, ಕೀರ್ತನೆ. ವೃತ್ತನಾಮ ಇತ್ಯಾದಿಗಳು ಮುಖ್ಯವಾಗಿವೆ.
2) ಎರಡನೆಯ ಪ್ರಕಾರದಲ್ಲಿ-ಕೆಲವು ಅಂಶಗಣಪ್ರಧಾನ, ಕೆಲವು ಮಾತ್ರಾಗಣ ಪ್ರಧಾನವಾದ ಕೀರ್ತನೆಗಳು.

ತ್ರಿಪದಿ, ಸಾಂಗತ್ಯ ಇವು ಅಂಶಗಣದಲ್ಲಿ ಸೇರುತ್ತವೆ. ಶರಷಟ್ಪದಿ, ಭೋಗಷಟ್ಪದಿ, ಭಾಮಿನೀಷಟ್ಪದಿ, ವಾರ್ಧಕಷಟ್ಪದಿ, ಕುಸುಮಷಟ್ಪದಿ, ಪರಿವರ್ಧಿನೀಷಟ್ಪದಿ ಇವು ಮಾತ್ರಾಗಣದಲ್ಲಿ ಸೇರುತ್ತವೆ. ಇವುಗಳಲ್ಲದೇ ಶ್ರೀಶ್ರೀಪಾದರಾಜರು ರಚಿಸಿದ "ದಂಡಕ" ಹಾಗೂ ಶ್ರೀ ಮೋಹನದಾಸರು ರಚಿಸಿದ ಕೋಲುಹಾಡು ಇವು ವಿಶಿಷ್ಟರಚನೆಗಳೆನಿಸಿವೆ.

"ಸುಳಾದಿ" ಎಂಬುದು ಸಂಗೀತದ ಪಾರಿಭಾಷಿಕ ಶಬ್ದವಾಗಿದೆ. ಇದನ್ನು "ತಾಳಗಳಮಾಲಿಕೆ" ಎನ್ನಬಹುದು. ಸಾಮಾನ್ಯವಾಗಿ ಐದು ವಿವಿಧ ತಾಳಗಳಲ್ಲಿ ಒಂದೊಂದು ನುಡಿ ರಚನೆಯಾಗಿ ಕೊನೆಯಲ್ಲಿ ಎರಡು ಸಾಲುಗಳ ಜತೆ/ಜೊತೆ ಎಂಬುದು ಇರುತ್ತದೆ. ಪ್ರತಿಯೊಂದು ನುಡಿಯ ಕೊನೆಗೆ ಹರಿದಾಸರ ಅಂಕಿತವಿರುತ್ತದೆ. ಸುಳಾದಿಗಳಲ್ಲಿ ಸಾಮಾನ್ಯವಾಗಿ ಐದು ನುಡಿಗಳಿರುವದನ್ನು ಕಾಣಬಹುದಾದರೂ ಏಳು, ಒಂಭತ್ತು, ಹನ್ನೆರಡು ನುಡಿಗಳಿರುವ ಸುಳಾದಿಗಳೂ ಉಂಟು ಏಳು ನುಡಿಗಳನ್ನು ಮೀರಿದ ಸಂದರ್ಭದಲ್ಲಿ ತಾಳಗಳು ಪುನರಾವೃತ್ತಿಗೊಳ್ಳುತ್ತವೆ. ಈ ಎಲ್ಲ ನುಡಿಗಳನ್ನು ಒಂದೇ ರಾಗದಲ್ಲಿ ಹಾಡಬೇಕು. ಸಾಮಾನ್ಯವಾಗಿ ರಾಗ, ತಾಳಗಳ ನಿರ್ದೇಶನ ಇರುತ್ತದೆ.

ಸುಳಾದಿಗಳಲ್ಲಿ ಕಥೆ, ತತ್ವ, ಪ್ರಮೇಯ, ಚರಿತ್ರೆ ಇತ್ಯಾದಿ ವಿಷಯ ನಿರೂಪಣೆಯನ್ನು ನಾವು ಕಾಣಬಹುದಾಗಿದೆ.

ಗೇಯತೆಯ ಕೊರತೆಯನ್ನು, ಗದ್ಯತೆಯ ಮೇಲ್ಮೆಯನ್ನು ಸುಳಾದಿಗಳಲ್ಲಿ ಗುರುತಿಸಬಹುದಾಗಿದೆ ಆದರೂ ಇವು ಸಂಗೀತ ಬದ್ಧರಚನೆಗಳೇ ಆಗಿವೆಯೆಂಬುದು ನಿರ್ವಿವಾದ ಸಂಗತಿಯಾಗಿದೆ. ಸುಳಾದಿಗಳಲ್ಲಿ ಆದಿಪ್ರಾಸವನ್ನು ರಕ್ಷಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಇದು ನುಡಿ ಬದಲಾದಂತೆ ಬದಲಾಗುವದೂ ಉಂಟು.

ಸೂಡ ಶಬ್ದವು ಸಂಸ್ಕೃತದ "ಶುದ್ಧ" ಶಬ್ದದ ಅಪಭ್ರಂಶವಾಗಿದೆ. ಇದೇ ಶಬ್ದವು "ಸೂದ" ಎಂದು ಹಿಂದುಸ್ಥಾನಿ ಸಂಗೀತದಲ್ಲಿ ಪ್ರಚಾರದಲ್ಲಿದೆ. ಉದಾ: ಸೂದ ಕಲ್ಯಾಣ, ಸೂದ ಸಾರಂಗ, ಇತ್ಯಾದಿ ರಾಗಗಳ ಹೆಸರುಗಳು ಆ ಹೆಸರಿನ ಶುದ್ಧರಾಗಗಳೆಂದು ಅರ್ಥವಾಗುತ್ತದೆ.

Rarest Archiver

"ಸೂಡಾದಿ" ಪದದ ಪರ್ಯಾಯ ಶಬ್ದವೇ "ಸುಳಾದಿ" ಎಂದಾಗಿ ಹೇಳುವದುಂಟು ಈ ಸುಳಾದಿಗಳ ಲಕ್ಷಣವನ್ನು ಪುಂಡರೀಕ ವಿಠಲನು ಹೀಗೆ ತಿಳಿಸಿದ್ದಾನೆ.

ಧ್ರುವಕೋ ಮಂಠಕಶ್ಚೈವ ರೂಪಕೋ ಝಂಪಕಸ್ತಥಾ ।
ತ್ರಿಪುಟಶ್ಚಾಡ್ಡತಾಲಾಖ್ಯ ಶ್ಚೈಕತಾಲ ಇತಿ ಕ್ರಮಾತ್॥
ಸಪ್ತಡೂಡಾದಿರಿತ್ಯುಕ್ತೋ ಲಕ್ಷ್ಯ ಲಕ್ಷಣ ಕೋವಿದೈಃ ॥ (ನರ್ತನ ನಿರ್ಣಯ)

1) ಧ್ರುವ 2) ಮಂಠ 3) ರೂಪಕ 4) ಝಂಪಕ 5) ತ್ರಿಪುಟ 6) ಅಡ್ಡತಾಲ 7) ಏಕತಾಲ ಇವು ಕ್ರಮವಾಗಿ ಬರಬೇಕೆಂಬ ನಿರ್ಬಂಧವೂ ಇದೆ. ಇವುಗಳ ಕೊನೆಯಲ್ಲಿ ಜತೆ ಅಥವಾ ಜೊತೆ ಇರುವುದುಂಟು–ಇದು ಸುಳಾದಿಯ ಸಾರಸಂಗ್ರಹವಾಗಿರುತ್ತದೆ.

ಪುಂಡರೀಕವಿಠಲನ ನಂತರ ಈ ಲಕ್ಷಣವನ್ನು ವೆಂಕಟಮುಖಿಯು ತನ್ನ ಚತುರ್ದಂಡಿ ಪ್ರಕಾಶಿಕೆಯಲ್ಲೂ, ತುಳಾಜಿ ಮಹಾರಾಜನು ತನ್ನ "ಸಂಗೀತ ಸಾರಾಮೃತ" ದಲ್ಲಿಯೂ ಉಲ್ಲೇಖಿಸಿರುತ್ತಾರೆ.

ಇತಿ ಸಾಲಗ ಸೂಡಸ್ಥ ಗೀತಾನಾಂ ಲಿಕ್ಷ್ಯಕೀರ್ತನಂ
ಶ್ರೀ ಪುರಂದರದಾಸಾದ್ಯೈರಭಿಯುಕ್ತೈಃ ಪುರಾತನೈಃ ॥
ಪ್ರಯುಕ್ತೇಷು ಪ್ರಸಿದ್ಧೇಷು ಲಕ್ಷೇಷು ವಿವಿಧೇಷ್ವಪಿ।
ಧ್ರುವಾದಿಷು ತ್ವದುಕ್ತಾನಿ ಲಕ್ಷಣಾನಿ ಮಹಾಮತೇ॥.

"ಸಂಗೀತ ಸಂಪ್ರದಾಯ ಪ್ರದರ್ಶಿನಿ"ಯ ಕರ್ತೃವಾದ ಸುಬ್ಬರಾಮ ದೀಕ್ಷಿತರು ತಮ್ಮ ಗ್ರಂಥದಲ್ಲಿ ಪುರಂದರದಾಸರ ಎರಡು ಸುಳಾದಿಗಳನ್ನು ಲಕ್ಷ್ಯವಾಗಿ ಉದಾಹರಿಸಿರುವರು. ಇವುಗಳನ್ನೆಲ್ಲ ಗಮನಿಸಿದಾಗ ಸುಳಾದಿಯ ಪ್ರಾಚೀನತೆ, ಅದರ ತಾಳಮಾಲಿಕೆಯ ನಿಯತತೆ ಮತ್ತು ಶ್ರೀ ಪುರಂದರದಾಸರ ಪ್ರಾಶಸ್ತ್ಯಗಳೆಲ್ಲ ಪ್ರಕಟವಾಗುತ್ತವೆ.

ಶ್ರೀ ಶ್ರೀಪಾದರಾಜರಿಂದ ಸುಳಾದಿ ಸಾಹಿತ್ಯವು ವಿಶೇಷವಾಗಿ ಜಾರಿಯಲ್ಲಿ ಬಂದಿತೆಂದು ತಿಳಿದುಬರುತ್ತದೆ. ನಂತರದ ದಾಸರಲ್ಲಿ ದ್ವಿತೀಯಘಟ್ಟದ ಶ್ರೀ ವಿಜಯದಾಸರಿಂದ ಇದು ಅಭಿವೃದ್ಧಿಯನ್ನು ಹೊಂದಿತು. ಇದರಿಂದಾಗಿ ಅವರಿಗೆ "ಸುಳಾದಿದಾಸರೆಂಬ" ಪ್ರಸಿದ್ಧಿಯು ಉಂಟಾಗಿತ್ತು. ಇವರಿಂದ "ಸುಳಾದಿ ಸಾಹಿತ್ಯ"ವು ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನವನ್ನು ಪಡೆದುಕೊಂಡಿತೆಂದರೆ ತಪ್ಪಾಗಲಿಕ್ಕಿಲ್ಲ.

****

Rarest Archiver

ಶ್ರೀ ವಿಜಯದಾಸಾರ್ಯವಿರಚಿತ
ಶ್ರೀನರಸಿಂಹದೇವರ ಸ್ತೋತ್ರಸುಳಾದಿ

ರಾಗ–ನಾಟಿ ಧ್ರುವತಾಳ

ವೀರಸಿಂಹನೆ ನಾರಸಿಂಹನೆ ದಯಪಾರಾ
ವಾರನೆ, ಭಯನಿವಾರಣ, ನಿರ್ಗುಣ
ಸಾರಿದವರ ಸಂಸಾರವೃಕ್ಷದ ಮೂಲ
ಬೇರರಿಸಿ ಕೀಳುವ ಬಿರುದು ಭಯಂಕರ
ಘೋರಾವತಾರ ಕರಾಳವದನ ಅ
ಘೋರ, ದುರಿತಸಂಹಾರ ಮಾಯಾಕಾರ
ಕ್ರೂರದೈತ್ಯರ ಶೋಕಕಾರಣ ಉದುಭವ
ಈರೇಳು ಭುವನ ಸಾಗರದೊಡಿಯ
ಆ ರೌದ್ರನಾಮ ವಿಜಯವಿಠ್ಠಲ ನರಸಿಂಗ
ವೀರರಸೋತ್ತುಂಗ ಕಾರುಣ್ಯಾಪಾಂಗ ॥1॥

ಮಟ್ಟತಾಳ.

ಮಗುವಿನ ರಕ್ಕಸನು ಹಗಲಿರುಳು ಬಿಡದೆ
ಹಗೆಯಿಂದಲಿ ಹೊಯ್ದು ನಗ ಪನ್ನಗ ವನಧಿ
ಗಗನ ಮಿಗಿಲಾದ ಅಗಣಿತ ಬಾಧಿಯಲಿ
ನೆಗದು ಒಗದು ಸಾವು ಬಗೆದು ಕೊಲ್ಲತಿರಲು–ಹೇ
ಜಗದ ವಲ್ಲಭನೆ ಸುಗುಣಾನಾದಿಗನೆ
ನಿಗಮವಂದಿತನೆ ಪೊಗಳಿದ ಭಕುತರ
ತಗಲಿ ತೊಲಗನೆಂದು ಮಿಗೆ ಕೂಗುತ್ತಿರಲು
ಯುಗಯುಗದೊಳು ದಯಾಳುಗಳ ದೇವರದೇವ
ಯುಗಾದಿಕೃತುನಾಮಾ ವಿಜಯವಿಠ್ಠಲ ಹೋಹೋ
ಯುಗಳ ಕರವ ಮುಗಿದು ಮಗುವು ಮೊರೆಯಿಡಲು ॥2॥

ರೂಪಕ ತಾಳ

ಕೇಳಿದಾಕ್ಷಣದಲ್ಲಿ ಲಾಲಿಸಿ ಭಕ್ತನ್ನ
ಮೌಳಿ ವೇಗದಲಿ ಪಾಲಿಸುವೆನೆಂದು
ತಾಳಿ ಸಂತೋಷವ ತೂಳಿ ತುಂಬಿದಂತೆ
ಮೂಲೋಕದ ಪತಿ ವಾಲಯದಿಂದ ಸು
ಸ್ಲೀಲ ದುರ್ಲಭನಾಮ ವಿಜಯವಿಠ್ಠಲ ಪಂಚ
ಮೌಳಿ ಮಾನವ ಕಂಭಸೀಳಿ ಮೂಡಿದ ದೇವ ॥3॥

Rarest Archiver

13

ಝಂಪೆ ತಾಳ

ಲಟಲಟಾ ಲಟಲಟಾ ಲಟಕಟಿಸಿ ವನಜಜಾಂಡ
ಕಟಹ ಪಟಪಟ ಪುಟುತ್ಕಟದಿ ಬಿಚ್ಚುತಿರಲು
ಪುಟಪುಟಾ ಪುಟನೆಗೆದು ಚೀರಿ ಹಾರುತ್ತ ಪ
ಲ್ಕಟ ಕಟಾ ಕಟ ಕಡಿದು ರೋಷದಿಂದ
ಮಿಟಿ ಮಿಟಿ ಮಿಟನೆ ರಕ್ತಾಕ್ಷಿಯಲ್ಲಿ ನೋಡಿ
ತಟಿತ್ಕೋಟಿ ಉದ್ಧಟಕೆ ಆರ್ಭಟವಾಗಿರಲು
ಕುಟಿಲರಹಿತ ವ್ಯಕ್ತ ವಿಜಯವಿಠ್ಠಲ ಶಕ್ತ
ದಿಟ ನಿಟಿಲನೇತ್ರ ಸುರಕಟಕ ಪರಿಪಾಲಾ ॥4॥

ತ್ರಿವಿಡಿತಾಳ

ಬೊಬ್ಬಿರಿಯೆ ವೀರಧ್ವನಿಯಿಂದ ತನಿಗಿಡಿ
ಹಬ್ಬಿ ಮುಂಚೋಣಿ ಉರಿ ಹೊಗರೆದ್ದು ಸುತ್ತೆ
ಉಬ್ಬಸ ರವಿಗಾಗೆ ಅಬ್ಧಿಜ ನಡುಗುತಿರೆ
ಅಬ್ಧಿಸಮುತ ಉಕ್ಕಿ ಹೊರಚೆಲ್ಲಿ ಬರುತಿರೆ
ಅಬುಜಭವಾದಿಗಳು ತಬ್ಬಿಬ್ಬುಗೊಂಡಾರಿ
ಅಬ್ಬರವೇನೆನುತ ನಭದ ಗೂಳೆಯು ತಗಿಯೇ
ಶಬ್ದ ತುಂಬಿತು ಅವ್ಯಾಕೃತಾಕಾಶ ಪರಿಯಂತ
ನಿಬ್ಬರ ತರುಗಿರಿಗಳು ಝುರ್ಝುರಿಸಲು
ಒಬ್ಬರಿಗೊಶವಲ್ಲದ ನಮ್ಮ ವಿಜಯವಿಠ್ಠಲ
ಇಬ್ಬಗೆಯಾಗಿ ಕಂಬದಿಂದ ಮೊರಮಟ್ಟಾ ॥5॥

ಅಟ್ಟತಾಳ

ಘುಡಘುಡಿಸುತ ಕೋಟಿಸಿಡಿಲು ಗಿರಿಗೆ ಬಂದು
ಹೊಡೆದಂತೆ ಚೀರಿ ಬೊಬ್ಬಿಡುತಲಿ ಲಂಘಿಸಿ
ಹಿಡಿದು ರಕ್ಕಸನ್ನ ಕೆಡಹಿ ಮುಡಿಯ ತುಡುಕಿ
ಪಡುವಗಡಲ ತಡಿಯ ತರಣಿಯ ನೋಡಿ
ಕಡುಕೋಪದಲಿ ಸದೆಬಡಿದು ರಕ್ಕಸನ
ಕೆಡಹಿ ನಿಡಿಗರುಳನು ಕೊರ
ಳಡಿಯಲ್ಲಿ ಧರಿಸಿದ ಸಡಗರದ ದೈವ
ಕಡುಗಲಿ ಭೂರ್ಭುವ ವಿಜಯವಿಠ್ಠಲ ಪಾ
ಲ್ಗಡಲೊಡಿಯ ಶರಣರ ವಡವೆ ವಡನೊಡನೆ ॥6॥

Rarest Archive

ಏಕತಾಳ (ಆದಿತಾಳ)

ಉರಿಮಸಗಿ ಚತುರ್ದಶಧರಣಿ ತಲ್ಲಣಿಸಲು
ಪರಮೇಷ್ಠಿ ಹರಸುರರು ಸಿರಿದೇವಿಗೆ ಮೊರೆಯಿಡಲು
ಕರುಣದಿಂದಲಿ ತನ್ನ ಶರಣನ್ನ ಸಹಿತ ನಿನ್ನ
ಚರಣಕ್ಕೆ ಯೆರಗಲು ಪರಮಶಾಂತನಾಗಿ
ಹರಹಿದೆ ದಯವನ್ನು ಸುರರು ಕುಸುಮ ವರುಷ
ಗರಿಯಲು ಭೇರಿವಾದ್ಯಮೊರೆವುತ್ತರರೆ ಎನುತ
ಪರಿಪರಿವಾಲಗ ವಿಸ್ತಾರದಿಂದ ಕೈಕೊಳ್ಳುತ್ತ
ಮೆರೆದು ಸುರರುಪದ್ರಹರಿಸಿ ಬಾಲಕನ ಕಾಯ್ದೆ
ಪರದೈವ ಗಭೀರಾತ್ಮ ವಿಜಯವಿಠ್ಠಲ ನಿನ್ನ
ಚರಿತೆ ದುಷ್ಟರಿಗೆ ಭೀಕರವೋ ಸಜ್ಜನಪಾಲಾ ॥7॥

ಜತೆ

ಪ್ರಹ್ಲಾದವರದ ಪ್ರಪನ್ನ ಕ್ಲೇಶಭಂಜನ್ನ
ಮಹಹವಿಷೆ ವಿಜಯವಿಠ್ಠಲ ನರಮೃಗವೇಷ ॥8॥

****

ಶ್ರೀವಿಜಯದಾಸಾರ್ಯ ವಿರಚಿತ
ಶ್ರೀಕಪಿಲದೇವರ ಸ್ತೋತ್ರಸುಳಾದಿ

ರಾಗ-ತೋಡಿ ಧ್ರುವತಾಳ

ಸಿದ್ಧಿದಾಯಕ ಶಿಷ್ಯಜನ ಪರಿಪಾಲ ಪರಮ
ಶುದ್ಧಾತ್ಮ ಸುಗುಣಸಾಂದ್ರ ಸುಖವಾರಿಧಿ
ನಿದ್ರಾರಹಿತ ಭದ್ರಾರಮಣ ನಿರ್ವಿಕಾರ
ಚಿದ್ದೇಹ ಸರ್ವಕಾಲ ಸುಂದರಸಾರ
ಪದ್ಮಸಂಭವ ಬಲಿಪ್ರಕ್ಷಾಲಿತಪಾದ, ಮಹ
ಹೃದ್ರೋಗನಾಶ, ವೈಕುಂಠವಾಸ
ವಿದ್ಯಾತೀತ ವಿಶ್ವನಾಟಕ ನಾರಾಯಣ
ವಿದ್ಯ ಉದ್ಧಾರಕ ಉದಧಿಸದನ
ಸಿದ್ಧಾದಿ ವಿನುತ ಸಂತತಪಾತಾಳವಾಸಿ

Rarest Archiver

ಬುದ್ಧಿವಿಶಾಲಮಹಿಮ ಪಾಪಹಾರಿ
ಖದ್ಯೋತವರ್ಣ ಸಕಲವ್ಯಾಪ್ತ ಆಕಾಶ ಅಮಿತ
ಬಂಧವಿಚ್ಛೇದ ನಾನಾರೂಪಾತ್ಮಕ
ಅದ್ವೈತಕಾಯ ಮಾಯಾರಮಣ ರಾಜೀವನೇತ್ರ
ಅದ್ವಯ ಅನಾದಿಪುರುಷ ಚಿತ್ರ
ಕರ್ದಮಮುನಿಸೂನು ವಿಜಯವಿಠ್ಠಲ ಕಪಿಲ
ನಿರ್ದೋಷ ಕರುಣಾಬ್ಧಿ ಸರ್ವರಾಧಾರಿ॥ ॥1॥

ಮಟ್ಟತಾಳ

ಆದಿಮನ್ವಂತರದಿ ಜನಿಸಿದ ಮಹದ್ದೈವ
ಆದಿಪರಬೊಮ್ಮ ಬೊಮ್ಮನಯ್ಯ ಜೀಯ
ಸಾಧುಜನರ ಪ್ರಿಯ ಸಂತತ ಮುನಿತಿಲಕ
ಬೋಧಶರೀರ ಭಕುತರ ಮನೋಹಾರಿ
ಮಾಧವ ಸಿರಿವಿಜಯವಿಠ್ಠಲ ವಿಮಲೇಶ
ಮೋದಮತಿಯ ಕೊಡುವ ಕಪಿಲ ಭಗವನ್ಮೂರ್ತಿ॥ ॥2॥

ತ್ರಿವಿಡಿತಾಳ

ಘನಮಹಿಮ ಗೌಣಾಂಡದೊಳಗೆ ಲೀಲೆಯಿಂದ
ಜನಿಸಿ ಮೆರೆದೆ ಬಿಂದುಸರೋವರದಲ್ಲಿ
ಮಿನುಗುವ ದ್ವಯ ಹಸ್ತ ಅಪ್ರಾಕೃತಕಾಯ
ಇನನಂತೆ ಒಪ್ಪುವ ಶಿರೋರುಹವೋ
ಕನಕಪುತ್ಥಳಿಯಂತೆ ಕಾಂತಿ ತ್ರಿಭುವನಕ್ಕೆ
ಅನವರತ ತುಂಬಿ ಸೂಸುತಲಿದಕೋ
ಜನನಿದೇವಹೂತಿಗೆ ಉಪದೇಶವನು ಮಾಡಿ
ಗುಣ ಮೊದಲಾದ ತತ್ವವ ತಿಳಿಸಿದೆ.
ತನುವಿನೊಳಗೆ ನೀನೆ ತಿಳಿದು ನಿತ್ಯದಲ್ಲಿ
ಜನರನ್ನು ಪಾಲಿಸುವ ಕಪಿಲಾಖ್ಯನೆ
ಅನುದಿನ ನಿನ್ನ ಧ್ಯಾನವಮಾಡಿ ಮಣಿಯಿಂದ
ಎಣಿಸುವ ಸುಜನಕ್ಕೆ ಜ್ಞಾನ ಕೊಡುವೆ.
ಎಣೆಗಾಣೆ ನಿನ್ನ ಲೋಚನದ ಶಕ್ತಿಗೆ ಸಗರ
ಜನಪನಂದರನ್ನು ಭಂಗಿಸಿದೆ
ಅನುಮಾನವಿದಕಿಲ್ಲ ನಿನ್ನ ನಂಬಿದ ಮೂಢ
ಮನುಜನಿಗೆ ಮಹಪದವಿ ಬರುವುದಯ್ಯ
ಮುನಿಕುಲೋತ್ತಮ ಕಪಿಲ ವಿಜಯವಿಠ್ಠಲರೇಯ
ಎನಗೆ ಯೋಗಮಾರ್ಗವ ತೋರು ತವಕದಿಂದ ॥ ॥3॥

Rarest Archiver

ಅಟ್ಟತಾಳ

ಕಪಿಲ ಕಪಿಲಯೆಂದು ಪ್ರಾತಃಕಾಲದಲೆದ್ದು
ಸಪುತಸಾರಿ ನಾಲಿಗೆಲಿ ನುಡಿದ ಮಾನವನಿಗೆ
ಅಪಜಯ ಮೊದಲಾದ ಕ್ಲೇಶಗಳೊಂದಿಲ್ಲ
ಅಪರಿಮಿತ ಸೌಖ್ಯ ಅವನ ಕುಲಕೋಟಿಗೆ
ಗುಪುತನಾಮವಿದು ಮನದೊಳಗಿಡುವುದು
ಕಪಟಜೀವರು ಈತನು ಒಬ್ಬ ಋಷಿಯೆಂದು
ತಪಿಸುವರು ಕಾಣೋ ನಿತ್ಯನರಕದಲ್ಲಿ
ಕೃಪಣವತ್ಸಲ ನಮ್ಮ ವಿಜಯವಿಠ್ಠಲರೇಯ
ಕಪಿಲಾವತಾರನು ಬಲ್ಲವಗೆ ಬಲುಸುಲಭ ॥4॥

ಆದಿತಾಳ

ಬಲಹಸ್ತದಲ್ಲಿ, ಯಜ್ಞಶಾಲೆಯಲ್ಲಿ ಕಂ
ಗಳ ಕಪ್ಪಿನಲ್ಲಿ ಹೃದಯಸ್ಥಾನ, ನಾಭಿಯಲ್ಲಿ
ಜಲಧಿ ಗಂಗಾಸಂಗಮದಲ್ಲಿ ಗಮನದಲ್ಲಿ
ತುಲಸಿ ಪತ್ರದಲ್ಲಿ,ತುರುಗ, ತುರುವಿನಲ್ಲಿ
ಮಲಗುವ ಮನೆಯಲ್ಲಿ, ನೈವೇದ್ಯ ಸಮಯದಲ್ಲಿ
ಬಲುಕರ್ಮಬಂಧಗಳು ಮೋಚನವಾಗುವಲ್ಲಿ
ಚೆಲುವನಾದವನಲ್ಲಿ, ವಿದ್ಯೆ ಪೇಳುವನಲ್ಲಿ
ಫಲದಲ್ಲಿ, ಪ್ರತಿಕೂಲವಿಲ್ಲದ ಸ್ಥಳದಲ್ಲಿ,
ಬೆಳೆದ ದರ್ಭೆಗಳಲ್ಲಿ ಅಗ್ನಿಯಲ್ಲಿ ಹರಿವ
ಜಲದಲ್ಲಿ ಜಾಂಬುನದ ನದಿಯಲ್ಲಿ, ಶ್ಲೋಕದಲ್ಲಿ
ಬಲಿಮುಖ ಬಳಗದಲ್ಲಿ ಆಚಾರಶೀಲನಲ್ಲಿ
ಫಳಿಗೆ ಆರಂಭದಲ್ಲಿ ಪಶ್ಚಿಮ ಭಾಗದಲ್ಲಿ
ಪೊಳೆವ ಮಿಂಚಿನಲ್ಲಿ ಬಂಗಾರದಲ್ಲಿ ಇನಿತು
ಕಾಲಕಾಲಕ್ಕೆ ಬಿಡದೆ ಸ್ಮರಿಸು ಕಪಿಲರೂಪಾತ್ಮನ್ನ
ಗೆಲುವುಂಟು ನಿನಗೆಲವೋ ಸಂಸಾರದಿಂದ ವೇಗ
ಕಲಿಯುಗದೊಳಗಿದೆ ಕೊಂಡಾಡಿದವರಿಗೆ
ಖಳರ ಅಂಜಿಕೆಯಿಲ್ಲ ನಿಂದಲ್ಲೆ ಶುಭಯೋಗ
ಬಲವೈರಿನುತ ನಮ್ಮ ವಿಜಯವಿಠ್ಠಲರೇಯ
ಇಳೆಯೊಳು ಕಪಿಲನಾಗಿ ನಮ್ಮ ಭಾರವೊಹಿಸುವ ॥ ॥5॥

ಜತೆ

ತಮಪರಿಚ್ಛೇದ ಈತನ ಸ್ಮರಣೆ, ನೋಡು ಹೃ
ತ್ಕಮಲದೊಳಗೆ ವಿಜಯವಿಠ್ಠಲನ್ನ ಚರಣಾಬ್ಜ ॥ ॥6॥

Rarest Archive

ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀಧನ್ವಂತ್ರಿದೇವರ ಸ್ತೋತ್ರಸುಳಾದಿ

ರಾಗ–ಭೈರವಿ ಧ್ರುವತಾಳ

ಆಯುವೃದ್ಧಿಯಾಗೋದು ಶ್ರೇಯಸ್ಸು ಬರುವದು
ಕಾಯ ನಿರ್ಮಲಿನ ಕಾರಣವಾಹುದೋ
ಮಾಯ ಹಿಂದಾಗುವದು, ನಾನಾರೋಗದ ಬೀಜ
ಬೇಯಸಿ ಕಳೆವದು ವೇಗದಿಂದ
ನಾಯಿ ಮೊದಲಾದ ಕುತ್ಸಿತ ದೇಹ ನಿ
ಕಾಯವ ತೆತ್ತು ದುಷ್ಕರ್ಮದಿಂದ
ಕ್ರಿಯಮಾಣ ಸಂಚಿತಭರಿತವಾಗಿದ್ದ ದುಃಖ
ಹೇಯಸಾಗರದೊಳು ಬಿದ್ದು ಬಳಲಿ
ನೋಯಿಸಿಕೊಂಡು ನೆಲೆಕಾಣದೆ ಒಮ್ಮೆ ತನ್ನ
ಬಾಯಲಿ ವೈದ್ಯಮೂರ್ತಿ ಶ್ರೀಧನ್ವಂತ್ರಿ
ರಾಯ ರಾಜೌಷಧಿನಿಯಾಮಕ ಕರ್ತ
ಶ್ರೀಯರಸನೆಂದು ತುತಿಸಲಾಗಿ
ತಾಯಿಪೊದಗಿಬಂದು ಬಾಲನ್ನ ಸಾಕಿದಂತೆ
ನೋಯಗೊಡದೆ ನಮ್ಮನ್ನು ಪಾಲಿಪ
ಧ್ಯೇಯ ದೇವಾದಿಗಳಿಗೆ ಧರ್ಮಜ್ಞ ಗುಣಸಾಂದ್ರ
ಶ್ರೇಯಸ್ಸು ಕೊಡುವನು ಭಜಕರಿಗೆ
ಮಾಯಾಮಂತ್ರದಿಂದ ಜಗವೆಲ್ಲ ವ್ಯಾಪಿಸಿ ಸ
ನ್ಯಾಯವಂತನಾಗಿ ಚೇಷ್ಟೆ ಮಾಳ್ಪ
ವಾಯುವಂದಿತ ನಿತ್ಯ ವಿಜಯವಿಠ್ಠಲರೇಯ
ಪ್ರೀಯನು ಕಾಣೋ ನಮಗೆ ಅನಾದಿರೋಗಕಳೆವ ॥ ॥1॥

ಮಟ್ಟತಾಳ

ಧನ್ವಂತ್ರಿ ಶ್ರೀಧನ್ವಂತ್ರಿ ಎಂದು
ಸನ್ನುತಿಸಿ ಸತತ ಭಿನ್ನಜ್ಞಾನದಿಂದ
ನಿನ್ನವ ನಿನ್ನವನೆಂದು ಘನ್ನತಿಯಲಿ ನೆನೆವ
ಮನ್ನುಜ ಭುವನದೊಳು ಧನ್ಯನು ಧನ್ಯವೆನ್ನಿ
ಚನ್ನಮೂರುತಿ ಸುಪ್ರಸನ್ನ ವಿಜಯವಿಠ್ಠ
ಲನ್ನ ಸತ್ಯವೆಂದು ಬಣ್ಣಿಸು ಬಹುವಿಧದಿ ॥ ॥2॥

Rarest Archive

ತ್ರಿವಿಡಿತಾಳ

ಶಶಿಕುಲೋದ್ಭವ ದೀರ್ಘತಪನಂದನ ದೇವ
ಶಶಿವರ್ಣ ಪ್ರಕಾಶ ಪ್ರಭುವೆ ವಿಭುವೆ
ಶಶಿಮಂಡಲಸಂಸ್ಥಿತ ಕಲಶಕಲಶಪಾಣಿ
ಬಿಸಜಲೋಚನ ಆಶ್ವಿನೇಯ ವಂದ್ಯ
ಶಶಿಗರ್ಭ ಭೂರುಹ ಲತೆಪೊದೆ ತಾಪವೋ
ಡಿಸುವೌಷಧಿ ತುಲಸಿಜನಕ ವಸುದೇವ
ಅಸುರ ನಿರ್ಜರತತಿ ನೆರೆದು ಗಿರಿಯತಂದು
ಮಿಸುಕದಲೆ ಮಹೋದಧಿ ಮಥಿಸಲಾಗಿ
ನಸುನಗುತ ಪುಟ್ಟಿದೆ ಪೀಯೂಷ ಘಟ ಧರಿಸಿ
ಅಸಮದೈವನೆ ನಿನ್ನ ಮಹಿಮೆಗೆ ನಮೋ ನಮೋ
ಬಿಸಜಸಂಭವ ರುದ್ರ ಮೊದಲಾದ ದೇವತ
ಋಷಿನಿಕರ ನಿನ್ನ ಕೊಂಡಾಡುವರೋ
ದಶದಿಶಿಯೊಳು ಮೆರೆವ ವಿಜಯವಿಠ್ಠಲ ಭಿಷ್ಕ
ಅಸು ಇಂದ್ರಿಯಂಗಳ ರೋಗನಿವಾರಣ ॥ ॥3॥

ಅಟ್ಟತಾಳ

ಶರಣು ಶರಣು ಧನ್ವಂತರಿ ತಮೋಗುಣನಾಶ
ಶರಣು ಆರ್ತಜನ ಪರಿಪಾಲಕ ದೇವ
ತರುವೆ, ಭವತಾಪತರಣ ದಿತಿಸುತ
ಹರಣ, ಮೋಹಕಲೀಲಾ
ಪರಮಪೂರ್ಣಬ್ರಹ್ಮ ಬ್ರಹ್ಮ ಉದ್ಧಾರಕ
ಉರುಪರಾಕ್ರಮ ಉರಗಶಾಯಿ
ವರಕಿರೀಟ ಮಹಾಮಣಿ ಕುಂಡಲಕರ್ಣ
ಮಿರಗುವ ಹಸ್ತಕಂಕಣ ಹಾರಪದಕ
ಹೀರಕಾಂಚಿ ಪೀತಾಂಬರ ಚರಣಭೂಷ
ಸಿರಿವತ್ಸಲಾಂಛನ ವಿಜಯವಿಠ್ಠಲರೇಯ
ತರುಣಗಾತುರ ಜ್ಞಾನ ಮುದ್ರಾಂಕಿತ ಹಸ್ತ ॥ ॥4॥

ಆದಿತಾಳ

ಏಳುವಾಗಲಿ ಮತ್ತೆ ತಿರುಗಿ ತಿರುಗುವಾಗಲಿ
ಬೀಳುವಾಗಲಿ ನಿಂತು ಕುಳ್ಳಿರುವಾಗಲಿ
ಹೇಳುವಾಗಲಿ ಮಾತು ಕೇಳುವಾಗಲಿ ಕರೆದು

Rarest Archiver

ಪೇಳುವಾಗಲಿ ಪೋಗಿ ಸತ್ಕರ್ಮ ಮಾಡುವಾಗಲಿ
ಬಾಳುವಾಗಲಿ ಭೋಜನ ನಾನಾಷಡ್ರಸ ಸ
ಮ್ಮೇಳವಾಗಲಿ ಮೇಲು ಪುತ್ರಾದಿ ಒಡನೊಡನೆ
ಖೇಳವಾಗಲಿ ಮನುಜ ಮರಿಯದೆ ತನ್ನಯ
ನಾಲಿಗೆ ಕೊನೆಯಲ್ಲಿ ಧನ್ವಂತರಿ ಎಂದು ಒಮ್ಮೆ
ಕಾಲಾಕಾಲದಲ್ಲಿ ಸ್ಮರಿಸಿದರೆ ಅವಗೆ
ವೇಳೆ ವೇಳೆಗೆ ಬಹ ಭವಬೀಜ ಪರಿಹಾರ
ನೀಲಮೇಘಶ್ಯಾಮ ವಿಜಯವಿಠ್ಠಲರೇಯ
ಓಲಗಕೊಡುವನು ಮುಕ್ತರ ಸಂಗದಲಿ ॥ ॥5॥

ಜತೆ

ಧಂ ಧನ್ವಂತರಿ ಎಂದು ಪ್ರಣವಪೂರ್ವಕದಿಂದ
ವಂದಿಸಿ ನೆನೆಯಲು ವಿಜಯವಿಠ್ಠಲ ಒಲಿವ ॥ ॥6॥

****

ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀ ದುರ್ಗಾ ಸ್ತೋತ್ರಸುಳಾದಿ

ರಾಗ: ಭೈರವಿ **ಧ್ರುವತಾಳ**

ದುರ್ಗಾದುರ್ಗೆಯೆ ಮಹದುಷ್ಟಜನಸಂಹಾರೆ
ದುರ್ಗಾಂತರ್ಗತದುರ್ಗೆ ದುರ್ಲಭೆ ಸುಲಭೆ
ದುರ್ಗಮವಾಗಿದೆ ನಿನ್ನ ಮಹಿಮೆ ಬೊಮ್ಮ
ಭರ್ಗಾದಿಗಳಿಗೆಲ್ಲ ಗುಣಿಸಿದರು
ಸ್ವರ್ಗ ಭೂಮಿ ಪಾತಾಳ ಸಮಸ್ತವ್ಯಾಪುತ ದೇವಿ
ವರ್ಗಕ್ಕೆ ಮೀರಿದ ಬಲು ಸುಂದರೀ
ದುರ್ಗಣದವರ ಬಾಧೆ ಬಹಳವಾಗಿದೆ ತಾಯೆ
ದುರ್ಗತಿಹರೆ ನಾನು ಪೇಳುವುದೇನು
ದುರ್ಗಂಧವಾಗಿದೆ ಸಂಸೃತಿ ನೋಡಿದರೆ
ನಿರ್ಗಮನ ಕಾಣೆನಮ್ಮ, ಮಂಗಳಾಂಗೆ
ದುರ್ಗೆ, ಹೇದುರ್ಗೆ, ಮಹಾದುರ್ಗೆ, ಭೂ

Rarest Archives

ದುರ್ಗೆ, ವಿಷ್ಣುದುರ್ಗೆ, ದುರ್ಜಯ, ದುರ್ಧರ್ಷಶಕ್ತೆ
ದುರ್ಗಕಾನನ ಗಹನ ಪರ್ವತ ಘೋರಸರ್ಪ
ಗರ್ಗರ ಶಬ್ದ ವ್ಯಾಘ್ರಶರಭ ಮೃತ್ಯು
ವರ್ಗ ಭೂತಪ್ರೇತ ಪೈಶಾಚಿ ಮೊದಲಾದ
ದುರ್ಗಣ ಸಂಕಟ ಪ್ರಾಪ್ತವಾಗೆ ದುರ್ಗಾ
ದುರ್ಗೆ ಎಂದು ಉಚ್ಚಸ್ವರದಿಂದ
ನಿರ್ಗಳಿತನಾಗಿ ಒಮ್ಮೆ ಕೂಗಿದರು ಸ್ವರ್ಗಾಪ
ವರ್ಗದಲ್ಲಿ ಹರಿಯೊಡನೆ ಇದ್ದರು, ಸು
ರರ್ಗಣ ಜಯಜಯವೆಂದು ಪೊಗಳುತಿರೆ
ಕರ್ಗಳಿಂದಲಿ ಎತ್ತಿ ಸಾಕುವ ಸಾಕ್ಷಿಭೂತೆ
ನೀರ್ಗುಡಿದಂತೆ ಲೋಕಲೀಲೆ ನಿನಗೆ
ಸ್ವರ್ಗಂಗಾಜನಕ ನಮ್ಮ ವಿಜಯ ವಿಠ್ಠಲನಂಘ್ರಿ
ದುರ್ಗಾಶ್ರಯಮಾಡಿ ಬದುಕುವಂತೆ ಮಾಡು ॥ ॥1॥

ಮಟ್ಟತಾಳ

ಅರಿದರಾಂಕುಶ ಶಕ್ತಿ ಪರಶು ನೇಗಲಿ ಖಡ್ಗ
ಸರಸಿಜ ಗದೆ ಮುದ್ಗರ ಚಾಪ ಮಾರ್ಗಣ
ವರ ಅಭಯ ಮುಸಲ ಪರಿಪರಿ ಆಯುಧವ
ಧರಿಸಿ ಮೆರೆವ ಲಕುಮಿ, ಸರಸಿಜಭವ, ರುದ್ರ
ಸರುವ ದೇವತೆಗಳ ಕರುಣಾಪಾಂಗದಲ್ಲಿ ನಿರೀಕ್ಷಿಸಿ ಅ
ವರವರ ಸ್ವರೂಪಸುಖವ ಕೊಡುವ ಸಿರಿ ಭೂಮಿ ದುರ್ಗಾ
ಸರುವೋತ್ತಮ ನಮ್ಮ ವಿಜಯವಿಠ್ಠಲನಂಘ್ರಿ
ಪರಮಭಕುತಿಯಿಂದ ಸ್ಮರಿಸುವ ಜಗಜ್ಜನನಿ ॥ ॥2॥

ತ್ರಿವಿಡಿತಾಳ

ಸ್ತುತಿ ಮಾಡುವೆ ನಿನ್ನ ಕಾಳಿ ಮಹಾಕಾಳಿ ಉ
ನ್ನತಬಾಹು ಕರಾಳವದನೆ ಚಂದಿರಮುಖಿ
ಧೃತಿಶಾಂತಿ ಬಹುರೂಪೆ ರಾತ್ರಿ ರಾತ್ರಿಂಚರಣೆ
ಸ್ಥಿತಿಯೆ ನಿದ್ರಾ ಭದ್ರೆ ಭಕ್ತವತ್ಸಲೆ ಭವ್ಯೇ
ಚತುರಾಷ್ಟ ದ್ವಿಹಸ್ತೆ ಹಸ್ತಿ ಹಸ್ತಿಗಮನೆ ಅ
ದ್ಭುತ ಪ್ರಬಲೆ ಪ್ರವಾಸೆ ದುರ್ಗಾರಣ್ಯವಾಸೆ
ಕ್ಷಿತಿಭಾರಹರಣೆ ಕ್ಷೀರಾಬ್ಧಿತನಯೆ ಸ
ದ್ಗತಿ ಪ್ರದಾತೆ ಮಾಯಾ ಜಯೆ ಇಂದಿರೆ ರಮೆ

Rarest Archiver

ದಿತಿಜಾತನಿಗ್ರಹೆ, ನಿರ್ಧೂತಕಲ್ಮಷೆ,
ಪ್ರತಿಕೂಲಭೇದೆ, ಪೂರ್ಣಬೋಧೆ, ರೌದ್ರೆ
ಅತಿಶಯರಕ್ತ ಜಿಹ್ವಾಲೋಲೆ ಮಾಣಿಕ್ಯಮಾಲೆ
ಜಿತಕಾಮೆ , ಜನನಮರಣರಹಿತೆ, ಖ್ಯಾತೆ
ಘೃತಪಾತ್ರ ಪರಮಾನ್ನ ತಾಂಬೂಲ ಹಸ್ತೆ ಸು
ವ್ರತೆ, ಪತಿವ್ರತೆ, ತ್ರಿನೇತ್ರೇ,ರಕ್ತಾಂಬರೆ
ಶತಪತ್ರನಯನೆ, ನಿರುತಕನ್ಯೆ, ಉದಯಾರ್ಕ
ಶತಕೋಟಿಸನ್ನಿಭೆ, ಹರಿಯಂಕಸಂಸ್ಥೆ
ಶ್ರುತಿತತಿನುತೆ, ಶುಕ್ಲಶೋಣಿತರಹಿತೆ,ಅ
ಪ್ರತಿಹತೆ, ಸರ್ವದಾಸಂಚಾರಿಣಿ,ಚತುರೆ
ಚತುರಕಪರ್ದಿಯೆ, ಅಂಭ್ರಿಣೀ, ಹ್ರೀ
ಉತ್ಪತ್ತಿಸ್ಥಿತಿಲಯಕರ್ತ್ರೆ, ಶುಭ್ರಶೋಭನಗಾತ್ರೇ
ಪತಿತಪಾವನೆ, ಧನ್ಯೆ ಸರ್ವೌಷಧಿಯಲ್ಲಿದ್ದು
ಹತಮಾಡು ಕಾಡುವ ರೋಗಂಗಳಿಂದ
ಕ್ಷಿತಿಯೊಳು ಸುಖದಲ್ಲಿ ಬಾಳುವ ಮತಿಯಿತ್ತು
ಸತತ ಕಾಯಲಿಬೇಕು ದುರ್ಗೆದುರ್ಗೇ
ಚ್ಯುತಿದೂರ ವಿಜಯವಿಠ್ಠಲರೇಯನ ಪ್ರೀಯೆ
ಕೃತಾಂಜಲಿಯಿಂದಲಿ ತಲೆಬಾಗಿ ನಮಿಸುವೆ ॥ ॥3॥

ಅಟ್ಟತಾಳ

ಶ್ರೀ ಲಕ್ಷ್ಮೀ ಕಮಲಾ ಪದ್ಮಾ ಪದ್ಮಿನಿ ಕಮ
ಲಾಲಯೆ, ರಮಾ, ವೃಷಾಕಪೀ, ಧನ್ಯಾ, ವೃದ್ಧಿ, ವಿ
ಶಾಲಾ,ಯಜ್ಞಾ,ಇಂದಿರೆ ಹಿರಣ್ಯೇ,ಹರಿಣಿ
ವಾಲಯಾ, ಸತ್ಯ ನಿತ್ಯಾನಂದೆ ತ್ರಯಿ ಸುಧಾ
ಶೀಲೆ, ಸುಗಂಧಸುಂದರಿ ವಿದ್ಯಾ ಸು
ಶೀಲೆ, ಸುಲಕ್ಷಣ ದೇವಿ, ನಾನಾರೂಪ
ಗಳಿಂದ ಮೆರೆವ ಮೃತ್ಯುನಾಶೆ
ಓಲಗ ಕೊಡುಸಂತರ ಸನ್ನಿಧಿಯಲ್ಲಿ
ಕಾಲಕಾಲಕೆ ಎನ್ನ ಭಾರವೊಹಿಸುವ ತಾಯಿ
ಮೇಲು ಮೇಲು ನಿನ್ನ ಶಕ್ತಿ ಕೀರ್ತಿಬಲು
ಕೇಳಿ ಕೇಳಿಬಂದೆ ಕೇವಲ ಈ ಮನ
ಗಾಳಿಯಂತೆ ಪರದ್ರವ್ಯಕ್ಕೆ ಪೋಪುದು
ಏಳಲಮಾಡದೆ ಉದ್ಧಾರಮಾಡು
ಕೈಲಾಸಪುರದಲ್ಲಿ ಪೂಜೆಗೊಂಬ ದೇವಿ

Rarest Archiver

ಮೂಲಪ್ರಕೃತಿ , ಸರ್ವವರ್ಣಾಭಿಮಾನಿನಿ
ಪಾಲಸಾಗರ ಶಾಯಿ ವಿಜಯವಿಠ್ಠಲನೊಳು
ಲೀಲೆಯಾಡುವ ನಾನಾಭರಣಭೂಷಣೆ ಪೂರ್ಣೆ

ಆದಿತಾಳ

ಗೋಪಿನಂದನೆಮುಕ್ತೆ ದೈತ್ಯಸಂತತಿಗೆ ಸಂ
ತಾಪವ ಕೊಡುತಿಪ್ಪ ಮಹಾಕಠೋರೆ ಉಗ್ರೆ
ರೂಪವೈಲಕ್ಷಣೆ, ಅಜ್ಞಾನಕ್ಕಭಿಮಾನಿನಿ
ತಾಪತ್ರಯ ವಿನಾಶೆ , ಓಂಕಾರೆ, ಹೂಂಕಾರೆ
ಪಾಪಿ ಕಂಸಗೆ ಭಯತೋರಿದ ಬಾಲಲೀಲೆ
ವ್ಯಾಪುತೆ ಧರ್ಮಮಾರ್ಗಪ್ರೇರಕೆ ಅಪ್ರಾಕೃತೆ
ಸ್ವಾಪದಲಿ ನಿನ್ನ ನೆನಸಿದ ಶರಣನಿಗೆ
ಅಪಾರವಾಗಿದ್ದ ಶರಧಿಯಂತೆ ಮಹಾ
ಆಪತ್ತು ಬಂದಿರಲು ಹಾರಿಪೋಗುವು ಸಪ್ತ
ದ್ವೀಪನಾಯಿಕೆ ನರಕನಿರ್ಲೇಪೇ, ತಮೋಗುಣದ
ವ್ಯಾಪಾರಮಾಡಿಸಿ ಭಕ್ತಜನರ್ಗೆ ಪುಣ್ಯ
ಸೋಪಾನ ಮಾಡಿಕೊಡುವ ಸೌಭಾಗ್ಯವಂತೆ.
ಪ್ರಾಪುತವಾಗಿ ಎನ್ನ ಮನದಲಿ ನಿಂದು ದುಃಖ
ಕೂಪದಿಂದಲಿ ಎತ್ತಿ ಕಡೆಮಾಡು ಜನ್ಮ ವಾಣಿ
ಸೌಪರ್ಣಿ ಮಿಗಿಲಾದ ಸತಿಯರು ನಿತ್ಯ ನಿನ್ನ
ಆಪಾದಮೌಳಿತನಕ ಭಜಿಸಿ ಭವ್ಯರಾದರು
ನಾಪೇಳುವದೇನು ಪಾಂಡವರ ಮನೋಭೀಷ್ಟೆ
ಈ ಪಂಚಭೌತಿಕದಲ್ಲಿ ಆವಸಾಧನಕಾಣೆ
ಶ್ರೀಪತಿನಾಮ ಒಂದೇ ಜಿಹ್ವಾಗ್ರದಲಿ ನೆನೆವ
ಔಪಾಸನಕೊಡು ರುದ್ರಾದಿಗಳ ವರದೆ
ತಾಪಸಜನಪ್ರಿಯ ವಿಜಯವಿಠ್ಠಲಮೂರ್ತಿಯ
ಶ್ರೀಪಾದರ್ಚನೆಮಾಳ್ಪ ಶ್ರೀಭೂದುರ್ಗಾವರ್ಣಾತ್ರಯೆ ॥ ॥5॥

ಜತೆ

ದುರ್ಗೆ ಹಾ ಹೆ ಹೊ ಹಾ ದುರ್ಗೆ ಮಂಗಳ ದುರ್ಗೆ
ದುರ್ಗತಿ ಕೊಡದಿರು ವಿಜಯವಿಠ್ಠಲ ಪ್ರಿಯೆ ॥ ॥6॥

****

Rarest Archiver

23

ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀ ಪ್ರಾಣದೇವರ ಚರಣಮಹಿಮಾ ಸುಳಾದಿ

ರಾಗ-ನಾಟಿ ಧ್ರುವತಾಳ

ಶ್ರೀ ವಾಯುದೇವರ ಮೂಲಾವತಾರವರ್ಣನೆ

ಅಂದಿಗೆ ಪೊಂಗೆಜ್ಜೆ ಬಿರುದಿನ ಕಾಲ್ಪೆಂಡೆ
ಇಂದ ಝುಗಝುಗಿಸುವ ಅರುಣ ಕಾಂತಿಯ ಚರಣ
ಇಂದುವಿನ ಸೋಲಿಸುವ ಪ್ರಕಾಶಪೂರ್ಣಮಯ
ದಿಂದ ಬ್ರಹ್ಮಾಂಡವನ್ನು ಬೆಳಗುತ್ತಿಪ್ಪ ಚರಣ
ತಂದನ್ನತಾನ ಎಂದು ಕೈಯಲಿ ಕಿನ್ನರಿಧರಿಸಿ
ಅಂದವಾಗಿ ಶ್ರೀಹರಿಯ ಮುಂದೆ ಕುಣಿವ ಚರಣ
ಇಂದು ಮೌಳಿ ಮುಖ್ಯ ಸುರರಾದ್ಯರಿಂದ ಆ
ನಂದವಾಗಿ ನಿತ್ಯ ಪೂಜೆಗೊಂಬ ಚರಣ
ಮಂದಮಾನವರಿಗೆ ಪ್ರೀತಿ ಬಡಿಸಿ ಸುಖ
ಸಿಂಧುವಿನೊಳಿಟ್ಟು ದಯಮಾಳ್ಪುದೀ ಚರಣ
ಸಂದೇಹ ವಿಪರೀತಜ್ಞಾನ ಜೀವರಿಗೆ ನಿ
ರ್ಬಂಧನದೊಳು ಪೊಗಿಸಿ ಕಷ್ಟಬಡಿಸುವ ಚರಣ
ಮುಂದೆ ಬೊಮ್ಮನಾಗಿ ಸತ್ಯಲೋಕದಲ್ಲಿ ಮೃ
ಗೇಂದ್ರನ ಗದ್ದಿಗಿ ಮೇಲೆ ವಾಲಗಗೊಂಬ ಚರಣ
ಒಂದೊಂದು ರೂಪ ಗುಣ ಕ್ರಿಯ ಸಮೂಹಗಳು ಅ
ತೀಂದ್ರಿಯವಾಗಿ ಮನಕೆ ತೋರುವ ಶ್ರೀ ಚರಣ
ಸುಂದರಿ ಭಾರತಿದೇವಿ ಏಕಾಂತದಲಿ ನೋಡಿ
ಗಂಧಪರಿಮಳ ಪೂಸಿ ಅಪ್ಪಿಕೊಂಬುವ ಚರಣ
ತಂದೆ ತಾಯಿಗಳಂತೆ ತಪ್ಪದೆ ಅನುದಿನ
ಅಂದಂದ ಅಭಿಲಾಷೆಕೊಡುವ ಕಮನೀಯ ಚರಣ
ಅಂದಿಗಂದಿಗೆ ಸಮನಾಗಿ ಸಾಧ್ಯವಾಗಿ
ಒಂದೇ ಪ್ರಕಾರದಲ್ಲಿ ಭಕ್ತರಿಗೆ ಒಲಿದ ಚರಣ
ಪೊಂದಿದವರಲ್ಲಿ ವಿಶ್ವಾಸಮಾಡುವ ಜನರ
ಬಂಧನ ಪರಿಹರಿಸಿ ಪಾಲಿಸುವದೀ ಚರಣ
ಇಂದು ಹೃತ್ಕಮಲ ದಹರಾಕಾಶದಲ್ಲಿ
ನಿಂದು ಪೂಜೆಮಾಡಲ್ಪಟ್ಟ ಮಂಗಳಚರಣ
ಕಂದರ್ಪಪಿತ ನಮ್ಮ ವಿಜಯವಿಠ್ಠಲಗೆ ಶರ
ಣೆಂದು ಬಾಗುವ ಸೂತ್ರಪ್ರಾಣನ ಪರಮಚರಣ ॥ ॥1॥

Rarest Archiver

ಮಟ್ಟತಾಳ

ಹನುಮದವತಾರವರ್ಣನೆ

ಅಂಜನಾದೇವಿಯಲ್ಲಿ ಉದ್ಭವಿಸಿ ಬಂದು
ಕಂಜಸಖನಡಿಗೆ ಹಾರಿದುದೀಚರಣ
ಕಂಜಮಿತ್ರನ ಸುತನ ಕರೆದು ಮನ್ನಿಸಿ ಅವನ
ಅಂಜಿಕೆಯನು ಬಿಡಿಸಿ ಎರಗಿಸಿಕೊಂಡ ಚರಣ
ಕಂಜನಾಭನ ಕಂಡು ಪರವಶದಲಿ ಹಾಹಾ
ರಂಜಿಸುತಲಿ ವೇಗ ಜಿಗಿದ್ಹಾರಿದ ಚರಣ
ಕುಂಜರನಾಥನ ಮಗನ ಮಹಾಗರ್ವ
ಭಂಜನಮಾಳ್ಪದಕೆ ನಡೆದಾಡಿದ ಚರಣ
ಮಂಜುಭಾಷಣರಾಮ ಪೇಳ್ದಕ್ಷಣ ಕಪಿ
ಪುಂಜರ ವೊಡಗೊಂಡು ತೆರಳಿದ್ದೀಚರಣ
ನಂಜಸವಿದ ಧೀರ ಗಿರಿಯ ಜಿಗಿದು ನೋಡಿ
ಅಂಜದೆ ಜಲನಿಧಿಯ ಲಂಘಿಸಿದ ಚರಣ
ಝುಂಝಾನಿಲನಂತೆ ದೈತ್ಯ ಪಟ್ಟಣ ಪೊಕ್ಕು
ಕಂಜಮುಖಿಗೋಸುಗ ಸಂಚರಿಸಿದ ಚರಣ
ಗುಂಜಿತೂಕದಿನಿತು ಭಯವಿಲ್ಲದೇ ಪುರ ಧ
ನಂಜಯಗೆಡೆಯುಣಿಸುತ ಓಡಾಡಿದ ಚರಣ
ವ್ಯಂಜಕ ತಾನಾಗಿ ಸ್ವಾಮಿಕಾರ್ಯದಲ್ಲಿ ಮೃ
ತ್ಯುಂಜಯ ಶಿಷ್ಯರನ ವರಿಸಿದ ಬಲು ಚರಣ
ಭುಂಜಿಪ ಎಡೆಗೊಂಡು ದೇವನಲ್ಲಿ ಇಡಲು
ಎಂಜಲವ್ಯೆದೊಂದು ಮರವೇರಿದ ಚರಣ
ಅಂಜಲಿ ಪುಟ ಬಿಟ್ಟು ಬಿಂಕದಲಿ ಧ
ನಂಜಯನ ರಥಕೆ ಬಂದೇರುವ ಚರಣ
ಕಿಂಜಲ್ಕವಾಸ ವಿಜಯವಿಠ್ಠಲನಂಘ್ರಿ
ಕಂಜ ಪೂಜಿಪ ಹನುಮನ ನಾನಾವರ್ಣವಾದ ಚರಣ ॥ ॥2॥

ತ್ರಿವಿಡಿ ತಾಳ

(ಭೀಮಾವತಾರ ವರ್ಣನೆ)

ಗಿರಿಯ ಮಧ್ಯದಿ ಜಿಗಳಿ ವದ್ದಾಡಿದ ಚರಣ
ಗಿರಿಯ ಮಧ್ಯದಿ ದ್ವಿಜಗೂಳಿವದ್ದ ಚರಣ
ಮರದ ಮೇಲೆ ಇದ್ದವರ ಕೆಡಹಿದ ಚರಣ
ಸುರನದಿಯೊಳು ಬಿದ್ದಹಿಗಳಕುಟ್ಟಿದ ಚರಣ
ನಿರುತ ಪರಿಪರಿಯಿಂದ ನಲಿದಾಡಿದ ಚರಣ

Rarest Archiver

ಅರಗಿನಮನೆ ಗೆದ್ದು ಬಂದು ರಾತ್ರಿ ಹಿಡಂಬನ
ವರಸಿ, ಸತಿಯಳಿಂದ ಅರ್ಚನೆಗೊಂಡ ಚರಣ
ಪುರದೊಳು ಭಿಕ್ಷವ ಬೇಡುತ ತಿರುಗಿದ ಚರಣ
ದುರುಳಬಕನ ವದ್ದ ದುಸ್ತರದ ಚರಣ
ಅರಸಿನ ಸಭೆಯಲ್ಲಿ ಹುಂಕರಿಸಿ
ಹರುಷದಲಿ ನೆನೆದು ದ್ರೌಪದಿ ಬಂದು ಕಂಡ ಚರಣ
ವರನಾಥ ರಾಜಸೂಯ ಯಾಗವ ಮಾಡಲು ಪೋಗಿ
ಧರೆಯಲ್ಲಿ ತಿರುಗಿ ವಂದಿಸಿಕೊಂಡ ಚರಣ
ಪುರುಷ ಮೃಗನ ಕೈಯ್ಯಪಿಡಿಸಿಕೊಂಡ ಚರಣ
ತೆರಳಿವನದಲ್ಲಿ ಕುಸುಮ, ಘೋಷಯಾತ್ರೆ, ಮತ್ಸ್ಯನ
ಪುರದಲ್ಲಿ ಮೆರೆದ ಮಂದಾರಚರಣ
ಧುರದೊಳು ನಿಂದು ಬಲ್ಲಿದ ಅನ್ಯೋ
ನ್ಯರನ್ನು ನೆಲಕಿಕ್ಕಿ ದುರುಳಸೈನ್ಯವೆಲ್ಲ
ಪರಿಹರಿಸಿದ ಚರಣ ಅಪ್ರತಿಚರಣ
ತರುಣಿ ಪಾಂಚಾಲಿಯ ಎಳೆದ ಖಳನ ಭಂಗಿಸಿ
ಉರದ ಮೇಲೆ ನಿಂತು ಕುಣಿದಾಡಿದ ಚರಣ
ದುರ್ಯೋಧನನು ಬಂದು ತರುಬಲಾಕ್ಷಣಕೆ ಅವನ
ತರಿದು ಬಿಸಾಟಿ ಶಿರವ ಮೆಟ್ಟಿದ ಮಹಾಚರಣ
ಹರಿಗೆ ಸಮ್ಮೊಗವಾಗಿ ಅಟ್ಟಹಾಸದಲಿ ನಿಂ
ದಿರದೆ ನಿದಾನದಲಿ ನಾಟ್ಯವಾಡಿದ ಚರಣ
ಹರನ ಕಡಿಯಿಂದ ಹರಿಯ ಅಸ್ತ್ರಬರಲು
ಶಿರವಬಾಗದೆ ಧರಣಿಯ ಮೇಲೆ ಕುಣಿದ ಚರಣ
ವರವೃಕೋದರ ಚರಣ ಶರಣಪಾಲಕ ಚರಣ
ಪರಮ ಪುರುಷ ಕೃಷ್ಣ ವಿಜಯವಿಠ್ಠಲರೇಯನ
ಶರಣರೊಳಧಿಕನಾದ ಭೀಮಸೇನನ ಚರಣ ॥ ॥3॥

ಅಟ್ಟತಾಳ

(ಶ್ರೀ ಮಧ್ವಾವತಾರ ವರ್ಣನೆ)

ವಿಪ್ರನ ಮನೆಯನ್ನು ಪಾವನ ಮಾಡಿದ ಚರಣ
ಸ್ವಪ್ರಕಾಶದಿಂದ ಪೊಳೆವದೀ ಸಿರಿಚರಣ
ಸುಪ್ರೇಮದಿಂದ ಜನನಿಯು ಕರೆಯಲು
ಕ್ಷಿಪ್ರತನದಲ್ಲಿ ಧುಮುಕಿದ ಚರಣ
ಸರ್ಪನ ವರಿಸಿದ ಚರಣ ದಿವ್ಯ ಚರಣ
ತಪ್ಪದೆ ಹೆಬ್ಬಲಿಕೂಡ ಚರಿಸಿದ ಚರಣ

Rarest Archive

ಅಪ್ಪನ ಮಾತಿಗೆ ಯತಿಯಾಗಿ ಮುನಿಯಾಗಿ ಲೇಸಾಗಿ
ಒಪ್ಪದಿಂದ ತೀರ್ಥಯಾತ್ರೆ ಮಾಡಿದ ಚರಣ
ಗುಪ್ತಮಾರ್ಗದಿಂದ ನದಿಯ ದಾಟಿದ ಚರಣ
ತೃಪ್ತಿಯ ಕೊಡುವುದು ನಮಗೆ ಇದೇ ಚರಣ
ದರ್ಪವುಳ್ಳ ಮಹಾಮಾಯಿ ಅರಣ್ಯಕ್ಕೆ
ಚಪ್ಪಕೊಡಲಿಯಾಗಿ ಇರುತಿಪ್ಪದೀ ಚರಣ
ಪುಷ್ಪದೋಪಾದೇಲಿ ಬದರಿಕಾಶ್ರಮದಲ್ಲಿ
ಸುಪ್ರೇಮದಿಂದಲಿ ಪೂಜೆಗೊಂಬ ಚರಣ
ತುಪ್ಪ ಸಕ್ಕರಿಪಾಲು ಉಣಿಸುವದೀ ಚರಣ
ಕಪ್ಪು ಕಲುಷವಿಲ್ಲ ರಾತ್ರಿಲಿ ಓದುವ
ಅಪ್ಪಾರ ಜನಕ್ಕೆ ಬೆಳಕುಮಾಡಿದ ಚರಣ
ಮುಪ್ಪು ಇಲ್ಲದ ಜೀವನಸಾಧನಗಳ
ದರ್ಪಣದಂತೆ ತೋರಿಕೊಡುವದೀಚರಣ
ಬಪ್ಪ–ಪೋಗುವ ಶಕುತಿ ಏನಪೇಳಲಿ ಕಂ
ದರ್ಪ ಎಣಿಸಲಾಗಿ ನೆಲೆದೋರಣ ಚರಣ ಕಂ
ದರ್ಪನಯ್ಯನ ನೆನೆಸಲಾಗಿ ನೆಲೆದೋರುವದೀ ಚರಣ
ಕಪ್ಪುಗೊರಳನಿಂದ ವಂದಿತ ಚರಣ
ಸಪ್ತಭುವನೇಶ ವಿಜಯವಿಠ್ಠಲಗೆ
ಆಪ್ತವಾದ ಆನಂದತೀರ್ಥರ ಚರಣ ॥ ॥4॥

ಆದಿತಾಳ

ಚತುರಯುಗದೊಳು ಮಹಿಮೆತೋರಿದ ಚರಣ
ಚತುರವಿಂಶತಿ ತತ್ವವ್ಯಾಪಿಸಿ ಇದ್ದ ಚರಣ
ಸ್ತುತಿಸಿದ ಜನರಿಗೆ ಭೇದಜ್ಞಾನಕೊಟ್ಟು
ಗತಿಗೆ ಸತ್ಪಂಥಕೆ ತೋರುವ ಶ್ರೀಚರಣ
ಪತಿತನಾದರೆ ಒಂದೆ ಸಾರಿ ಶ್ರೀನಾರಾಯಣನಿಗೆ ಮುಖ್ಯ
ಪ್ರತಿಬಿಂಬ ಎಂತೆಂದೆನಲು ಪಾಲಿಸುವದೀಚರಣ
ಸತತ ಈತನೆ ಮುಖ್ಯಗುರುವೆಂದು ತಿಳಿದು ಅನವ
ರತದಲ್ಲಿ ಇದ್ದವಗೆ ವಜ್ರಪಂಜರ ಈ ಚರಣ
ಕ್ಷಿತಿಯೊಳಗೆ ಎನಗಿದು ಸುರಧೇನು ಈ ಚರಣ
ಪ್ರತಿಗಾಣೆನೋ ಎನಗಿದೆ ಇದೇ ಸುರತರು ಚರಣ
ಮತ್ತೊಂದೆನಗಿಲ್ಲ ಇದೇ ಚಿಂತಾಮಣಿ ಚರಣ
ಮಿತಿಯಿಲ್ಲದ ಜನ್ಮಬರಲಿ ಬಂದಿರಲಿ ಶಾ
ಶ್ವತ ವಹುದೋ ಲೇಶಮಾತ್ರ ಅನುಮಾನವಿಲ್ಲ ವಿ

Rarest Archive

ಹಿತವಾಗಿ ನಂಬಿಹೆ ಈ ಚರಣ ಈ ಚರಣ
ಅತಿಶಯದಿ ಜನ್ಮಜನ್ಮಾಂತರದಿಂದ ನಂಬಿದ್ದೀ ಚರಣ
ಅರ್ತಿಯಿಂದಲಿ ತಂದೆ ತಾಯಿಯಂತೆ ಪೊರೆದು ಸ
ದ್ಗತಿಯನಿತ್ತು ನಿಜಸುಖ ಉಣಿಸುವದೀ ಚರಣ
ಆರ್ತಜನರ ಸಂತಾಪಕಳೆವದೀ ಚರಣ
ಉತ್ತಮ ಶ್ಲೋಕನ ತೋರಿಸಿ ಉತ್ತಮನ ಮಾಡುವುದೀ ಚರಣ
ಕತ್ತಲೆ ಹರಿಸಿ ಅರ್ಥಿಯಿಂದಲಿ ಸುಜ್ಞಾನ ಭಕುತಿ
ಇತ್ತು ಸುಖಬಡಿಸುವದೀ ಚರಣ
ಭೃತ್ಯರೆನಿಸಿ ಸತತ ಪಾಲಿಸುವದೀಚರಣ
ಚ್ಯುತಿದೂರ ನಮ್ಮ ವಿಜಯವಿಠ್ಠಲನ ರ
ಜತಪೀಠದಲ್ಲಿ ಧ್ಯಾನ ಮಾ
ಡುತಿಪ್ಪ ಮಧ್ವಮುನಿಯ ಮುದ್ದು ಚರಣ ॥ ॥5॥

ಜತೆ

ಚಿತ್ತದಲಿ ಚರಣಭಜಿಸಿದ ಜೀವಿಗೆ
ನಿತ್ಯಾಯು ಉತ್ಸಹ ವಿಜಯವಿಠ್ಠಲ ಕೊಡುವ ॥ ॥6॥

=ಶ್ರೀಮಧ್ವೇಶಾರ್ಪಣಮಸ್ತು=

Rarest Archiver

ಶ್ರೀ ವಿಜಯದಾಸಾರ್ಯವಿರಚಿತ ಶ್ರೀನರಸಿಂಹದೇವರ ಸ್ತೋತ್ರಸುಳಾದಿ

ವೀರರಿಗೆ ಅಧೀಶನಾದ ನರಸಿಂಹನೇ ಅಂದರೆ ನರಮೃಗವೇಷಧರಿಸಿದವನೇ, ದಯಾಸಮುದ್ರನೇ, ಭಯನಿವಾರಣನೇ, ಸತ್ವಾದಿಗುಣರಹಿತನೇ, ಶರಣುಬಂದವರ ಸಂಸಾರ ವೃಕ್ಷದ ಮೂಲವಾದ ಲಿಂಗದೇಹವನ್ನು ಬೇರು ಸಹಿತ ಕಿತ್ತು ಹಾಕುವ ಬಿರುದುಳ್ಳವನೇ, ಭಯಂಕರವಾದ ಭೀಕರವಾದ ಅವತಾರವುಳ್ಳವನೇ,ಭಯಹುಟ್ಟಿಸುವ ಮುಖವುಳ್ಳವನೇ, ಭಕ್ತರಾದ ಸಜ್ಜನರಿಗೆ ಸೌಮ್ಯವಾದರೂಪ ತೋರುವವನೇ, ಪಾಪಕಳೆವವನೇ, ಇಚ್ಛಾರೂಪಿಯೇ, ಕ್ರೂರರಾದ ದೈತ್ಯರ ಶೋಕಕ್ಕೆ ಕಾರಣನಾದವನೇ, ಕಂಬದಿಂದ ಉದ್ಭವಿಸಿದವನೇ, 14ಲೋಕಗಳಿಗೆ, ಮಹಾಸಮುದ್ರಗಳಿಗೆ ಸ್ವಾಮಿಯೇ, ರುದ್ರ ಎಂಬ ಹೆಸರುಳ್ಳವನೇ, ವಿಜಯವಿಠ್ಠಲರೂಪೀ ನರಸಿಂಹನೇ, ವೀರರಸದಿಂದ ಉತ್ಕೃಷ್ಟನಾದವನೇ, ನೀನು ಕರುಣೆಯ ಕಡೆಗಣ್ಣಿನಿಂದ ನೋಡು.[1]

ರಾಕ್ಷಸನಾದ ಹಿರಣ್ಯಕಶಿಪುವು ಮಗುವಾದ ಪ್ರಹ್ಲಾದರಾಜರಲ್ಲಿ ಹಗಲುರಾತ್ರಿ ಸತತವಾಗಿ ದ್ವೇಷದಿಂದ ಕೂಡಿದವನಾಗಿ ತನ್ನ ಭಟರಿಂದ ಪ್ರಹ್ಲಾದನನ್ನು ಪರ್ವತದ ಮೇಲಿಂದ ಕೆಳಗೆ ತಳ್ಳಿಸಿದನು. ಹಾವುಗಳಿಂದ ಕಚ್ಚಿಸಿದನು ಸಮುದ್ರದಲ್ಲಿ ಹಾಕಿಸಿದನು. ಅಂತರಿಕ್ಷದಲ್ಲಿ ತೂರಿಸಿದನು. ಇವೇ ಮೊದಲಾದ ಅನೇಕ ಬಾಧೆಗಳಿಗೆ ಒಳಪಡಿಸಿ, ಅವನನ್ನು ಹಾರಿಸಿ, ಎಸೆದು ಸಾವು ಬರಲೆಂದು ಯೋಚಿಸಿ ಕೊಲ್ಲಲು ಉದ್ಯುಕ್ತನಾದ. ಜಗತ್ತಿಗೆ ಸ್ವಾಮಿಯಾದ, ಸದ್ಗುಣಪೂರ್ಣನಾದ, ಅನಾದಿಮೂರುತಿಯಾದ, ವೇದಗಳಿಂದ ಸ್ತುತ್ಯನಾದ, ಸ್ತೋತ್ರಮಾಡಿದ ಭಕ್ತರನ್ನು ಬಿಟ್ಟಗಲದಿರುವವನು, ಎಂಬುದಾಗಿ ಚೆನ್ನಾಗಿ ಸ್ತೋತ್ರಮಾಡುತ್ತ, ಯುಗ,ಯುಗಗಳಲ್ಲಿಯೂ ದಯಾಳುಗಳ ಸ್ವಾಮಿಯಾದ, ದೇವರ ದೇವನಾದ, ಯುಗಾದಿಕೃತ್ ಎಂಬ ನಾಮವುಳ್ಳ ವಿಜಯವಿಠ್ಠಲನಿಗೆ ಹೋ ಹೋ ಎಂದು ಎರಡೂಕೈಗಳನ್ನು ಮುಗಿದು ಪ್ರಹ್ಲಾದರಾಜರು ಮೊರೆಯಿಟ್ಟರು.[2]

---

1) ವೀರಸಿಂಹನೆ ನಾರಸಿಂಹನೆ ದಯ ಪಾರಾ । ವಾರನೆ ಭಯನಿವಾರಣ ನಿರ್ಗುಣ। ಸಾರಿದವರ ಸಂಸಾರ ವೃಕ್ಷದ ಮೂಲ । ಬೇರರಸಿ ಕೀಳುವ ಬಿರುದು ಭಯಂಕರ ಘೋರಾವತಾರ ಕರಾಳವದನ ಅ । ಘೋರ ದುರಿತಸಂಹಾರ ಮಾಯಾಕಾರ ಕ್ರೂರದೈತ್ಯರ ಶೋಕಕಾರಣ ಉದುಭವ । ಈರೇಳು ಭುವನ ಸಾಗರದೊಡಿಯ ಆ ರೌದ್ರನಾಮಾ ವಿಜಯವಿಠ್ಠಲ ನರಸಿಂಗ । ವೀರರಸೋತ್ತುಂಗ ಕಾರುಣ್ಯಾಪಾಂಗ ॥

2) ಮಗುವಿನ ರಕ್ಕಸನು ಹಗಲಿರುಳು ಬಿಡದೆ । ಹಗೆಯಿಂದಲಿ ಹೊಯ್ದು ನಗ ಪನ್ನಗ ವನಧಿ। ಗಗನ ಮಿಗಿಲಾದ ಅಗಣಿತ ಬಾಧಿಯಲಿ । ನೆಗೆದು ಒಗದು ಸಾವುಬಗೆದು ಕೊಲ್ಲುತಿರಲು ಹೇ । ಜಗದ ವಲ್ಲಭನೇ ಸುಗುಣಾನಾದಿಗನೆ। ನಿಗಮವಂದಿತನೆ ಪೊಗಳಿದ ಭಕುತರ । ತಗಲಿ ತೊಲಗನೆಂದು ಮಿಗೆ ಕೂಗುತ್ತಿರಲು। ಯುಗಯುಗದೊಳು ದಯಾಳುಗಳ ದೇವರದೇವ। ಯುಗಾದಿಕೃತುನಾಮ ವಿಜಯವಿಠ್ಠಲ ಹೋ ಹೋ । ಯುಗಳ ಕರವಮುಗಿದು ಮಗುವು ಮೊರೆಯಿಡಲು ॥

Rarest Archiver

ಪ್ರಹ್ಲಾದರಾಜರ ಮೊರೆಯನ್ನು (ಲಾಲಿಸಿ)ಕೇಳಿದಾಕ್ಷಣದಲ್ಲಿ ಭಕ್ತನನ್ನು ರಕ್ಷಿಸುವೆನೆಂದು ಅತಿವೇಗದಿಂದ ಸಂತೋಷದಿಂದ ಉತ್ಸಾಹ ತುಂಬಿದವನಾಗಿ ಮೂರುಲೋಕದ ಸ್ವಾಮಿ (ಉಪಲಕ್ಷಣತಯಾ 14 ಲೋಕಗಳಿಗೆ ಸ್ವಾಮಿ)ತನ್ನ ಆಲಯ ವೈಕುಂಠದಿಂದ ಭಕ್ತರನ್ನು ರಕ್ಷಿಸುವ ಸುಸ್ವಭಾವವುಳ್ಳ, ದುರ್ಲಭನಾಮಧರಿಸಿ ವಿಜಯವಿಠ್ಠಲನು ಸಿಂಹದ ಮುಖ, ಮನುಷ್ಯದೇಹವುಳ್ಳವನಾಗಿ "ನರಸಿಂಹ"ರೂಪವನ್ನು ತೆಗೆದುಕೊಂಡು ಕಂಭದಿಂದ ಪ್ರಕಟನಾಗಿ ಮೂಡಿಬಂದ.[3]

ಲಟಲಟನೆ ಶಬ್ದಮಾಡುತ್ತಾ ಗಾಬರಿಗೊಳಿಸಿ ಬ್ರಹ್ಮಾಂಡಕಟಾಹವು ಪಟಪಟ ಭಯಂಕರ ಶಬ್ದ ಮಾಡುತ್ತ ಬಿಚ್ಚುತ್ತಿರಲು, ಒಂದೇ ಸವನೆ ಮೇಲೆ ಹಾರುತ್ತ, ಹಲ್ಲುಗಳನ್ನು ಕಟಕಟನೆ ಕಡಿಯುತ್ತ ಸಿಟ್ಟಿನಿಂದ ಮಿಟಿ ಮಿಟನೆ ಕೆಂಗಣ್ಣುಗಳಿಂದ ನೋಡಿ, ಕೋಟಿ ಮಿಂಚುಗಳ ಆರ್ಭಟವನ್ನು ತೋರುತ್ತ, ಮೋಸರಹಿತನಾದ ವ್ಯಕ್ತರೂಪವುಳ್ಳ ವಿಜಯ ವಿಠ್ಠಲರೂಪೀ ನರಸಿಂಹದೇವರು ಶಕ್ತನೂ, ಹಣೆಯಲ್ಲಿ ಕಣ್ಣುಳ್ಳವನೂ ದೇವತೆಗಳ ಸಮೂಹವನ್ನು ಚೆನ್ನಾಗಿ ರಕ್ಷಿಸುವವನೂ ಆಗಿದ್ದಾನೆ.[4]

ವೀರಧ್ವನಿಯಿಂದ ಆರ್ಭಟಿಸಿದಾಗ ಉಜ್ವಲವಾದ ಕಿಡಿ ಹಬ್ಬಿ ಮುಂಭಾಗದ ಸಾಲಿನ ಉರಿಯಿಂದ ಸುತ್ತಲೂ ಕಾಂತಿಬೀರಿ, ರವಿಗೆ (ಸೂರ್ಯನಿಗೆ) ಕಷ್ಟವಾಗುತ್ತಿರಲು, ಚಂದ್ರನು ನಡುಗುತ್ತಿರಲು ಸಪ್ತ ಸಮುದ್ರಗಳು ಉಕ್ಕಿ ನೀರು ಹೊರಚೆಲ್ಲಿ ಬರುತ್ತಿರಲು, ಬ್ರಹ್ಮರುದ್ರ ಮೊದಲಾದ ದೇವತೆಗಳು ಗಾಬರಿಗೊಂಡು ಈ ಆರ್ಭಟವೇನೆಂದು ಅನ್ನುತ್ತ ತಮ್ಮ ಸ್ಥಾನವನ್ನೇ ಬಿಡಲು ಅವ್ಯಾಕೃತಾಕಾಶ ಪರ್ಯಂತವಾಗಿ ಶಬ್ದವು ತುಂಬಿತು. ತುಂಬಿದ ಗಿಡಮರಗಳು, ಪರ್ವತಗಳು ಝುರ್ಝುರ ಧ್ವನಿ ಮಾಡುತ್ತಿರಲು ಸರ್ವತಂತ್ರ ಸ್ವತಂತ್ರನಾದ ನಮ್ಮ ವಿಜಯವಿಠ್ಠಲರೂಪೀ ನರಸಿಂಹ ದೇವರು ನರಮೃಗರೂಪದಿಂದ

---

3) ಕೇಳಿದಾಕ್ಷಣದಲ್ಲಿ ಲಾಲಿಸಿ ಭಕ್ತನ್ನ। ಮೌಳಿವೇಗದಲಿ ಪಾಲಿಸುವೆನೆಂದು। ತಾಳಿ ಸಂತೋಷವ ತೂಳಿ ತುಂಬಿದಂತೆ। ಮೂಲೋಕದಪತಿ ವಾಲಯದಿಂದ ಸುಸ್ಶೀಲ ದುರ್ಲಭನಾಮ ವಿಜಯವಿಠ್ಠಲ ಪಂಚ। ಮೌಳಿ ಮಾನವ ಕಂಭಸೀಳಿ ಮೂಡಿದದೇವ॥

4) ಲಟಲಟಾ ಲಟಲಟಾ ಲಟಕಟಿಸಿ ವನಜಜಾಂಡ। ಕಟಹ ಪಟಪಟ ಪುಟುತ್ಕಟದಿ ಬಿಚ್ಚುತಿರಲು। ಪುಟಪುಟಾ ಪುಟ ನೆಗೆದು ಚೀರಿ ಹಾರುತ್ತ ಪ॥ಲ್ಕಟ ಕಟಾ ಕಟ ಕಡಿದು ರೋಷದಿಂದ। ಮಿಟಿ ಮಿಟಿ ಮಿಟೆನೆ ರಕ್ತಾಕ್ಷಿಯಲ್ಲಿ ನೋಡಿ। ತಟಿತ್ಕೋಟಿ ಉದ್ಧಟಕೆ ಆರ್ಭಟವಾಗಿರಲು। ಕುಟಿಲರಹಿತ ವ್ಯಕ್ತ ವಿಜಯವಿಠ್ಠಲ ಶಕ್ತ।ಧಿಟ ನಿಟಿಲನೇತ್ರ ಸುರಕಟಕ ಪರಿಪಾಲಾ॥

Rarest Archiver

ಸ್ತಂಭದಿಂದ ಪ್ರಾದುರ್ಭೂತನಾದ (ಹೊರಬಂದ) [5]

ಘುಡಘುಡಿಸುತ್ತ ಕೋಟಿ ಸಿಡಿಲುಗಳು ಬಂದು ಪರ್ವತಕ್ಕೆ ಹೊಡೆದಂತೆ ಚೀರಿ ಆರ್ಭಟಿಸುತ ಹಾರಿ ಬಂದು ರಾಕ್ಷಸ ಹಿರಣ್ಯಕಶಿಪುವನ್ನು ಕೆಳಗೆ ಕೆಡವಿ, ಅವನ ಕೇಶಗಳನ್ನು ಜಗ್ಗಿ ಬಲಾತ್ಕರಿಸಿ ತೊಡೆಯಮೇಲೆ ಅವನನ್ನು ಹಾಕಿಕೊಂಡು ಅವನ ದೊಡ್ಡಹೊಟ್ಟೆಯನ್ನು ಚೂಪಾದ ಉಗುರುಗಳಿಂದ, ಪಶ್ಚಿಮಸಮುದ್ರದ ತೀರದಲ್ಲಿ ಮುಳುಗುತ್ತಿರುವ ಸೂರ್ಯನನ್ನು ನೋಡಿ, ಬಹಳವಾದ ಸಿಟ್ಟಿನಿಂದ ನಾಶಮಾಡುತ್ತ ರಾಕ್ಷಸನನ್ನು ತೊಡೆಯಲ್ಲಿ ಕೆಡವಿ ದೊಡ್ಡದಾದ ಕರುಳನ್ನು ತನ್ನಕಂಠದಲ್ಲಿ ಧರಿಸಿದ ಉತ್ಸಾಹದಿಂದ ಕೂಡಿದ, ಮಹಾಪರಾಕ್ರಮಿಯಾದ, ಪೂರ್ಣನಾದ, ಮಹದೈಶ್ವರ್ಯವುಳ್ಳ ಶ್ರೀವಿಜಯವಿಠ್ಠಲನು ಕ್ಷೀರಸಮುದ್ರಸ್ವಾಮಿಯಾಗಿ, ಭಕ್ತಾಭರಣನಾಗಿ ಕೂಡಲೇ ಕಾಣಿಸಿಕೊಂಡ. [6]

ಶ್ರೀನರಸಿಂಹದೇವರ ಮೂರನೆಯ ಕಣ್ಣಿನಿಂದ ಹೊರಟ ಉರಿಯು ಹೆಚ್ಚಾಗುತ್ತಿರಲು, 14 ಲೋಕಗಳು ಗಾಬರಿಯಾಗುತ್ತಿರಲು, ಬ್ರಹ್ಮ ರುದ್ರ ಮೊದಲಾದ ದೇವತೆಗಳು ಶ್ರೀಲಕ್ಷ್ಮೀದೇವಿಗೆ ಮೊರೆಹೋಗಲು, ಕರುಣೆಯಿಂದ ತನ್ನ ಭಕ್ತ ಪ್ರಹ್ಲಾದ ಸಹಿತರಾಗಿ ಶ್ರೀನರಸಿಂಹದೇವರ ಪಾದಕಮಲಗಳಿಗೆ ನಮಸ್ಕಾರ ಮಾಡುತ್ತಿರಲು, ಪರಮ ಶಾಂತನಾಗಿ, ದಯೆತೋರಲು ದೇವತೆಗಳು ಪುಷ್ಪವೃಷ್ಟಿಯನ್ನು ಮಾಡುವವರಾದರು. ಭೇರಿ ವಾದ್ಯಗಳು ಮೊಳಗಿದವು ಬೇರೆ ಬೇರೆ ವಾಲಗ ಮೊದಲಾದ ವಾದ್ಯಗಳನ್ನು ಬಾರಿಸುತ್ತ ಇರಲು, ದೇವರು ತನ್ನ ಪರಾಕ್ರಮುವನ್ನು ಮೆರೆದು

---

5) ಬೊಬ್ಬಿರಿಯೆ ವೀರಧ್ವನಿಯಿಂದ ತನಿಗಿಡಿ। ಹಬ್ಬಿ ಮುಂಚೋಣಿ ಉರಿ ಹೊಗರೆದ್ದು ಸುತ್ತೆ। ಉಬ್ಬಸ ರವಿಗಾಗೆ ಅಬ್ಧಿಜ ನಡುಗುತಿರೆ। ಅಬ್ಧಿಸಪುತ ಉಕ್ಕಿ ಹೊರಚೆಲ್ಲಿ ಬರುತಿರೆ। ಅಬುಜಭವಾದಿಗಳು ತಬ್ಬಿಬ್ಬ ಗೊಂಡಾರಿ। ಅಬ್ಬರವೇನೆನುತ ನಭದ ಗೂಳೆಯು ತಗಿಯೆ। ಶಬ್ದತುಂಬಿತು ಅವ್ಯಾಕೃತಾಕಾಶಪರಿಯಂತ। ನಿಬ್ಬರ ತರುಗಿರಿಗಳು ಝುರ್ಝುರಿಸಲು ಒಬ್ಬರಿಗೊಶವಲ್ಲದ ನಮ್ಮ ವಿಜಯವಿಠ್ಠಲ। ಇಬ್ಬಗೆಯಾಗಿ ಕಂಭದಿಂದ ಮೊರಮಟ್ಟಾ ॥

6) ಘುಡಿಘುಡಿಸುತ ಕೋಟಿಸಿಡಿಲು ಗಿರಿಗೆ ಬಂದು। ಹೊಡೆದಂತೆ ಚೀರಿ ಬೊಬ್ಬಿಡುತಲಿ ಲಂಘಿಸಿ। ಹಿಡಿದು ರಕ್ಕಸನ್ನ ಕೆಡಹಿ ಮುಡಿಯ ತುಡುಕಿ। ತೊಡೆಯ ಮೇಲಿರಿಸಿ ಹೇರೊಡಲ ಕೂರುಗುರದಿಂದ। ಪಡುವಲಗಡಲ ತಡಿಯ ತರಣಿಯ ನೋಡಿ ಕಡುಕೋಪದಲಿ ಸದೆಬಡಿದು ರಕ್ಕಸನ। ಕೆಡಹಿ ನಿಡಿಗರುಳನು ಕೊರ।ಳಡಿಯಲ್ಲಿ ಧರಿಸಿದ ಸಡಗರದ ದೈವ। ಕಡುಗಲಿ ಭೂರ್ಭುವ ವಿಜಯವಿಠ್ಠಲ ಪಾ।ಲ್ಗಡ ಲೊಡಿಯ ಶರಣರವಡವೆ ವಡನೊಡನೆ.॥

Rarest Archiver

ದೇವತೆಗಳಿಗುಂಟಾದ ಕಷ್ಟ ಉಪದ್ರವವನ್ನು ನಾಶಮಾಡಿ, ಬಾಲಕನಾದ ಪ್ರಹ್ಲಾದನನ್ನು ರಕ್ಷಿಸಿ ಸರ್ವೋತ್ತಮದೇವನಾದ, ಸಮಗ್ರವಾಗಿ ತಿಳಿಯಲು ಅಶಕ್ಯವಾದ ಶರೀರವುಳ್ಳ ಶ್ರೀವಿಜಯವಿಠ್ಠಲನು ದುಷ್ಟರಿಗೆ ಭೀಕರನಾಗಿ ಸಜ್ಜನರಿಗೆ ರಕ್ಷಕನಾಗಿ ಶೋಭಿಸಿದನು.[7]

ಭಕ್ತ ಪ್ರಹ್ಲಾದನಿಗೆ ವರಕೊಡುವ, ಶರಣಾಗತರ ದುಃಖನಿವಾರಕ, ಶ್ರೇಷ್ಠನಾದ ಪ್ರಳಯಕಾಲದಲ್ಲಿ। ಸಮಸ್ತ ಜಗತ್ತನ್ನು ತನ್ನಲ್ಲಿ ಹೋಮಿಸಿಕೊಳ್ಳುವ, ವಿಜಯವಿಠ್ಠಲನು ನರಮೃಗ ವೇಷಧರಿಸಿದ ಶ್ರೀನರಸಿಂಹನೇ ಸರಿ.[8]

---

7) ಉರಿಮಸಗಿ ಚತುರ್ದಶಧರಣಿ ತಲ್ಲಣಿಸಲು। ಪರಮೇಷ್ಠಿ ಹರಸುರರು ಸಿರಿದೇವಿಗೆ ಮೊರೆಯಿಡಲು। ಕರುಣದಿಂದಲಿ ತನ್ನ ಶರಣನ್ನ ಸಹಿತ ನಿನ್ನ। ಚರಣಕ್ಕೆಯೆರಗಲು ಪರಮಶಾಂತನಾಗಿ। ಹರಹಿದೆ ದಯವನ್ನು ಸುರರು ಕುಸುಮ ವರುಷ। ಗರಿಯಲು ಭೇರಿವಾದ್ಯ ಮೊರೆವುತ್ತರರೆ ಎನುತೆ। ಪರಿಪರಿವಾಲಗ ವಿಸ್ತಾರದಿಂದ ಕೈಕೊಳ್ಳುತ್ತ। ಮೆರೆದು ಸುರರುಪದ್ರಹರಿಸಿ ಬಾಲಕನ ಕಾಯ್ದೆ। ಪರದೈವ ಗಭೀರಾತ್ಮ ವಿಜಯವಿಠ್ಠಲ ನಿನ್ನ॥ ಚರಿತೆ ದುಷ್ಟರಿಗೆ ಭೀಕರವೋ ಸಜ್ಜನಪಾಲಾ॥

ಜತೆ

8) ಪ್ರಹ್ಲಾದವರದ ಪ್ರಪನ್ನ ಕ್ಲೇಶಭಂಜನ್ನ
ಮಹಹವಿಷೆ ವಿಜಯವಿಠ್ಠಲ ನರಮೃಗವೇಷ.

****

Rarest Archiver

ಶ್ರೀ ವಿಜಯದಾಸಾರ್ಯವಿರಚಿತ
ಶ್ರೀನರಸಿಂಹದೇವರ ಸ್ತೋತ್ರ ಸುಳಾದಿ

ವಿಶೇಷಾರ್ಥಗಳು "ಒಂದನೆಯ ನುಡಿ"

1) ವೀರಸಿಂಹನೆ* – ವೀರರಿಗೆ ಅಧೀಶ ಪ್ರಭುವೇ
(ಸಿಂಹೋಽಧೀಶಃ ಪತಿಃ ಪ್ರಭುಃ ॥ ವಚನವಿದೆ)

2) ನಾರಸಿಂಹನೆ – ನರಮೃಗರೂಪಧರಿಸಿದವನೇ
ನಾರಸಿಂಹವಪುಃ ಶ್ರೀಮಾನ್–ಶ್ರೀವಿಷ್ಣು ಸಹಸ್ರನಾಮ
ನರಶ್ಚ ಸಿಂಹಶ್ಚ ನರಸಿಂಹೌ। ನರಸಿಂಹಯೋರಿದಮ್
ನಾರಸಿಂಹಮ್ । ನಾರಸಿಂಹಂವಪುಃ ಯಸ್ಯಸಃ
ನಾರಸಿಂಹವಪುಃ ॥ – ಭಕ್ತರ ಅನುಗ್ರಹಕ್ಕಾಗಿ
ಮನುಷ್ಯದೇಹ, ಸಿಂಹದ ತಲೆಯಿಂದ ಕೂಡಿದ
ಶರೀರವನ್ನು ಧರಿಸಿರುವವನು.

3) ದಯಾಪಾರಾವಾರನೆ – ದಯಾ ಸಮುದ್ರನೇ
– ಭಕ್ತಬಂಧೋ ದಯಾಸಿಂಧೋ ತ್ವತ್ಪಾದಾಬ್ಜೇ
ನಮಾಮ್ಯಹಂ। (5–52) ಶ್ರೀ ವೆಂ.ಮ. –ಇಲ್ಲಿ
ಭಗವಂತನಿಗೆ "ದಯಾಸಿಂಧೋ" ಎಂಬ ವಿಶೇಷಣ
ಕೊಟ್ಟಿದ್ದಾರೆ ದಯಾಸಿಂಧೋ ಇದನ್ನೇ
ದಯಾಪಾರಾವಾರನೆ–ಎಂದಿದ್ದಾರೆ

4) ನಿರ್ಗುಣ – ಪ್ರಾಕೃತ ಗುಣರಹಿತ–ಸತ್ವರಜಸ್ತಮೋ ಗುಣರಹಿತ
ಎಂದರ್ಥ ಏಕೋದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವ ಭೂತಾಂತರಾತ್ಮಾ । ಕರ್ಮಾಧ್ಯಕ್ಷಃ
ಸರ್ವಭೂತಾಧಿವಾಸಃ ಸಾಕ್ಷೀ ಚೇತಃ ಕೇವಲೋ
ನಿರ್ಗುಣಶ್ಚ ॥ ಶ್ವೇತಾಶ್ವತರಉಪನಿಷತ್–ಶ್ರೀಮಧ್ವರು
ಶ್ರೀಮ.ಭಾ.ತಾನಿ.ದಲ್ಲಿ ನಾರಾಯಣಂಸುರಗುರುಂ.
ಶ್ಲೋಕದಲ್ಲಿ ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ
। ವಂದೇ ಭವಘ್ನಮಮರಾಸುರ ಸಿದ್ಧವಂದ್ಯಮ್ ॥
ಭಗವಂತನು "ತ್ರಿಗುಣಗಳಿಂದ ವರ್ಜಿತ" ನೆಂದು ಹೇಳಿರುವುದು ಗಮನಾರ್ಹ.

---

* ನಮೋಽಸ್ತು ನಾರಾಯಣ ನಾರಸಿಂಹ ನಮೋಽಸ್ತು ನಾರಾಯಣ ವೀರಸಿಂಹ ।
ನಮೋಽಸ್ತು ನಾರಾಯಣ ಕ್ರೂರಸಿಂಹ ನಮೋಽಸ್ತು ನಾರಾಯಣ ದಿವ್ಯಸಿಂಹ ।
॥ಶ್ರೀನೃಸಿಂಹ ಪುರಾಣೇ ಶ್ರೀನರಸಿಂಹಸಹಸ್ರನಾಮಸ್ತೋತ್ರಮ್ ॥

Rarest Archive

5) ದುರಿತಸಂಹಾರ – ಪಾಪಗಳನ್ನು ಕಳೆಯುವವನು
"ನೃಸಿಂಹಾದಿಕಮನ್ಯಚ್ಚ ದುರಿತಾದಿನಿವೃತ್ತಯೇ" ॥
ಈ ಭಾಷ್ಯೋಕ್ತಿಇದೆ.

6) ಮಾಯಾಕಾರ – ತನ್ನ ಇಚ್ಛೆಯಂತೆ ರೂಪಗಳನ್ನು ಧರಿಸುವವನು
ಮಾಯಾ ಎಂದರೆ ಇಚ್ಛೆ ಎಂದರ್ಥ.
ಪ್ರಕೃತಿರ್ವಾಸನೇತ್ಯೇವ, ತವೇಚ್ಛಾನಂತ ಕಥ್ಯತೇ ॥
ಗೀತಾತಾತ್ಪರ್ಯ

7) ಕಾರುಣ್ಯಾಪಾಂಗ - ಕರುಣಾದೃಷ್ಟಿಉಳ್ಳವ

8) ಅಘೋರ – ಸ್ವಭಕ್ತರಿಗೆ (ಸಜ್ಜನರಿಗೆ) ಸೌಮ್ಯರೂಪ ತೋರುವವ
ಉಗ್ರೋऽಪ್ಯನುಗ್ರ ಏವಾಯಂ ಸ್ವಭಕ್ತಾನಾಂ ನೃಕೇಸರೀ
।ಕೇಸರೀವ ಸ್ವಪೋತಾನಾಂ ಅನ್ಯೇಷಾಂ ಉಗ್ರವಿಗ್ರಹಃ॥
ಶ್ರೀ ಮದ್‌ಭಾಗವತ ಸಪ್ತಮಸ್ಕಂದ ಟಿಪ್ಪಣಿ.

9) ರೌದ್ರನಾಮಾ – ರುದ್ರ ಸಂಬಂಧೀ ರೌದ್ರ – ಭಯಂಕರ
ರುದ್ರ ಎಂಬ ಹೆಸರುಳ್ಳವ ರೌದ್ರತ್ವಾತ್ ರುದ್ರಃ
ನೃಸಿಂಹೋ ರುದ್ರನಾಮಕಃ ।
ರೌದ್ರತ್ವಾತ್ ಸ ಶಿವಸ್ಯಾಪಿ ಸ್ರಷ್ಟಾ ಸಂಹಾರಕಾರಕಃ ॥
ತತ್ವಸಾರ – ಐ.ಉ.ಭಾ (2–2–7–5)

2ನೆಯ ನುಡಿ

ಹಗೆಯಿಂದಲಿ – ದ್ವೇಷದಿಂದಲಿ
ನಗ – ಪರ್ವತ
ಪನ್ನಗ – ಹಾವು
ಉರಗಃ ಪನ್ನಗೋ ಭೋಗೀ ಜಿಹ್ಮಗಃ ಪವನಾಶನಃ
ಅಮರಕೋಶ
ವನಧಿ – ಸಮುದ್ರ
ವನ–ನೀರು,
– ಪಯಃ ಕೀಲಾಲಮಮೃತಂ ಜೀವನಂ ಭುವನಂ ವನಮ್
ಅಮರಕೋಶ
– ವನಾನಿ ಧೀಯಂತೇ ಅಸ್ಮಿನ್ ಇತಿ–ವನಧಿ–ಸಮುದ್ರ
ಅನಾದಿಗನೆ – ಅನಾದಿಯಾಗಿ ಇರುವವ

Rarest Archiver

ನಿಗಮಾವಂದಿತನೆ	–	ವೇದಗಳಿಂದ ಚೆನ್ನಾಗಿ ಸ್ತುತಿಸಲ್ಪಡುವವ ನಿಗಮವೇದ ಆವಂದಿತನೆ– ಆಸಮಂತಾತ್–ವಂದಿತನೆ
	–	ಸ್ತುತಿಸಲ್ಪಡುವವ
	–	ವದಿ–ಅಭಿವಾದನ. ಸ್ತುತ್ಯೋಃ ಧಾತುವಿನಿಂದ.
ಯುಗಾದಿಕೃತ್	–	ಯುಗ ಪ್ರವರ್ತಕ, ಯುಗಗಳನ್ನುಆರಂಭಿಸುವವನು
	–	ಯುಗಾದಿಕೃತ್ ಯುಗಾವರ್ತೋ ನೈಕಮಾಯೋ ಮಹಾಶನಃ॥ ಶ್ರೀ ವಿ.ಸ. ಸ್ತೋತ್ರ
	–	ಯುಗಾನಾಮಾದಿಃ ಆರಂಭಸ್ತಂ ಕರೋತೀತಿ ಯುಗಾದಿಕೃತ್
ಯುಗಳಕರವ	–	ಎರಡೂ ಕೈಗಳನ್ನು

3ನೆಯ ನುಡಿ

ಲಾಲಿಸಿ	–	ಕೇಳಿ
ಪಾಲಿಸು	–	ರಕ್ಷಿಸು
ತೂಳಿ	–	ಉತ್ಸಾಹ
ದುರ್ಲಭ ನಾಮ	–	"ದುರ್ಲಭ" ನಾಮಧರಿಸಿದವನು–ಬಹಳ ಪರಿಶ್ರಮದಿಂದ ಹೊಂದಲು ಶಕ್ಯನು.
	–	ದುರ್ಲಭೋದುರ್ಗಮೋದುರ್ಗೋ ದುರಾವಾಸೋ ದುರಾರಿಹಾ – ಶ್ರೀವಿ.ಸ.ಸ್ತೋತ್ರ
	–	ದುಃಖೇನ ಲಬ್ಧುಂ ಶಕ್ಯಃ ದುರ್ಲಭಃ–
ಪಂಚಮೌಳಿ ಮಾನವ	–	ಸಿಂಹದತಲೆ ಮನುಷ್ಯದೇಹ ಧರಿಸಿದವ ಶ್ರೀನರಸಿಂಹ
ಕಂಭಸೀಳಿ ಮೂಡಿದದೇವ	–	ಕಂಬದಿಂದ ಉದ್ಭವಿಸಿದ ದೇವ ಶ್ರೀನರಸಿಂಹ
	–	ಸತ್ಯಂ ವಿಧಾತುಂ ನಿಜಭೃತ್ಯ ಭಾಷಿತಂ ವ್ಯಾಪ್ತಿಂಚ ಭೂತೇಷ್ವಖಿಲೇಷು ಚಾತ್ಮನಃ। ಅದೃಶ್ಯತಾತ್ಯದ್ಭುತ ರೂಪಮುದ್ವಹನ್ ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಂ॥ ಸಪ್ತಮಸ್ಕಂಧ ಭಾಗವತ

4 ನೆಯ ನುಡಿ

ವನಜಜಾಂಡ ಕಟಾಹ	–	ಬ್ರಹ್ಮಾಂಡ ಕಟಾಹ
ರಕ್ತಾಕ್ಷಿ	–	ಕೆಂಗಣ್ಣು (ಕೆಂಪುಕಣ್ಣು)
ತಟಿತ್ಕೋಟಿ	–	ಕೋಟಿ ಮಿಂಚುಗಳು
		ತಟಿತ್ ಸೌದಾಮಿನೀ ವಿದ್ಯುತ್ ಚಂಚಲಾ ಚಪಲಾ ಅಪಿ ಅಮರಕೋಶ

Rarest Archiver

– ತಟಿತ್ ಅಂದರೆ ಮಿಂಚು

ಕುಟಿಲ ರಹಿತ – ಮೋಸ ರಹಿತ

ವ್ಯಕ್ತ – ಕಣ್ಣಿಗೆ ಕಾಣಿಸಿಕೊಳ್ಳುವವನು

– ವ್ಯಕ್ತರೂಪಃ – ಕಣ್ಣಿಗೆ ಕಾಣಿಸುವ ರೂಪವುಳ್ಳವ

– ಅದೃಶ್ಯೋಽವ್ಯಕ್ತರೂಪಶ್ಚ ಸಹಸ್ರಜಿದನಂತಜಿತ್

ಶ್ರೀ ವಿ.ಸ.ಸ್ತೋತ್ರ.

ನಿಟಿಲನೇತ್ರ – ಹಣೆಯಲ್ಲಿ ಕಣ್ಣುಳ್ಳವ

ಸುರಕಟಕ – ಸುರಸಮೂಹ

– ದೇವತೆಗಳ ಸಮೂಹ

ಪರಿಪಾಲಾ – ಚೆನ್ನಾಗಿ ರಕ್ಷಿಸುವವ

5 ನೆಯ ನುಡಿ

ತನಿಗಿಡಿ – ಉಜ್ವಲವಾದ ಕಿಡಿ

ಮುಂಚೋಣಿ – ಮುಂಭಾಗದ ಸಾಲು

ಹೊಗರೆದ್ದು – ಸುತ್ತಲೂ ಕಾಂತಿಬೀರಿ

ಅಬ್ಜ – ಚಂದ್ರ (ಅಬ್ಜೋ ಜೈವಾತ್ರಕಃ ಸೋಮೋ–ಅಮರಕೋಶ)

ಅಬ್ಧಿಸಮುತ – ಏಳು ಸಮುದ್ರ (ಸಪ್ತಸಾಗರ)

ಅಬ್ಬರ – ಕೂಗು, ಆರ್ಭಟ

ಗೂಳೆಯುತಗಿಯೆ – ಸ್ಥಾನವನ್ನೇ ಬಿಡಲು

ನಿಬ್ಬರ – ತುಂಬಿದ

ಒಬ್ಬರಿಗೊಶವಲ್ಲದ – ಸರ್ವತಂತ್ರ ಸ್ವತಂತ್ರನಾದ

ಪೊರಮಟ್ಟ – ಹೊರಬಂದ, ಪ್ರಾದುರ್ಭೂತನಾದ.

6ನೆಯ ನುಡಿ

ತುಡುಕಿ – ಬಲಾತ್ಕರಿಸಿ

ಹೇರೊಡಲ – ದೊಡ್ಡಹೊಟ್ಟೆಯ

ಕೂರುಗುರು – ಮೊನಚಾದ ಉಗುರು (ಚೂಪಾದಉಗುರು)

ಪಡುವಲಗಡಲ – ಪಶ್ಚಿಮ ಸಮುದ್ರ

ನಿಡಿಗರುಳು – ದೀರ್ಘವಾದ (ದೊಡ್ಡದಾದ) ಕರುಳು

ಭೂರ್ಭುವ – ಪೂರ್ಣನಾದವನು, ಮತ್ತು ಮಹೈಶ್ವರ್ಯವುಳ್ಳವನು

– ಭೂರ್ಭುವ ಸ್ವಸ್ತರುಸ್ತಾರಃ ॥ ಶ್ರೀವಿಷ್ಣುಸಹಸ್ರನಾಮಸ್ತೋತ್ರ

7ನೆಯ ನುಡಿ

ಉರಿಮಸಗೆ – ಉರಿಹೆಚ್ಚಾಗಲು

Rarest Archiver

ಚತುರ್ದಶಧರಣಿ	–	14 ಲೋಕಗಳು
ತಲ್ಲಣ	–	ಗಾಬರಿ, ದುಃಖ
ತನ್ನಶರಣನ್ನ	–	ಪ್ರಹ್ಲಾದನ್ನ
ಕುಸುಮವರುಷ	–	ಹೂಮಳೆ
ಹರಹಿದೆ	–	ವಿಸ್ತರಿಸಿದೆ.
ಸುರರುಪದ್ರ ಹರಿಸಿ	–	ದೇವತೆಗಳಕಷ್ಟ ಪರಿಹರಿಸಿ
ಗಭೀರಾತ್ಮ	–	ಸಮಗ್ರವಾಗಿ ತಿಳಿಯಲು ಅಶಕ್ಯನಾದ ಶರೀರವುಳ್ಳವನು ಚತುರಸ್ರೋ ಗಭೀರಾತ್ಮ –ಶ್ರೀವಿಷ್ಣುಸಹಸ್ರನಾಮ
ಭೀಕರ	–	ಭಯವನ್ನುಂಟುಮಾಡುವದು.

8ನೆ ನುಡಿ (ಜತೆ)

ಪ್ರಪನ್ನ ಕ್ಲೇಶ ಭಂಜನ	–	ಶರಣಾಗತರ ದುಃಖನಿವಾರಕ.
ಮಹಹವಿಷೆ	–	ಶ್ರೇಷ್ಠನಾದವನು ಮತ್ತು ಪ್ರಳಯಕಾಲದಲ್ಲಿ ಸಮಸ್ತ ಜಗತ್ತನ್ನು ತನ್ನಲ್ಲಿ ಹೋಮಿಸಿಕೊಳ್ಳುವವನು (ಮಹಾಹವಿಃ)
	–	ನೃಸಿಂಹೋ ಜಗತೋಽಸ್ಯ ಚ ಸ್ವಮುಖೇ ಹವನಾದೇವ ಹವಿರಿತ್ಯಭಿಧೀಯತೇ ॥ (ಐತರೇಯ ಉಪನಿಷದ್‌ಭಾಷ್ಯ 2–7–6) ಇಲ್ಲಿ ಓಂ ಅತ್ತಾಚರಾಚರಗ್ರಹಣಾತ್‌ಓಂ ಸೂತ್ರಾರ್ಥವನ್ನು ಸ್ಮರಿಸಬಹುದು.

****

Rarest Archiver

ಶ್ರೀ ವಿಜಯದಾಸಾರ್ಯ ವಿರಚಿತ ಕಪಿಲದೇವರ ಸ್ತೋತ್ರ ಸುಳಾದಿ.

ಕಪಿಲದೇವರು ಸಿದ್ಧಿದಾಯಕರು, ಶಿಷ್ಟ ಜನರ ರಕ್ಷಕರು, ಅತ್ಯಂತ ಶುದ್ಧಾತ್ಮರು, ಅಪ್ರಾಕೃತಗುಣಭರಿತರು, ಆನಂದ ಸಾಗರರು, ಅಜ್ಞಾನ ರಹಿತರು, ಲಕ್ಷ್ಮೀರಮಣರು, ನಿರ್ವಿಕಾರರು, ಜ್ಞಾನಾತ್ಮಕ ದೇಹವುಳ್ಳವರು ಬಂಗಾರದ ವರ್ಣರು, ಸುಂದರಸಾರರು, ಚತುರ್ಮುಖಬ್ರಹ್ಮ ಮತ್ತು ಬಲಿಚಕ್ರವರ್ತಿಗಳು ಕಪಿಲದೇವರಿಂದ ಅತ್ಯಂತ ಅಭಿನ್ನರಾದ ವಾಮನ, ತ್ರಿವಿಕ್ರಮರ ಪಾದ ಪ್ರಕ್ಷಾಲನವನ್ನು ಮಾಡಿದರು. ಕಪಿಲದೇವರು ಮನಸ್ಸಿನಲ್ಲಿಯ ಅಜ್ಞಾನನಾಶಕರು, ವೈಕುಂಠವಾಸರು, ಲಕ್ಷ್ಮೀದೇವಿಯನ್ನು ಮೀರಿದವರು, ಜಗನ್ನಾಟಕ ಸೂತ್ರಧಾರಿಗಳು, ತಮ್ಮ ತಾಯಿಯಾದ ದೇವಹೂತಿದೇವಿಗೆ ಮೋಕ್ಷಪ್ರದವಾದ ವಿದ್ಯೆಯನ್ನು ಉಪದೇಶಿಸಿದವರು, ಸಮುದ್ರಶಾಯಿ, ಪರಸ್ಪರ ಭೇದರಹಿತ ಅವತಾರರೂಪರು, "ಮಾಯಾ" ಶಬ್ದವಾಚ್ಯಳಾದ ಲಕ್ಷ್ಮೀಪತಿ ವಾಸುದೇವರೂಪರು, ಕಮಲದಂತೆ ಸುಂದರ ನೇತ್ರವುಳ್ಳವರು, ದ್ವಿತೀಯ, ಸದೃಶವಸ್ತುರಹಿತರು, ಅನಾದಿ ಪುರುಷರು, ಸಿದ್ಧರಿಂದ ವಂದ್ಯರು, ಪಾತಾಳಲೋಕದಲ್ಲಿ ವಾಸಿಸುವವರು, ವಿಶಾಲಬುದ್ಧಿವುಳ್ಳವರು, ಪಾಪಪರಿಹಾರಕರು, ಸೂರ್ಯನಂತೆ ಬಣ್ಣವುಳ್ಳವರು, ಸರ್ವತ್ರ ವ್ಯಾಪ್ತರು, ಸರ್ವತ್ರ ಪ್ರಕಾಶವುಳ್ಳವರು, ಅಪರಿಮಿತ ಮಹಿಮರು, ಬಂಧಮೋಚಕರು, ಕರ್ದಮ ಋಷಿಗಳ ಮಗನಾಗಿ ಅವತರಿಸಿದ ಕಪಿಲದೇವರು ಅನೇಕರೂಪರು, ನಿರ್ದೋಷರು, ಕರುಣಾಸಮುದ್ರರು, ಸಜ್ಜನರನ್ನು ಉದ್ಧಾರ ಮಾಡುವವರು, ಸರ್ವರಿಗೂ ಆಧಾರಕರಾದ ಇವರೇ ಶ್ರೀವಿಜಯವಿಠ್ಠಲ ರೂಪರು[1].

ಸ್ವಾಯಂಭುವ ಮನ್ವಂತರದಲ್ಲಿ ಅವತರಿಸಿದ ಮಹಾದೇವರೇ ಕಪಿಲರು, ಸೃಷ್ಟಿಯ ಆರಂಭದಲ್ಲಿರುವ ಪರಬ್ರಹ್ಮರು ಚತುರ್ಮುಖಬ್ರಹ್ಮದೇವರ ಜನಕರು. ಯಾವಾಗಲೂ ಸಾಧುಜನ ಪ್ರಿಯರು. ಮುನಿಕುಲತಿಲಕರು. ಜ್ಞಾನಾತ್ಮಕ ಶರೀರವುಳ್ಳವರು, ಭಕ್ತರಿಗೆ ಮನೋಹರರು, ಮಾಧವರಾದ, ವಿಮಲೇಶರಾದ ಕಪಿಲದೇವರು, ವಿಜಯ ವಿಠ್ಠಲಾಭಿನ್ನರಾಗಿ ಭಕ್ತರಿಗೆ ಸಂತೋಷ ಮತ್ತು ಸದ್‌ಬುದ್ಧಿಗಳನ್ನು ದಯಪಾಲಿಸುತ್ತಾರೆ.[2]

---

1) ಧ್ರುವತಾಳ – ಸಿದ್ಧಿದಾಯಕ ಶಿಷ್ಟಜನ ಪರಿಪಾಲ ಪರಮ। ಶುದ್ಧಾತ್ಮ ಸುಗುಣಸಾಂದ್ರ ಸುಖವಾರಿಧಿ। ನಿದ್ರಾರಹಿತ ಭದ್ರಾರಮಣ ನಿರ್ವಿಕಾರ। ಚಿದ್ದೇಹ ಸರ್ವಕಾಲ, ಸುಂದರಸಾರ, ಪದ್ಮಸಂಭವ ಬಲಿ ಪ್ರಕ್ಷಾಲಿತಪಾದ ಮಹ। ಹೃದ್ರೋಗನಾಶ ವೈಕುಂಠವಾಸ, । ವಿದ್ಯಾತೀತ ವಿಶ್ವನಾಟಕ ನಾರಾಯಣ, ವಿದ್ಯಉದ್ಧಾರಕ, ಉದಧಿಸದನ,। ಸಿದ್ಧಾದಿ ವಿನುತ ಸಂತತ ಪಾತಾಳವಾಸಿ। ಬುದ್ಧಿ ವಿಶಾಲ ಮಹಿಮ, ಪಾಪಹಾರಿ। ಖದ್ಯೋತವರ್ಣ, ಸಕಲವ್ಯಾಪ್ತ, ಆಕಾಶಅಮಿತ। ಬಂಧವಿಚ್ಛೇದ ನಾನಾರೂಪಾತ್ಮಕ। ಅದ್ವೈತಕಾಯ, ಮಾಯಾರಮಣ ರಾಜೀವನೇತ್ರ । ಅದ್ವಯ, ಅನಾದಿ ಪುರುಷ ಚಿತ್ರ । ಕರ್ದಮ ಮುನಿಸೂನು ವಿಜಯ ವಿಠ್ಠಲಕಪಿಲ। ನಿರ್ದೋಷ ಕರುಣಾಬ್ಧಿ ಸರ್ವರಾಧಾರಿ॥ (ಸರ್ವಾಧಾರ)

2) ಮಟ್ಟತಾಳ – ಆದಿ ಮನ್ವಂತರದಿ ಉದಿಸಿದ ಮಹಾದೇವ। ಆದಿಪರಬೊಮ್ಮ ಬೊಮ್ಮನಯ್ಯ ಜೀಯ। ಸಾಧು ಜನರ ಪ್ರಿಯ ಸಂತತ ಮುನಿ ತಿಲಕ। ಬೋಧ ಶರೀರ ಭಕುತ ಮನೋಹರ। ಮಾಧವ ಸಿರಿ ವಿಜಯ ವಿಠ್ಠಲ, ವಿಮಲೇಶ। ಮೋದಮತಿಯ ಕೊಡುವ ಕಪಿಲ ಭಗವನ್ಮೂರ್ತಿ ॥2॥

Rarest Archiver

ಕಪಿಲದೇವರು ಘನಮಹಿಮರು. ಈ ತ್ರಿಗುಣಾತ್ಮಕ ಬ್ರಹ್ಮಾಂಡದಲ್ಲಿ ಲೀಲೆಯಿಂದ ಅವತರಿಸಿ ಬಿಂದುಸರೋವರದಲ್ಲಿ ಮೆರೆದರು. ಹೊಳೆಯುವ ಎರಡು ಹಸ್ತವುಳ್ಳ ಇವರು ಪ್ರಾಕೃತಶರೀರ ರಹಿತರು. ಇವರ ಕೇಶಗಳು ಸೂರ್ಯನಂತೆ ಹೊಳೆಯುವವು. ಈ ಕಪಿಲದೇವರ ಕಾಂತಿಯು ಬಂಗಾರದ ಗೊಂಬೆಯಂತೆ ಮೂರು ಲೋಕಗಳಲ್ಲಿಯೂ ಯಾವಾಗಲೂ ತುಂಬಿ ಸೂಸುತ್ತದೆ. ತಾಯಿಯಾದ ದೇವಹೂತೀದೇವಿಗೆ ಪ್ರಕೃತಿ ಮೊದಲಾದ ತತ್ತ್ವಗಳನ್ನು ತಿಳಿಸಿದ ಇವರು ಸಜ್ಜನರನ್ನು ರಕ್ಷಿಸುತ್ತಾರೆ. ನಿತ್ಯ ನಿಮ್ಮನ್ನು ಧ್ಯಾನಮಾಡಿ ನಿಮ್ಮ ಪರಮ ಮಂಗಲವಾದ ನಾಮವನ್ನು ಜಪಮಣಿಯಿಂದ ಜಪಿಸುವವರಿಗೆ, ಜ್ಞಾನ ಕೊಡುವ ನಿಮ್ಮ ಜ್ಞಾನಶಕ್ತಿಗೆ ಮಿತಿಯೇ ಇಲ್ಲ. ನಿಮ್ಮ ಕಣ್ಣಿನಿಂದ ಹೊರಟ ಜ್ವಾಲೆಯು ಸಗರನ 60,000 ಮಕ್ಕಳನ್ನು ಸುಟ್ಟು ಭಸ್ಮಮಾಡಿದೆ. ನಿಮ್ಮನ್ನು ನಂಬಿದ ಭಕ್ತರಿಗೆ ಮಹಾಪದವಿ ಪ್ರಾಪ್ತವಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಮುನಿಕುಲೋತ್ತಮ ಕಪಿಲರೂಪೀ ವಿಜಯವಿಠಲನೇ ನನಗೆ ಯೋಗ ಮಾರ್ಗವನ್ನು ಪ್ರೀತಿಯಿಂದ ತೋರಿಸು.[3]

ಪ್ರಾತಃಕಾಲದಲ್ಲಿ ಎದ್ದು "ಕಪಿಲ" "ಕಪಿಲ" ಎಂದು ಏಳು ಬಾರಿ ಉಚ್ಚರಿಸಿದ ಮನುಷ್ಯನಿಗೆ ಅಪಜಯ ಮೊದಲಾದ ದುಃಖಲೇಶವೂ ಇಲ್ಲ. ಅವನ ಕುಲಕೋಟಿಗೆ ಅಪರಿಮಿತ ಸೌಖ್ಯವಾಗುತ್ತದೆ. ಈ ರಹಸ್ಯನಾಮವನ್ನು ಮನಸ್ಸಿನಲ್ಲಿಡಬೇಕು. ಇವರು ಸಾಮಾನ್ಯ ಒಬ್ಬ ಋಷಿಯೆಂದು ತಿಳಿಯುವ ದುಷ್ಟರು ನಿತ್ಯ ನರಕದಲ್ಲಿ ದುಃಖ ಪಡುತ್ತಾರೆ. ದೀನ ಬಂಧು ನಮ್ಮ ಕಪಿಲರೂಪೀ ವಿಜಯವಿಠಲನು ಜ್ಞಾನಿಗಳಿಗೆ ಬಹು ಸುಲಭನು.[4] (ಸುಲಭನೋ ಹರಿ-ತನ್ನವರಿಗೆ ಎಂಬ ಶ್ರೀ ಜಗನ್ನಾಥದಾಸರ ಮಾತನ್ನು ಇಲ್ಲಿ ಸ್ಮರಿಸಬಹುದು.)

---

3) ತ್ರಿವಿಡಿತಾಳ-ಘನಮಹಿಮ ಗೌಣಾಂಡದೊಳಗೆ ಲೀಲೆಯಿಂದ ಜನಿಸಿ ಮೆರೆದೆ ಬಿಂದು ಸರೋವರದಲ್ಲಿ। ಮಿನುಗುವ ದ್ವಯಹಸ್ತ ಅಪ್ರಾಕೃತಕಾಯ। ಇನನಂತೆ ಒಪ್ಪುವ ಶಿರೋರರುಹವು। ಕನಕ ಪುತ್ಥಳಿಯಂತೆ ಕಾಂತಿ ತ್ರಿಭುವನಕ್ಕೆ। ಅನವರತ ತುಂಬಿ ಸೂಸುತಿದೇಕೋ। ಜನನಿ ದೇವಹೂತಿಗೆ ಉಪದೇಶವನೆ ಮಾಡಿ। ಗುಣ ಮೊದಲಾದ ತತ್ವಧಾರೆ ತಿಳಿಸಿದೆ ನಿತ್ಯದಲಿ। ಜನರನ್ನು ಪಾಲಿಸುವೆ ಕಪಿಲಾಖ್ಯನೆ। ಅನುದಿನ ನಿನ್ನ ಧ್ಯಾನ ಮಾಡಿ ಮಣಿಯಿಂದ। ಎಣಿಸಿದ ಸುಜನರಿಗೆ ಜ್ಞಾನ ಕೊಡುವೆ। ಎಣೆಗಾಣೆ ನಿನ್ನಾಲೋಚನೆ ಶಕ್ತಿಗೆ ಸಗರ। ಜನಪನಂದನರನ್ನು ದಂಡಿಸಿದೆ। ಅನುಮಾನವಿದಕಿಲ್ಲ ನಿನ್ನ ನಂಬಿದ ದೃಢ। ಮನುಜರಿಗೆ ಮಹಾಪದವಿ ಬರುವುದಯ್ಯ। ಮುನಿಕುಲೋತ್ತಮ ಕಪಿಲ ವಿಜಯವಿಠ್ಠಲರೇಯ। ಎನಗೆ ಯೋಗ ಮಾರ್ಗ ತೋರೋ ತವಕದಿಂದ॥[3]

4) ಅಟ್ಟತಾಳ-ಕಪಿಲ ಕಪಿಲ ಎಂದು ಪ್ರಾತಃಕಾಲದಲೆದ್ದು। ಸಪುತ ಸಾರಿ ನಾಲಿಗೆಯಲ್ಲಿ ನುಡಿದ ಮಾನವನಿಗೆ। ಅಪಜಯ ಮೊದಲಾದ ಕ್ಲೇಶಗಳೊಂದಿಲ್ಲ। ಅಪರಿಮಿತ ಸೌಖ್ಯ ಅವನ ಕುಲಕೋಟಿಗೆ। ಗುಪಿತನಾಮವಿದು ಮನದೊಳಗಿಡುವದು। ಕಪಟ ಮಾನವರು ಈತನು ಒಬ್ಬ ಋಷಿ ಎಂದು। ತಪಿಸುವರು ಕಾಣೋ ನಿತ್ಯನರಕದಲಿ। ಕೃಪಣ ವತ್ಸಲ ನಮ್ಮ ವಿಜಯವಿಠ್ಠಲರೇಯ। ಕಪಿಲಾವತಾರವನು ಬಲ್ಲವಗೆ ಬಹುಸುಲಭ॥ [4]

Rarest Archiver

ಇಲ್ಲಿ ಕಪಿಲನಾಮಕ ಪರಮಾತ್ಮನಿರುವ ಅಧಿಷ್ಠಾನಗಳನ್ನು ಶ್ರೀ ದಾಸವರ್ಯರು ವರ್ಣಿಸಿದ್ದಾರೆ. ಈ ಅಧಿಷ್ಠಾನಗಳಲ್ಲಿ ಉಪಾಸನೆಮಾಡುವ ಭಕ್ತರ ಭಾರವನ್ನು ಕಪಿಲದೇವರು ವಹಿಸುತ್ತಾರೆಂದು ಶ್ರೀದಾಸರು ಭರವಸೆಯನ್ನಿತ್ತಿದ್ದಾರೆ. ಕಪಿಲರೂಪೀ ಭಗವಂತನು ಸನ್ನಿಹಿತವಾಗಿರುವ ಸ್ಥಾನಗಳು.-ಬಲಹಸ್ತದಲ್ಲಿ, ಯಜ್ಞಮಂಟಪದಲ್ಲಿ, ಕಣ್ಣಿನಲ್ಲಿರುವ ಕಪ್ಪುಗುಡ್ಡೆಯಲ್ಲಿ, ಹೃದಯದಲ್ಲಿ, ನಾಭಿಯಲ್ಲಿ, ಗಂಗೆಯು ಸಮುದ್ರಕ್ಕೆ ಕೂಡುವ ಸಂಗಮದಲ್ಲಿ, ನಮ್ಮ ಬರುವಿಕೆ, ಹೋಗುವಿಕೆ ಕ್ರಿಯೆಗಳಲ್ಲಿ, ತುಲಸೀಪತ್ರದಲ್ಲಿ ಕುದುರೆಯಲ್ಲಿ, ಆಕಳಿನಲ್ಲಿ, ಮಲಗುವ ಮನೆಯಲ್ಲಿ ನೈವೇದ್ಯ ಕಾಲದಲ್ಲಿ ಕರ್ಮಬಂಧನ ಮೋಚಕ ಅಪರೋಕ್ಷಕಾಲದಲ್ಲಿ, ಸುಂದರ ಪುರುಷನಲ್ಲಿ, ವಿದ್ಯೆ ಉಪದೇಶಿಸುವ ಗುರುಗಳಲ್ಲಿ ಫಲದಲ್ಲಿ, ಪ್ರತಿಬಂಧವಿಲ್ಲದ ಸ್ಥಳದಲ್ಲಿ, ಬೆಳೆದ ದರ್ಭೆಗಳಲ್ಲಿ, ಅಗ್ನಿಯಲ್ಲಿ ಹರಿವ ನೀರಿನಲ್ಲಿ ಬಂಗಾರದಲ್ಲಿ, ಶ್ಲೋಕದಲ್ಲಿ, ಕಪಿಗಳ ಹಿಂಡಿನಲ್ಲಿ, ಆಚಾರವಂತನಲ್ಲಿ, ಘಳಿಗೆ ಪ್ರಾರಂಭಕಾಲದಲ್ಲಿ, ಪಶ್ಚಿಮದಿಕ್ಕಿನಲ್ಲಿ, ಹೊಳೆಯುವ ಮಿಂಚಿನಲ್ಲಿ, ಬಂಗಾರದಲ್ಲಿ, ಇವೆಲ್ಲ ಸ್ಥಳಗಳಲ್ಲಿ ಕಪಿಲನಾಮಕ ಪರಮಾತ್ಮನನ್ನು ಸ್ಮರಿಸುವವರಿಗೆ ಸಂಸಾರದಲ್ಲಿ ಜಯವುಂಟು ಕಲಿಯುಗದಲ್ಲಿ ಹೀಗೆ ಕಪಿಲರೂಪೀ ಭಗವಂತನನ್ನು ಕೊಂಡಾಡುವ ಜನರಿಗೆ ದುಷ್ಟರ ಭಯವಿಲ್ಲ. ಯಾವಾಗಲೂ ಅವರಿಗೆ ಶುಭವಾಗುತ್ತದೆ. ಬಲಿಯ ವೈರಿಯಾದ ಇಂದ್ರನಿಂದ ವಂದ್ಯನಾದ, ಕಪಿಲನಾಗಿ ಅವತರಿಸಿದ ವಿಜಯವಿಠ್ಠಲನು ಭೂಮಿಯಲ್ಲಿ ನಮ್ಮ ಭಾರವಹಿಸುವನು. (ರಕ್ಷಿಸುವನು.)[5]

ಈ ಕಪಿಲರೂಪೀ ಭಗವಂತನ ಸ್ಮರಣೆ ತಮಸ್ಸನ್ನು, ಅಜ್ಞಾನವನ್ನು ನಾಶಮಾಡುತ್ತದೆ. ಆಗ ಹೃದಯಕಮಲದಲ್ಲಿ ವಿಜಯವಿಠ್ಠಲನ ಚರಣಕಮಲವನ್ನು ನೋಡು, (ಕಪಿಲಾತ್ಮಕ ಶ್ರೀವಿಜಯವಿಠ್ಠಲನು ಹೃದಯಮಂದಿರದಲ್ಲಿ ಹೊಳೆಯುವನು) [6]

---

5. ಆದಿತಾಳ-ಬಲಹಸ್ತದಲ್ಲಿ ಯಜ್ಞಶಾಲೆಯಲ್ಲಿ ಕಂ। ಗಳ ಕಪ್ಪಿನಲ್ಲಿ ಹೃದಯಸ್ಥಾನ ನಾಭಿಯಲ್ಲಿ। ಜಲಧಿಗಂಗಾಸಂಗಮದಲ್ಲಿ ಗಮನದಲ್ಲಿ। ತುಲಸೀಪತ್ರದಲ್ಲಿ ತುರಗ, ತುರುವಿನಲ್ಲಿ। ಮಲಗುವ ಮನೆಯಲ್ಲಿ, ನೈವೇದ್ಯ ಸಮಯದಲ್ಲಿ। ಬಲುಕರ್ಮ ಬಂಧಗಳು ಮೋಚನೆಯಾಗುವಲ್ಲಿ। ಚೆಲುವನಾದವನಲ್ಲಿ, ವಿದ್ಯೆ ಪೇಳುವನಲ್ಲಿ। ಫಲದಲ್ಲಿ ಪ್ರತಿಕೂಲವಿಲ್ಲದ ಸ್ಥಳದಲ್ಲಿ। ಬೆಳೆದ ದರ್ಭೆಗಳಲ್ಲಿ ಅಗ್ನಿಯಲ್ಲಿ ಹರಿವ। ಜಲದಲ್ಲಿ ಜಾಂಬುನದ ನದಿಯಲ್ಲಿ। ಶ್ಲೋಕದಲ್ಲಿ ಬಲಿಮುಖ ಬಳಗದಲ್ಲಿ ಆಚಾರಶೀಲನಲ್ಲಿ। ಘಳಿಗೆ ಆರಂಭದಲ್ಲಿ ಪಶ್ಚಿಮಭಾಗದಲ್ಲಿ ಪೊಳೆವ ಮಿಂಚಿನಲ್ಲಿ ಬಂಗಾರದಲ್ಲಿ ಇನಿತು। ಕಾಲಕಾಲಕ್ಕೆ ಬಿಡದೆ ಸ್ಮರಿಸು ಕಪಿಲ ರೂಪಾತ್ಮನ್ನ। ಗೆಲುವುಂಟು ನಿನಗೆಲವೋ ಸಂಸಾರದಿಂದ ವೇಗ। ಕಲಿಯುಗದೊಳಗಿದೆ ಕೊಂಡಾಡಿದವರಿಗೆ। ಖಳರ ಅಂಜಿಕೆಯಿಲ್ಲ ನಿಂದಲ್ಲೆ ಶುಭಯೋಗ। ಬಲವೈರಿನುತ ನಮ್ಮ ವಿಜಯವಿಠ್ಠಲರೇಯ। ಇಳೆಯೊಳು ಕಪಿಲನಾಗಿ ನಮ್ಮ ಭಾರವಹಿಸುವ॥ [5]

6. ಜತೆ-ತಮ ಪರಿಚ್ಛೇದ ಈತನ ಸ್ಮರಣೆ, ನೋಡು ಹೃತ್ಕಮಲದೊಳಗೆ ತ್ಕಮಲದೊಳಗೆ ವಿಜಯ ವಿಠಲನ್ನ ಚರಣಾಬ್ಜ॥ [6]

****

Rarest Archiver

ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀಕಪಿಲದೇವರಸ್ತೋತ್ರಸುಳಾದಿ ವಿಶೇಷಾರ್ಥಗಳು

1ನೆಯ ನುಡಿ

ಕಪಿಲ – ಕಶ್ಚ ಪಿಶ್ಚ ಕಪೀ ತೌ ಮೋಕ್ಷದಾನಾದಿನಾ ಲಾತಿ–ಪಾತಿ–ಕಪಿಲಃ ಬ್ರಹ್ಮರುದ್ರಾದಿಗಳಿಗೆ ಮೋಕ್ಷಾದಿಗಳನ್ನಿತ್ತು ರಕ್ಷಿಸುವುದರಿಂದ ಭಗವಂತನಿಗೆ "ಕಪಿಲ" ನೆಂದು ಹೆಸರು.

ನಿದ್ರಾರಮಣ – ದುರ್ಗಾರಮಣ

ಉದಧಿಸದನ – ಸಮುದ್ರವೇ ವಾಸಸ್ಥಾನ (ಕ್ಷೀರಾಬ್ಧಿವಾಸ)

ಭದ್ರಾರಮಣ – ಲಕ್ಷ್ಮೀರಮಣ

ಹೃದ್ರೋಗನಾಶ – ಅಜ್ಞಾನನಾಶಕ

ಅದ್ವೈತಕಾಯ – ಅವತಾರ ರೂಪಗಳಲ್ಲಿ ಭೇದರಹಿತ ಸರ್ವತ್ರ ಚ ಸ್ವಗತಭೇದ ವಿವರ್ಜಿತಾತ್ಮಾ (ತಾ.ನಿ) ಮಾತನ್ನು ಇಲ್ಲಿ ಸ್ಮರಿಸಬೇಕು.

ಮಾಯಾರಮಣ– ಮಾಯಾ (ಶ್ರೀದೇವಿ) ಪತಿ ವಾಸುದೇವ

ಅನಾದಿ ಪುರುಷ– ಆದಿರಹಿತ ಪುರುಷ

ಅದ್ವಯ – ಸದೃಶರಹಿತ
– ನತ್ವತ್ಸಮೋಽಸ್ತ್ಯಭ್ಯಧಿಕಃಕುತೋನ್ಯೋ– ಲೋಕತ್ರಯೇಽಪ್ಯಪ್ರತಿಮಪ್ರಭಾವ । ಗೀತಾ.

ನಿರ್ದೋಷ – ದೋಷರಹಿತ – ನಿರ್ದೋಷಪೂರ್ಣಗುಣವಿಗ್ರಹ ಆತ್ಮತಂತ್ರಃ (ತಾ.ನಿ.)

ಖದ್ಯೋತ – ಸೂರ್ಯ

ಆಕಾಶ – ಎಲ್ಲಕಡೆ ಪ್ರಕಾಶರೂಪ

ಬಂಧ ವಿಚ್ಛೇದ – ಸಂಸಾರಮೋಚಕ

2ನೆಯ ನುಡಿ

ಆದಿಮನ್ವಂತರ – ಸ್ವಾಯಂಭುವ ಮನ್ವಂತರ

ಬೊಮ್ಮನಯ್ಯ – ಚತುರ್ಮುಖಬ್ರಹ್ಮನ ಜನಕ

ಬೋಧಶರೀರ – ಜ್ಞಾನದೇಹ

ಮೋದಮತಿ – ಸದ್‌ಬುದ್ಧಿ

3ನೆಯ ನುಡಿ

ಗೌಣಾಂಡ – ತ್ರಿಗುಣಾತ್ಮಕ ಬ್ರಹ್ಮಾಂಡ

ಮಿನುಗುವ – ಹೊಳೆಯುವ

Rarest Archives

ಇನನಂತೆ	–	ಸೂರ್ಯನಂತೆ
ಶಿರೋರುಹ	–	ಕೇಶರಾಶಿ
ಕನಕಪುತ್ಥಳಿ	–	ಬಂಗಾರದ ಪ್ರತಿಮೆ
ಲೋಚನಶಕ್ತಿ	–	ಜ್ಞಾನಶಕ್ತಿ
ತವಕದಿಂದ	–	ಪ್ರೀತಿಯಿಂದ

4ನೆಯ ನುಡಿ

ಸಪುತಸಾರಿ	–	ಏಳು ಸಲ
ಗುಪಿತನಾಮ	–	ಗುಪ್ತನಾಮ

5ನೆಯ ನುಡಿ

ಜಾಂಬೂನದ	–	ಬಂಗಾರ
ಇಳೆ	–	ಭೂಮಿ

6ನೆಯ ನುಡಿ

ತಮ	–	ಕತ್ತಲೆ, ಅಜ್ಞಾನ
ಹೃತ್ಕಮಲ	–	ಹೃದಯ ಕಮಲ.

****

ಶ್ರೀವಿಜಯದಾಸಾರ್ಯ ವಿರಚಿತ
ಶ್ರೀಧನ್ವಂತ್ರಿದೇವರ ಸ್ತೋತ್ರಸುಳಾದಿ

ವೈದ್ಯಮೂರ್ತಿ ಧನ್ವಂತರಿಯನ್ನು ಸ್ತೋತ್ರಮಾಡಿದರೆ ಆಯುಷ್ಯ ಅಭಿವೃದ್ಧಿಯಾಗುತ್ತದೆ. ಶ್ರೇಯಸ್ಸು ಬರುತ್ತದೆ. ಅದು ಶರೀರ ಶುದ್ಧಿಗೆ ಕಾರಣವಾಗುತ್ತದೆ. ಪ್ರಕೃತಿಯ ಕಾರ್ಯನಡೆಯುವದೇ ಇಲ್ಲ. ವಿವಿಧ ರೋಗಗಳಿಗೆ ಇರುವ ಕಾರಣವನ್ನೇ ಪರಿಹರಿಸುತ್ತದೆ. ನಾಯಿ, ನರಿ ಮೊದಲಾದ ಹೀನ ಯೋನಿಗಳನ್ನು ಹೊಂದಿ ದುಷ್ಟಕರ್ಮಗಳಿಂದ ಮಾಡಲ್ಪಟ್ಟ ಸಂಚಿತ ಕರ್ಮಭರಿತವಾದ ತುಚ್ಛವಾದ ದುಃಖಸಾಗರದಲ್ಲಿ ಬಿದ್ದು ಬಳಲಿ ನೊಂದು ನೆಲೆಸಿಕ್ಕದೇ ಇರುವಾಗ ಒಮ್ಮೆ ಮಾನವನು ತನ್ನ ಬಾಯಲ್ಲಿ ವೈದ್ಯಮೂರ್ತಿ ಶ್ರೀಧನ್ವಂತ್ರಿಯು ಚಂದ್ರನ ಅಂತರ್ಯಾಮಿಯಾಗಿದ್ದು ಔಷಧಿಗಳಿಗೆ ನಿಯಾಮಕನಾಗಿ, ಅವನೇ ಸ್ವತಂತ್ರಕರ್ತ, ಲಕ್ಷ್ಮೀಪತಿಯೆಂದು ಸ್ತೋತ್ರಮಾಡಲು, ತಾಯಿಯಾದವಳು, ತನ್ನ ಮಗುವನ್ನು ರಕ್ಷಿಸುವಂತೆ, ಧನ್ವಂತ್ರಿರೂಪೀ ಭಗವಂತನು ದುಃಖಕೊಡದೇ ನಮ್ಮನ್ನು ರಕ್ಷಿಸುವ ಧ್ಯೇಯವುಳ್ಳವನಾಗಿದ್ದಾನೆ. ಇವನು ಧರ್ಮವನ್ನು ತಿಳಿದವನು, ಗುಣ ಪರಿಪೂರ್ಣನು, ತನ್ನನ್ನು ಭಜಿಸುವವರಿಗೆ ಶ್ರೇಯಸ್ಸನ್ನು ಕೊಡುವನು. ತನ್ನ ಇಚ್ಛೆಯಿಂದ ಈ ಜಗತ್ತನ್ನು ವ್ಯಾಪಿಸಿ ಸಜ್ಜನರಿಗೆ ಬಾಧೆಯುಂಟಾಗದಂತೆ ಕಾರ್ಯಮಾಡುವ, ವಾಯುದೇವರಿಂದ ವಂದಿತನಾದ ನಿತ್ಯನಾದ ವಿಜಯವಿಠಲರೂಪೀ ಧನ್ವಂತ್ರಿಯು ನಮಗೆ ಪ್ರಿಯನು ಎಂದು ತಿಳಿಯಬೇಕು. ಅವನು ನಮ್ಮ ಜನನ

Rarest Archiver

ಮರಣರೂಪವಾದ ಅನಾದಿರೋಗವನ್ನು ಪರಿಹರಿಸಿ ಜ್ಞಾನವನ್ನು ಕೊಟ್ಟು ಕೊನೆಗೆ ಮುಕ್ತಿಯನ್ನು ದಯಪಾಲಿಸುತ್ತಾನೆ.[1]

ಆ ಭಗವಂತನನ್ನು ಧನ್ವಂತ್ರಿ, ಧನ್ವಂತ್ರಿ ಎಂಬುದಾಗಿ ಸ್ತೋತ್ರಮಾಡಿ ಯಾವಾಗಲೂ ಅವನು ಈಶ ನಾವು ದಾಸರು ಎಂಬು ಭೇದಜ್ಞಾನದಿಂದ, ನಾನು ನಿನ್ನ ದಾಸ, ನಿನ್ನವನು ಎಂದು ಭಕ್ತಿಪೂರ್ವಕವಾಗಿ ನಮಸ್ಕರಿಸುವ, ಸ್ಮರಿಸುವ, ಮನುಷ್ಯನು ಈ ಬ್ರಹ್ಮಾಂಡದಲ್ಲಿ (ಪ್ರಪಂಚದಲ್ಲಿ) ಧನ್ಯನು, ಧನ್ಯನು, ನಿರ್ದುಷ್ಟಮೂರ್ತಿಯಾದ, ಸುಪ್ರಸನ್ನನಾದ, ವಿಜಯವಿಠ್ಠಲರೂಪೀ ಧನ್ವಂತ್ರಿಯು ಸತ್ಯಸಂಕಲ್ಪನೆಂದು ಅನೇಕ ರೀತಿಯಾಗಿ ವರ್ಣಿಸುತ್ತಿರು. [2].

ಶ್ರೀಧನ್ವಂತರೀರೂಪೀಭಗವಂತನು ಚಂದ್ರಕುಲದಲ್ಲಿ ಹುಟ್ಟಿದ ದೀರ್ಘತಪನೆಂಬುವನ ಮಗನಾಗಿ ಅವತರಿಸಿದನು. ಶುಭ್ರವರ್ಣದ ಇವನು ಪ್ರಕಾಶರೂಪಿಯು. ಇವನು ಸರ್ವಸಮರ್ಥನಾದ್ದರಿಂದ ಪ್ರಭುವೂ (ಪ್ರಭುಃ–ಸಮರ್ಥಃ) ಅನೇಕ ರೂಪಗಳನ್ನು ಪಡೆಯುವುದರಿಂದ ವಿಭುವೂ ಆಗಿದ್ದಾನೆ (ಗೀತಾಭಾಷ್ಯ–10–12) (ವಿವಿಧಂ ಆಸೀದಿತಿ ವಿಭುಃ) ಚಂದ್ರಮಂಡಲದಲ್ಲಿರುವ ಈ ಧನ್ವಂತರಿಯು ಎರಡು ಕಲಶಗಳನ್ನು (ನೀರು ಬಡಿಸುವದೊಂದು ಕಲಶ, ಇನ್ನೊಂದು ಅಮೃತಪೂರಿತಕಲಶವೆಂದು ತಿಳಿಯಬೇಕು) ಕೈಗಳಲ್ಲಿಧರಿಸಿದವನಾಗಿದ್ದಾನೆ ಇವನು ಪದ್ಮಲೋಚನನು, ದೇವಲೋಕದ ವೈದ್ಯರಾದ ಅಶ್ವಿನೀದೇವತೆಗಳಿಂದ ವಂದ್ಯನಾಗಿದ್ದಾನೆ. ಚಂದ್ರನನ್ನು ಗರ್ಭದಲ್ಲಿ ಧರಿಸಿದ ಇವನು ಗಿಡಗಳು, ಬಳ್ಳಿಗಳು, ಕಂಟಿಗಳು, ತಾಪವನ್ನು ಪರಿಹರಿಸುವ ಔಷಧಿಗಳು, ತುಲಸಿ

---

1. ಧ್ರುವತಾಳ–ಆಯುವೃದ್ಧಿಯಾಗೋದು ಶ್ರೇಯಸ್ಸು ಬರುವುದು। ಕಾಯನಿರ್ಮಲಿನ ಕಾರಣವಾಹುದೋ। ಮಾಯ ಹಿಂದಾಗುವುದು ನಾನಾರೋಗದ ಬೀಜ। ಬೇಯಿಸಿ ಕಳೆವದು ವೇಗದಿಂದ। ನಾಯಿ ಮೊದಲಾದ ಕುತ್ಸಿತದೇಹ ನಿ। ಕಾಯವ ತೆತ್ತು ದುಷ್ಕರ್ಮದಿಂದ। ಕ್ರಿಯಮಾಣ ಸಂಚಿತಭರಿತವಾಗಿದ್ದ ದುಃಖ। ಹೇಯ ಸಾಗರದೊಳು ಬಿದ್ದು ಬಳಲಲೀ। ನೋಯಿಸಿಕೊಂಡು ನೆಲೆಗಾಣದೆ ಒಮ್ಮೆ ತನ್ನ। ಬಾಯಲಿ ವೈದ್ಯಮೂರ್ತಿ ಶ್ರೀಧನ್ವಂತ್ರಿ। ರಾಯ ರಾಜೌಷಧಿನಿಯಾಮಕ ಕರ್ತ। ಶ್ರೀಯರಸನೆಂದು ತುತಿಸಲಾಗಿ। ತಾಯಿಪೊದಗಿಬಂದು ಬಾಲನ್ನಸಾಕಿದಂತೆ। ನೋಯಗೊಡದೆ ನಮ್ಮನ್ನು ಪಾಲಿಪ। ಧ್ಯೇಯ ದೇವಾದಿಗಳಿಗೆ ಧರ್ಮಜ್ಞ ಗುಣಸಾಂದ್ರ। ಶ್ರೇಯಸ್ಸು ಕೊಡುವನು ಭಜಕರಿಗೆ। ಮಾಯಾಮಂತ್ರದಿಂದ ಜಗವೆಲ್ಲ ವ್ಯಾಪಿಸಿ ಸ। ನ್ಯಾಯವಂತನಾಗಿ ಚೇಷ್ಟೆ ಮಾಳ್ಪ। ವಾಯುವಂದಿತ ನಿತ್ಯ ವಿಜಯವಿಠ್ಠಲರೇಯ। ಪ್ರೀಯನು ಕಾಣೋ ನಮಗೆ ಅನಾದಿರೋಗ ಕಳೆವ ॥1॥

2. ಮಟ್ಟತಾಳ –ಧನ್ವಂತ್ರಿ ಶ್ರೀಧನ್ವಂತ್ರಿ ಎಂದು। ಸನ್ನುತಿಸಿ ಸತತ ಭಿನ್ನಜ್ಞಾನದಿಂದ। ನಿನ್ನವ ನಿನ್ನವನೆಂದು ಘನ್ನತಿಯಲಿ ನೆನೆವ। ಮನ್ನುಜ ಭುವನದೊಳು ಧನ್ಯನು ಧನ್ಯವೆನ್ನಿ। ಚನ್ನಮೂರುತಿ ಸುಪ್ರಸನ್ನ ವಿಜಯವಿಠ್ಠ। ಲನ್ನ ಸತ್ಯವೆಂದು ಬಣ್ಣಿಸು ಬಹುವಿಧದಿ ॥2॥

Rarest Archiver

ಇವುಗಳ ಜನಕನಾಗಿದ್ದೀ. ಸಂಪತ್ತಿಗೆ ಸ್ವಾಮಿಯು. ದೇವತೆಗಳು ಮತ್ತು ಅಸುರಸಮೂಹ ಸೇರಿ ಮಂದರಪರ್ವತವನ್ನು ತಂದು ನಡುಗದೇ ಕ್ಷೀರಸಮುದ್ರವನ್ನು ಮಥನಮಾಡುತ್ತಿರಲು ನಸುನಗುತ್ತ ಅಮೃತಕಲಶವನ್ನು ಧರಿಸಿ ನೀನು ಅವತಾರ ಮಾಡಿದೆ. ನಿನಗೆ ದೇವತೆಗಳಲ್ಲಿಯೂ ಸಮರು ಯಾರೂ ಇಲ್ಲ. ನಿನ್ನ ಮಹಿಮೆಗೆ ಮತ್ತೆ ಮತ್ತೆ ನಮಸ್ಕಾರಗಳು. ಬ್ರಹ್ಮ ರುದ್ರ ಮೊದಲಾದ ದೇವತೆಗಳು, ಋಷಿ ಸಮೂಹ ಎಲ್ಲರೂ ನಿನ್ನನ್ನು ಕೊಂಡಾಡುತ್ತಾರೆ. ಹತ್ತು ದಿಕ್ಕುಗಳಲ್ಲಿ ಮೆರೆಯುವ ವಿಜಯವಿಠ್ಠಲರೂಪೀ ಧನ್ವಂತರಿಯು ವೈದ್ಯನೆನಿಸಿ ಪ್ರಾಣ ಮತ್ತು ಇಂದ್ರಿಯಗಳ ರೋಗಗಳನ್ನು ನಿವಾರಿಸುತ್ತಾನೆ. [3]

ಧನ್ವಂತರೀ ರೂಪಿಯಾದ ಭಗವಂತನೇ ನಿನಗೆ ಶರಣು, ಶರಣು (ಆದರಾರ್ಥೇದ್ವಿರುಕ್ತಿಃ ಉಕ್ತಿಯಂತೆ) ನೀನು ತಮೋಗುಣವನ್ನು ನಾಶ ಮಾಡುವಿ, ದುಃಖಿತರಾದ ಜನರ ರಕ್ಷಕನಾಗಿರುವಿ, ಕಲ್ಪವೃಕ್ಷದಂತೆ ಬೇಡಿದ್ದನ್ನು ಕೊಡುವಿ, ಸಂಸಾರದ ತಾಪವನ್ನು ಪರಿಹರಿಸುವಿ, ದೈತ್ಯರನ್ನು ನಾಶಮಾಡುವಿ, ನಿನ್ನಲೀಲೆಯಿಂದ ಎಲ್ಲರನ್ನೂ ಮೋಹಿಸುತ್ತೀ, ಶ್ರೇಷ್ಠವಾದ ಜ್ಞಾನಾನಂದಾದಿ ಪರಿಪೂರ್ಣನಾಗಿರುವಿ, ಆಯುರ್ವೇದ ಪ್ರವರ್ತಕನಾಗಿರುವಿ, ಉತ್ಕೃಷ್ಟವಾದ ಪರಾಕ್ರಮವುಳ್ಳವನು, ಶೇಷಶಾಯಿಯು ಆಗಿರುವಿ, ನೀನು ಶ್ರೇಷ್ಠವಾದ ಕಿರೀಟ, ಕೌಸ್ತುಭಮಣಿ, ಕರ್ಣಕುಂಡಲಗಳು, ಮಿಂಚುವ ಹಸ್ತಕಂಕಣಗಳನ್ನು ವನಮಾಲಾ, ಪದಕ, ವಜ್ರದ ಆಭರಣ, ಪೀತಾಂಬರ ಧರಿಸಿರುವಿ ಚರಣ ಭೂಷಣಗಳನ್ನು ಧರಿಸಿರುವಿ, ಶ್ರೀವತ್ಸ ಚಿಹ್ನೆಯನ್ನು ಎದೆಯಲ್ಲಿ ಧರಿಸಿದ ವಿಜಯವಿಠ್ಠಲರೂಪೀ ಧನ್ವಂತರಿಯೇ ನೀನು ಯುವಗಾತ್ರನಾಗಿ ಜ್ಞಾನಮುದ್ರಾದಿಗಳನ್ನು ಕೈಗಳಲ್ಲಿ ಧರಿಸಿದವನಾಗಿರುವಿ.[4]

---

3. ತ್ರಿವಿಡಿತಾಳ– ಶಶಿಕುಲೋದ್ಭವ ದೀರ್ಘತಪನಂದನ ದೇವ। ಶಶಿವರ್ಣ ಪ್ರಕಾಶ ಪ್ರಭುವೆ ವಿಭುವೆ। ಶಶಿಮಂಡಲಸಂಸ್ಥಿತ ಕಲಶಕಲಶಪಾಣಿ। ಬಿಸಜಲೋಚನ ಆಶ್ವಿನೇಯವಂದ್ಯ । ಶಶಿಗರ್ಭ ಭೂರುಹ ಲತೆಮೊದೆ ತಾಪವೋ। ಡಿಸುವೌಷಧಿ ತುಲಸಿಜನಕ ವಸುದೇವ। ಅಸುರ ನಿರ್ಜರತತಿ ನೆರೆದು ಗಿರಿಯ ತಂದು। ಮಿಸುಕದಲೆ ಮಹೋದಧಿ ಮಥಿಸಲಾಗಿ। ನಸುನಗುತ ಪುಟ್ಟಿದೆ ಪೀಯೂಷಘಟಧರಿಸಿ। ಅಸಮದೈವನೆ ನಿನ್ನ ಮಹಿಮೆಗೆ ನಮೋ ನಮೋ। ಬಿಸಜಸಂಭವ ರುದ್ರಮೊದಲಾದ ದೇವತೆ। ಋಷಿ ನಿಕರ ನಿನ್ನ ಕೊಂಡಾಡುವರೋ। ದಶ ದಿಶಿಯೊಳು ಮೆರೆವ ವಿಜಯವಿಠ್ಠಲ ಭಿಷ್ಕ।ಅಸು ಇಂದ್ರಿಯಂಗಳ ರೋಗ ನಿವಾರಣ ॥3॥

4. ಅಟ್ಟತಾಳ– ಶರಣು ಶರಣು ಧನ್ವಂತರಿ ತಮೋಗುಣನಾಶ। ಶರಣು ಆರ್ತಜನ ಪರಿಪಾಲಕ, ದೇವ। ತರುವೆ, ಭವತಾಪಹರಣ, ದಿತಿಸುತ।ಹರಣ, ಮೋಹಕಲೀಲಾ। ಪರಮ ಪೂರ್ಣಬ್ರಹ್ಮ ಬ್ರಹ್ಮ ಉದ್ಧಾರಕ। ಉರುಪರಾಕ್ರಮ ಉರಗಶಾಯಿ। ವರಕಿರೀಟ ಮಹಾಮಣಿ ಕುಂಡಲಕರ್ಣ। ಮಿರುಗುವ ಹಸ್ತಕಂಕಣ, ಹಾರ ಪದಕ। ಹೀರಕಾಂಚಿ ಪೀತಾಂಬರ ಚರಣಭೂಷ। ಸಿರಿವತ್ಸಲಾಂಛನ ವಿಜಯವಿಠಲರೇಯ। ತರುಣಗಾತುರ ಜ್ಞಾನಮುದ್ರಾಂಕಿತ ಹಸ್ತ ॥4॥

Rarest Archiver

ಏಳುವಾಗ, ತಿರುಗಾಡುವಾಗ, ಬೀಳುವಾಗ, ನಿಂತಾಗ, ಕುಳಿತಾಗ, ಹೇಳುವಾಗ, ಮಾತು ಕೇಳುವಾಗ, ಕರೆದು ಹೇಳುವಾಗ, ಹೋಗಿ ಸತ್ಕರ್ಮ ಮಾಡುವಾಗ, ಬಾಳುವಾಗ, (ಬದುಕುವಾಗ), ಭೋಜನ, ನಾನಾಷಡ್ರಸಗಳ ಸಮ್ಮೇಳನವಾದಾಗ, ಪುತ್ರಾದಿಗಳೊಡನೆ ವಿನೋದದಿಂದಿರುವಾಗ, ಮನುಷ್ಯರು ಮರೆಯದೆ ತಮ್ಮ ನಾಲಿಗೆ ತುದಿಯಲ್ಲಿ "ಧನ್ವಂತರಿ" ಎಂಬುದಾಗಿ ಒಮ್ಮೆ ಕಾಲಕಾಲಕ್ಕೆ ಸ್ಮರಿಸಿದ್ದಾದರೆ, ಅವರಿಗೆ ವೇಳೆ ವೇಳೆಗೆ ಬರುವ ಸಂಸಾರ ಕಾರಣವನ್ನು ಪರಿಹರಿಸಿ ನೀಲಮೇಘಶ್ಯಾಮನಾದ ವಿಜಯವಿಠ್ಠಲರೂಪೀ ಭಗವಂತನು ಮುಕ್ತರ ಸಂಗದಲ್ಲಿ ಇರಲು ಸೇವೆ ಮಾಡಲು ಅವಕಾಶ ಮಾಡಿಕೊಡುವನು. [5].

ಓಂ ಧಂ ಧನ್ವಂತರಯೇ ನಮಃ ಎಂಬುದಾಗಿ ಓಂಕಾರಪೂರ್ವಕವಾಗಿ ಧನ್ವಂತರೀ ರೂಪಿ ಭಗವಂತನನ್ನು ನೆನೆಸಿ ನಮಸ್ಕರಿಸಲು ವಿಜಯವಿಠ್ಠಲನು ಒಲಿಯುತ್ತಾನೆ. [6]

****

---

5. ಆದಿತಾಳ– ಏಳುವಾಗಲಿ ಮತ್ತೆ ತಿರುಗಿ ತಿರುಗುವಾಗಲಿ। ಬೀಳುವಾಗಲಿ ನಿಂತು ಕುಳ್ಳಿರುವಾಗಲಿ। ಹೇಳುವಾಗಲಿ ಮಾತು ಕೇಳುವಾಗಲಿ ಕರೆದು। ಪೇಳುವಾಗಲಿ ಪೋಗಿ ಸತ್ಕರ್ಮಮಾಡುವಾಗಲಿ। ಬಾಳುವಾಗಲಿ ಭೋಜನ ನಾನಾ ಷಡ್ರಸ ಸಮ್ಮೇಳವಾಗಲಿ ಮೇಲು ಪುತ್ರಾದಿ ಒಡನೊಡನೆ। ಖೇಳವಾಗಿ ಮನುಜ ಮರಿಯದೆ ತನ್ನಯ। ನಾಲಿಗೆ ಕೊನೆಯಲ್ಲಿ ಧನ್ವಂತರಿ ಎಂದುವೊಮ್ಮೆ। ಕಾಲಾಕಾಲದಲ್ಲಿ ಸ್ಮರಿಸಿದರೆ ಅವಗೆ। ವೇಳೆ ವೇಳೆಗೆ ಬಹ ಭವಬೀಜ ಪರಿಹಾರ। ನೀಲಮೇಘಶ್ಯಾಮ ವಿಜಯವಿಠ್ಠಲರೇಯ ಓಲಗಕೊಡುವನು ಮುಕ್ತರ ಸಂಗದಲಿ ॥5॥

6. ಜತೆ– ಧಂ ಧನ್ವಂತರಿ ಎಂದು ಪ್ರಣವ ಪೂರ್ವಕದಿಂದ। ವಂದಿಸಿ ನೆನೆಯಲು ವಿಜಯವಿಠ್ಠಲ ಒಲಿವ ॥6॥

Rarest Archiver

ಶ್ರೀ ವಿಜಯದಾಸಾರ್ಯ ವಿರಚಿತ
ಧನ್ವಂತ್ರೀ ಸುಳಾದಿ ವಿಶೇಷಾರ್ಥಗಳು

ಒಂದನೆಯ ನುಡಿ

ಕಾಯ	–	ದೇಹ
ನಿರ್ಮಲಿನ	–	ಶುದ್ಧ
ಮಾಯ	–	ಪ್ರಕೃತಿ (ತ್ರಿಗುಣಾತ್ಮಕ)
	–	ಮಾಯಾಂ ತು ಪ್ರಕೃತಿಂ ವಿದ್ಧಿ ಮಾಯಿನಂ ತು ಮಹೇಶ್ವರಮ್ ॥
ಬೀಜ	–	ಕಾರಣ
	–	ಹೇತುರ್ನಾಕಾರಣಂ ಬೀಜಂ–ಅಮರಕೋಶ
ಕುತ್ಸಿತದೇಹ	–	ಹೀನ ಶರೀರ
ಸಂಚಿತ	–	ಕೂಡಿಟ್ಟ, ಕಲೆಹಾಕಿದ
ಧನ್ವಂತ್ರಿ	–	ಧನ್ವ ಎಂದರೆ ಪಾಪ, ಧನ್ವಂ ತರತೀತಿ ಧನ್ವಂತ್ರಿ
	–	ಪಾಪ ನಾಶಕನಾದ್ದರಿಂದ – ಧನ್ವಂತ್ರಿ
ರಾಜೌಷಧಿ ನಿಯಾಮಕ	–	ರಾಜ–ಚಂದ್ರ, ಚಂದ್ರನ ಅಂತರ್ಯಾಮಿಯಾಗಿದ್ದು ಔಷಧಿಗಳಿಗೆ ನಿಯಾಮಕ ಧನ್ವಂತ್ರಿಯು.
ಗುಣಸಾಂದ್ರ	–	ಗುಣಪರಿಪೂರ್ಣ
ಪ್ರೇಯನು	–	ಅತಿಶಯ ಪ್ರಿಯನು.
	–	ಪುತ್ರಾತ್‌ಪ್ರೇಯಃ ವಿತ್ತಾತ್‌ಪ್ರೇಯಃ, ಸರ್ವಸ್ಮಾತ್ ಪ್ರೇಯಃ (ಕಠಶ್ರುತಿ)
ಅನಾದಿರೋಗ	–	ಜನನ ಮರಣರೂಪ ಆದಿಯಿಲ್ಲದ ರೋಗ
ನಿತ್ಯ	–	ಯಾವಾಗಲೂ ಇರುವವ
	–	ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ (ಶ್ರುತಿ)

ಎರಡನೆಯ ನುಡಿ

ಸನ್ನುತಿಸಿ	–	ಸಮ್ಯಕ್ ನುತಿಸಿ
	–	ಜ್ಞಾನಭಕ್ತ್ಯಾದ್ಯತಿಶಯೇನ – ಸ್ತುತ್ಯಃ
ಭಿನ್ನಜ್ಞಾನದಿಂದ	–	ಭೇದಜ್ಞಾನದಿಂದ
	–	ಜೀವೇಶಯೋರ್ಭಿದಾಚೈವ.. (ತಾ.ನಿ.)
ಮನ್ನುಜ	–	ಮನುಜ – ಮಾನವ

Rarest Archiver

ಧನ್ಯ – ಏನನ್ನೂ ಅಪೇಕ್ಷಿಸದ
– ನಿರಪೇಕ್ಷ ಗುಣೈಃ ಪೂರ್ಣಃ ಧನ್ಯ ಇತ್ಯುಚ್ಯತೇ ಬುಧೈಃ॥
ಸತ್ಯ – ಸತ್ಯಸಂಕಲ್ಪನು.
– ಸತ್ಯಸಂಕಲ್ಪ ಏಕೋ ವರೇಣ್ಯೋ ವಶೀ ॥ ದ್ವಾದಶಸ್ತೋತ್ರ

ಮೂರನೆಯ ನುಡಿ

ದೀರ್ಘತಪನಂದನ – ದೀರ್ಘತಪನೆಂಬ ಋಷಿಯಲ್ಲಿ ಅವತರಿಸಿದ ಧನ್ವಂತ್ರಿ
ಕಲಶಪಾಣಿ – ಅಮೃತಕಲಶ ಕೈಯಲ್ಲಿ ಧರಿಸಿದ ಧನ್ವಂತ್ರಿ ರೂಪೀ ಭಗವಂತ
ಪೀಯೂಷ ಘಟ – ಅಮೃತಕಲಶ
– ಪೀಯೂಷಮಮೃತಮ್ ಸುಧಾ – ಅಮರಕೋಶ
ಬಿಸಜಸಂಭವ – ಪದ್ಮಸಂಭವ–ಬ್ರಹ್ಮದೇವರು
ಭಿಷ್ಕ – ಭಿಷಕ್ – ವೈದ್ಯ.
– ಭಿಷಕ್ ವೈದ್ಯೋಚಾಂಗುಲಿಕೋ–ಅಮರಕೋಶ
ದಶದಿಶದೊಳು – ಹತ್ತು ದಿಕ್ಕುಗಳಲ್ಲಿ
– ದಿಶಶ್ಚ ಕಕುಭಃಕಾಷ್ಠಾ ಆಶಾಶ್ಚಹರಿತಶ್ಚತಾಃ – ಅಮರಕೋಶ.

ನಾಲ್ಕನೆಯ ನುಡಿ

ದೇವತರು – ಕಲ್ಪವೃಕ್ಷ
ಬ್ರಹ್ಮಉದ್ಧಾರಕ – ಆಯುರ್ವೇದ ಪ್ರವರ್ತಕ
ಉರುಪರಾಕ್ರಮ – ಉತ್ಕೃಷ್ಟ ಪರಾಕ್ರಮ
ಉರಗಶಾಯಿ – ಶೇಷಶಾಯಿ
– ಉರಗಃ ಪನ್ನಗೋ ಭೋಗಿ ಜಿಹ್ಮಗಃ ಪವನಾಶನಃ–
ಅಮರಕೋಶ

ಐದನೆಯ ನುಡಿ

ಖೇಳ – ಮಾತುಕತೆ, ವಿನೋದ
ಭವಬೀಜ – ಸಂಸಾರಕ್ಕೆ ಕಾರಣವಾದ
ಓಲಗ – ಸೇವೆ.

ಆರನೆಯ ನುಡಿ

ಪ್ರಣವ – ಓಂಕಾರ
– ಪ್ರಣವಃ ಸರ್ವವೇದೇಷು (ಗೀತಾ 7–8)

****

Rarest Archiver

ಶ್ರೀ ವಿಜಯದಾಸಾರ್ಯ ವಿರಚಿತ ಶ್ರೀದುರ್ಗಾಸ್ತೋತ್ರಸುಳಾದಿ.

ದುರ್ಗಾಮಾತೆಯೇ, ದುರ್ಗೆಯೇ, ಅತಿದುಷ್ಟಜನರನ್ನು ಸಂಹಾರ ಮಾಡುವಿ, ಜೀವರ ಹೃದಯಗುಹೆಯಲ್ಲಿ ವಾಸಿಸುವ ದುರ್ಗೆಯೇ, ನೀನು ಅಪ್ರಾಪ್ಯಳು (ದುರ್ಲಭಳು) ಸುಲಭವಾಗಿ ಲಭ್ಯವಾಗದಿದ್ದರೂ, ಸುಲಭಳು, ನಿನ್ನ ಮಹಿಮೆ ತಿಳಿಯಲಶಕ್ಯವಾಗಿದೆ. ಬ್ರಹ್ಮ ರುದ್ರ ಮೊದಲಾದವರಿಗೆಲ್ಲ ಚಿಂತಿಸಿದರೂ ದೊರೆಯದ, ಸ್ವರ್ಗ, ಭೂಮಿ, ಪಾತಾಳ, ಎಲ್ಲ ಕಡೆ ವ್ಯಾಪ್ತಳಾದ ದೇವಿಯೇ, ನೀನು ಸ್ತ್ರೀವರ್ಗದವರೆಲ್ಲರನ್ನೂ ಮೀರಿದ ಸುಂದರಿಯಾಗಿರುವಿ, ದೈತ್ಯಸಮೂಹದವರ ಬಾಧೆ ಬಹಳವಾಗಿದೆ, ತಾಯಿಯೇ ! ದುರ್ಗತಿಯನ್ನು ಕಳೆಯುವ ನಿನಗೆ ನಾನು ಹೇಳುವುದೇನಿದೆ ? ಈ ಸಂಸಾರ ದುರ್ಗಂಧಮಯವಾಗಿದೆ. ಈ ಸಂಸಾರದಿಂದ ಪಾರಾಗುವ ಮಾರ್ಗವನ್ನು ಕಾಣೆನು.[1]

ಮಂಗಳಾಂಗಳೆನಿಸಿದ ದುರ್ಗೆಯೆ, ನೀನು ಮಹಾದುರ್ಗೆ ಭೂದುರ್ಗೆ, ವಿಷ್ಣುಪತ್ನಿ ದುರ್ಗೆ, ನೀನು ಗೆಲ್ಲಲು ಅಶಕ್ಯಳಾಗಿರುವಿ, ಸೈರಿಸಲಾರದಷ್ಟು ಅಪರಿಮಿತ ಶಕ್ತಿವುಳ್ಳವಳೇ, ಅಡವಿ, ಗಹನಪರ್ವತ, ಘೋರಸರ್ಪ, ಪ್ರವಾಹದ ಗರ್ಗರ ಶಬ್ದ, ಹುಲಿ, ಕರಡಿ, ಮೃತ್ಯು, ಭೂತ, ಪ್ರೇತ, ಪಿಶಾಚಿ ಮೊದಲಾದವುಗಳಿಂದ ಸಂಕಟ ಪ್ರಾಪ್ತವಾದಾಗ, ದುರ್ಗಾ, ದುರ್ಗೆಯೆಂಬುದಾಗಿ, ಉಚ್ಚಸ್ವರದಿಂದ ತಡೆಯಿಲ್ಲದಂತೆ ಒಮ್ಮೆ ಕೂಗಿದರೂ, ಸ್ವರ್ಗದಲ್ಲಿ ಮೋಕ್ಷದಲ್ಲಿ, ಭಗವಂತನೊಡನೆ ಇದ್ದರೂ, ದೇವತಾಗಣವು ಜಯ ಜಯಕಾರದಿಂದ ಹೊಗಳುತ್ತಿರಲು, ನಿನ್ನ ಕೈಗಳಿಂದ ಎತ್ತಿ ಸಾಕುವ, ರಕ್ಷಿಸುವ ಸಾಕ್ಷೀಭೂತಳು ನೀನಾಗಿರುವಿ. ಇದೆಲ್ಲವೂ ನಿನಗೆ, ನೀರುಕುಡಿದಂತೆ ಸುಲಭವಾದ ಲೋಕಲೀಲೆಯೆನಿಸಿದೆ. ಸುರನದಿಯಾದ ಗಂಗೆಯ ಜನಕನಾದ ನಮ್ಮ ಶ್ರೀ ವಿಜಯವಿಠ್ಠಲನ ಪಾದಕಮಲಗಳೆಂಬ ದುರ್ಗ (ಕೋಟೆ)ವನ್ನು ಆಶ್ರಯಿಸಿ ನಾವು ಬದುಕುವಂತೆ ಮಾಡಿ ಅನುಗ್ರಹಿಸು.[2]

---

1. ಧ್ರುವತಾಳ–ದುರ್ಗಾ ದುರ್ಗೆಯೆ ಮಹದುಷ್ಟ ಜನ ಸಂಹಾರೆ। ದುರ್ಗಾಂತರ್ಗತ ದುರ್ಗೆ ದುರ್ಲಭೆ ಸುಲಭೆ। ದುರ್ಗಮವಾಗಿದೆ ನಿನ್ನ ಮಹಿಮೆ ಬೊಮ್ಮ। ಭರ್ಗಾದಿಗಳಿಗೆಲ್ಲ ಗುಣಿಸಿದರೂ। ಸ್ವರ್ಗ ಭೂಮಿ ಪಾತಾಳ ಸಮಸ್ತವ್ಯಾಪುತದೇವಿ। ವರ್ಗಕ್ಕೆ ಮೀರಿದ ಬಲುಸುಂದರೀ। ದುರ್ಗುಣದವರ ಬಾಧೆ ಬಹಳವಾಗಿದೆ ತಾಯೆ। ದುರ್ಗತಿಹರೆ, ನಾನು ಪೇಳುವುದೇನು। ದುರ್ಗಂಧವಾಗಿದೆ ಸಂಸ್ಕೃತಿ ನೋಡಿದರೆ। ನಿರ್ಗಮನ ಕಾಣೆನಮ್ಮ, ಮಂಗಳಾಂಗೆ. ॥1॥

2. ದುರ್ಗೆ, ಹೇ ದುರ್ಗೆ, ಮಹಾದುರ್ಗೆ ಭೂ।ದುರ್ಗೆ, ವಿಷ್ಣುದುರ್ಗೆ, ದುರ್ಜಯ, ದುರ್ಧರ್ಷಶಕ್ತೇ, ದುರ್ಗಕಾನನ ಗಹನ ಪರ್ವತ ಘೋರಸರ್ಪ। ಗರ್ಗರ ಶಬ್ದವ್ಯಾಘ್ರ ಶರಭ ಮೃತ್ಯು। ವರ್ಗ ಭೂತಪ್ರೇತ ಪೈಶಾಚಿ ಮೊದಲಾದ। ದುರ್ಗುಣ ಸಂಕಟ ಪ್ರಾಪ್ತವಾಗೆ ದುರ್ಗಾ। ದುರ್ಗೆ ಎಂದು ಉಚ್ಚಸ್ವರದಿಂದ। ನಿರ್ಗಳಿತನಾಗಿ ಒಮ್ಮೆ ಕೂಗಿದರೂ ಸ್ವರ್ಗಾಪ।ವರ್ಗದಲಿ ಹರಿಯೊಡನೆ ಇದ್ದರು ಸು।ರರ್ಗಣ ಜಯ ಜಯವೆಂದು ಪೊಗಳುತಿರೆ। ಕರ್ಗಳಿಂದಲಿ ಎತ್ತಿ ಸಾಕುವ ಸಾಕ್ಷಿಭೂತೆ। ನೀರ್ಗುಡಿದಂತೆ ಲೋಕಲೀಲೆ ನಿನಗೆ। ಸ್ವರ್ಗಂಗಾಜನಕ ನಮ್ಮ ವಿಜಯವಿಠ್ಠಲನಂಘ್ರಿ ದುರ್ಗಾಶ್ರಯಮಾಡಿ ಬದುಕುವಂತೆ ಮಾಡು ॥2॥

Rarest Archive

ದುರ್ಗಾಮಾತೆಯೇ ! ನೀನು ನಿನ್ನ ಕೈಗಳಲ್ಲಿ ಚಕ್ರ, ಶಂಖ, ಅಂಕುಶ, ಶಕ್ತಿ, ಚಪ್ಪಗೊಡಲಿ, ನೇಗಿಲು, ಖಡ್ಗ, ಪದ್ಮ, ಗದೆ, ಭಾರವುಳ್ಳ ಡೊಣ್ಣೆ, ಬಿಲ್ಲು, ಬಾಣ, ವರಮುದ್ರೆ, ಅಭಯಮುದ್ರೆ, ಮುಸಲ (ಒನಕೆ) ಹೀಗೆ ವಿವಿಧ ಆಯುಧಗಳನ್ನು ಧರಿಸಿ ಮೆರೆಯುತ್ತಿರುವಿ, ಬ್ರಹ್ಮ ರುದ್ರ ಮೊದಲಾದ ಎಲ್ಲ ದೇವತೆಗಳನ್ನು ಕರುಣಾಪೂರ್ಣ ದೃಷ್ಟಿಯಿಂದ ನೋಡಿ ಅವರವರಿಗೆ ಯೋಗ್ಯವಾದ ಸ್ವರೂಪಸುಖ (ಮೋಕ್ಷ)ವನ್ನು ಕೊಡುವಿ. ಶ್ರೀ, ಭೂ, ದುರ್ಗಾರೂಪಗಳಿಂದ ಸರ್ವೋತ್ತಮನಾದ ನಮ್ಮ ವಿಜಯ ವಿಠ್ಠಲನ ಪಾದಕಮಲಗಳನ್ನು ಅತೀಶ್ರೇಷ್ಠವಾದ ಭಕ್ತಿಯಿಂದ ಸ್ಮರಿಸುತ್ತಿರುವ ಜಗನ್ಮಾತೆಯು ನೀನಾಗಿರುವಿ.[3]

ದುರ್ಗಾಮಾತೆಯೇ ! ನಾನು ನಿನ್ನನ್ನು ಸ್ತೋತ್ರಮಾಡುವೆ, ನಿನಗೆ ಅನೇಕ ನಾಮಗಳುಂಟು. ಕಾಳಿ, ಮಹಾಕಾಳಿ, ಉನ್ನತ ಬಾಹುವುಳ್ಳವಳೇ, ಭಯಂಕರ ಮುಖವುಳ್ಳವಳೇ, ಚಂದ್ರಮುಖಿಯೇ, ಧೃತಿ, ಶಾಂತಿ, ಬಹುರೂಪಿ, ರಾತ್ರಿ ರಾತ್ರಿಂಚರಣೆ, ಸ್ಥಿತಿ, ನಿದ್ರಾ, ಭದ್ರೇ, ಭಕ್ತವತ್ಸಲೇ, ಭವ್ಯೇ, 32 ಕೈಗಳುಳ್ಳವಳೇ, ಆನೆಯಬಲವುಳ್ಳವಳೇ, ನಡಿಗೆಯಂತೆ ನಡಿಗೆಯುಳ್ಳವಳೇ, ಆದ್ಭುತಳೆ, ಪ್ರಬಲೆ, ನಿತ್ಯಸಂಚಾರವುಳ್ಳವಳೇ, ದುರ್ಗಮವಾದ ಅರಣ್ಯವಾಸಿಯೇ, ಭೂಭಾರಹರಣ ಮಾಡುವವಳೇ, ಕ್ಷೀರಸಮುದ್ರದಲ್ಲಿ ಹುಟ್ಟಿ ಬಂದವಳೇ, ಸದ್ಗತಿಯನ್ನು ಸಜ್ಜನರಿಗೆ ಕೊಡುವವಳೇ, ಮಾಯಾ, ಜಯಾ, ಇಂದಿರಾ, ರಮಾ, ದೈತ್ಯರನ್ನು ನಿಗ್ರಹಿಸುವವಳೇ, ಕಲ್ಮಷರಹಿತಳೇ, ಸಜ್ಜನರ ಸಾಧನಕ್ಕೆ ಅಡ್ಡಿ ಮಾಡುವವರ ನಾಶಕಳೇ, ಜ್ಞಾನಪೂರ್ಣಳೇ, ರೌದ್ರಾವತಾರಿಯೇ, (ಉಗ್ರಸ್ವರೂಪಳೇ) ಅತ್ಯಂತ ರಕ್ತ ಬಣ್ಣದ ನಾಲಿಗೆಯುಳ್ಳವಳೇ ಮಾಣಿಕ್ಯಮಾಲೆ ಧರಿಸಿದವಳೇ, ಕಾಮನನ್ನು ಗೆದ್ದವಳೇ, ಜನನ ಮರಣ ದೂರಳೆಂದು ಖ್ಯಾತಿಪಡೆದವಳೇ, ಘೃತಪಾತ್ರೆ, ಪರಮಾನ್ನ, ತಾಂಬೂಲವನ್ನು ಕೈಯಲ್ಲಿ ಧರಿಸಿದವಳೇ, ಸುವ್ರತೆ, ಪತಿವ್ರತೆ, ತ್ರಿನೇತ್ರೇ, ಕೆಂಪುವಸ್ತ್ರ ಧರಿಸಿದವಳೇ, ಕಮಲನಯನೆ, ನಿತ್ಯಕನ್ಯೆಯೇ, ಉದಯಿಸುತ್ತಿರುವ ಶತಕೋಟಿ ಸೂರ್ಯ ಕಾಂತಿಯುಳ್ಳವಳೇ, ಶ್ರೀಹರಿಯವಾಮಾಂಕದಲ್ಲಿ ಕುಳಿತಿರುವವಳೇ [4].

---

3. ಮಟ್ಟತಾಳ –ಅರಿದರಾಂಕುಶ ಶಕ್ತಿ ಪರಶು ನೇಗಲಿ ಖಡ್ಗ। ಸರಸಿಜ ಗದೆ ಮುದ್ಗರ ಚಾಪ, ಮಾರ್ಗಣ। ವರ ಅಭಯ ಮುಸಲ ಪರಿಪರಿ ಆಯುಧವ। ಧರಿಸಿ ಮೆರೆವ ಲಕುಮಿ, ಸರಸಿಜಭವ, ರುದ್ರ ಸರುವ ದೇವತೆಗಳ ಕರುಣಾಪಾಂಗದಲ್ಲಿ ನಿರೀಕ್ಷಿಸಿ ಅವರವರ ಸ್ವರೂಪಸುಖವ ಕೊಡುವ ಸಿರಿ, ಭೂಮಿ, ದುರ್ಗಾ। ಸರುವೋತ್ತಮ ನಮ್ಮ ವಿಜಯವಿಠ್ಠಲನಂಘ್ರಿ ಪರಮಭಕುತಿಯಿಂದ ಸ್ಮರಿಸುವ ಜಗಜ್ಜನನಿ ॥ 3 ॥

4. ತ್ರಿವಿಡಿತಾಳ– ಸ್ತುತಿ ಮಾಡುವೆ ನಿನ್ನ ಕಾಳಿ ಮಹಾಕಾಳಿ ಉನ್ನತ ಬಾಹು ಕರಾಳವದನೆ ಚಂದಿರಮುಖಿ। ಧೃತಿ, ಶಾಂತಿ, ಬಹುರೂಪೆ, ರಾತ್ರಿ, ರಾತ್ರಿಂಚರಣೆ। ಸ್ಥಿತಿಯೆ, ನಿದ್ರಾ, ಭದ್ರೆ, ಭಕ್ತವತ್ಸಲೆ, ಭವ್ಯೇ ।ಚತುರಾಷ್ಟದ್ವಿಹಸ್ತೆ, ಹಸ್ತಿ, ಹಸ್ತಿಗಮನೆ, ಅದ್ಭುತ ಪ್ರಬಲೆ ಪ್ರವಾಸೆ ದುರ್ಗಾರಣ್ಯವಾಸೆ।ಕ್ಷಿತಿಭಾರಹರಣೆ, ಕ್ಷೀರಾಬ್ಧಿತನಯೆ, ಸದ್ಗತಿ ಪ್ರದಾತೆ, ಮಾಯಾ, ಜಯೆ, ಇಂದಿರೆ, ರಮೆ।ದಿತಿಜಾತನಿಗ್ರಹೆ, ನಿರ್ಧೂತಕಲ್ಮಷೆ ಪ್ರತಿಕೂಲಭೇಧೇ, ಪೂರ್ಣಬೋಧೆ, ರೌದ್ರೆ। ಅತಿಶಯ ರಕ್ತಜಿಹ್ವಾಲೋಲೆ, ಮಾಣಿಕ್ಯ ಮಾಲೆ,। ಜಿತಕಾಮೆ, ಜನನ ಮರಣರಹಿತೆ,ಖ್ಯಾತೆ,। ಘೃತಪಾತ್ರ ಪರಮಾನ್ನ ತಾಂಬೂಲ ಹಸ್ತೆ, ಸುವ್ರತೆ, ಪತಿವ್ರತೆ, ತ್ರಿನೇತ್ರೇ, ರಕ್ತಾಂಬರೆ। ಶತ ಪತ್ರನಯನೆ, ನಿರುತಕನ್ಯೆ, ಉದಯಾರ್ಕ। ಶತಕೋಟಿಸನ್ನಿಭೆ, ಹರಿಯಂಕಸಂಸ್ಥೆ.॥4॥

Rarest Archiver

ದುರ್ಗಾದೇವಿಯೇ ! ನೀನು ಭಗವಂತನ ನಂತರ ಸರ್ವವೇದ ಪ್ರತಿಪಾದ್ಯಳು, ಶುಕ್ಲಶೋಣಿತ (ರಕ್ತವೀರ್ಯ) ಸಂಬಂಧರಹಿತಳು, ಯಾರಿಂದಲೂ ಹತಳಾಗದವಳು, ಯಾವಾಗಲೂ ಸಂಚಾರಿಣಿಯಾದವಳು, ಚತುರಳು, ನಾಲ್ಕು ಕಡೆ ಹೆರಳುಗಳುಳ್ಳವಳು, ಅಂಭ್ರಿಣಿ, ಹ್ರೀ, ಹೆಸರುಳ್ಳವಳು, ಈ ಜಗತ್ತಿಗೆ ಉತ್ಪತ್ತಿ, ಸ್ಥಿತಿ, ಲಯಾದಿಗಳನ್ನು ಮಾಡಲು ಸಮರ್ಥಳು, ಬೆಳ್ಳಗಿನ ಮಂಗಳ ದೇಹವುಳ್ಳವಳು, ಹೀನರನ್ನು ಉದ್ಧರಿಸುವವಳು, ಧನ್ಯಳು. ಎಲ್ಲ ಔಷಧಿಗಳಲ್ಲಿದ್ದು, ನಾಶಮಾಡುವ, ಕಾಡುವ ರೋಗರುಜಿನಗಳಿಂದ, ಈ ಭೂಮಿಯಲ್ಲಿ ಸುಖದಲ್ಲಿ ಬಾಳುವ ಬುದ್ಧಿಯನ್ನಿತ್ತು ಯಾವಾಗಲೂ ರಕ್ಷಣೆ ಮಾಡಬೇಕು. ಹೇ ದುರ್ಗೆಯೇ! ದುರ್ಗೆಯೇ। ಚತುರ್ವಿಧನಾಶರಹಿತನಾದ ಶ್ರೀವಿಜಯವಿಠ್ಠಲನ ಪ್ರಿಯಳೇ। ನಾನು ಎರಡೂ ಕೈಗಳನ್ನು ಮುಗಿದು, ತಲೆಬಾಗಿ ನಿನಗೆ ನಮಸ್ಕಾರವನ್ನು ಮಾಡುವೆ. [5].

ದುರ್ಗಾದೇವಿಯೇ! ನಿನಗೆ ಅನೇಕ ನಾಮಾಂತರಗಳುಂಟು ಲಕ್ಷ್ಮೀ, ಕಮಲಾ, ಪದ್ಮಾ, ಪದ್ಮಿನೀ, ಕಮಲಾಲಯಾ, ರಮಾ, ವೃಷಾಕಪೀ, ಧನ್ಯಾ, ವೃದ್ಧಿ, ವಿಶಾಲಾ, ಯಜ್ಞಾ, ಇಂದಿರೆ, ಹಿರಣ್ಯೇ, ಹರಿಣಿವಾಲಯಾ, ಸತ್ಯನಿತ್ಯಾನಂದೆ, ತ್ರಯೀ ಸುಧಾಶೀಲೆ, ಸುಗಂಧಸುಂದರಿ, ವಿದ್ಯಾ, ಸುಶೀಲೆ, ಸುಲಕ್ಷಣದೇವಿ, ಹೀಗೆ ನಾನಾರೂಪಗಳಿಂದ ಮೆರೆಯುವ ಮೃತ್ಯುನಾಶಕಳೇ, ಸಜ್ಜನ ಸನ್ನಿಧಿಯಲ್ಲಿ ಸೇವೆ ಕೊಡು ಕಾಲಕಾಲಕ್ಕೆ ನನ್ನ ಭಾರವನ್ನು ವಹಿಸುವ ತಾಯಿ, ಉತ್ತಮಳೇ ನಿನ್ನ ಶಕ್ತಿ ಕೀರ್ತಿಗಳನ್ನು ಬಹಳವಾಗಿ ಕೇಳಿ ಕೇಳಿ ಬಂದೆ, ಈ ಮನಸ್ಸು ಗಾಳಿಯಂತೆ ಇನ್ನೊಬ್ಬರ ಸಂಪತ್ತಿಗೆ ಆಸೆಪಡುತ್ತದೆ. ಉದಾಸೀನ ಮಾಡದೇ ಉದ್ಧಾರಮಾಡುವ, ಕೈಲಾಸದಲ್ಲಿ ಪಾರ್ವತಿ ಪರಮೇಶ್ವರರಿಂದ ಪೂಜೆಗೊಂಬ ದೇವಿಯೇ, ಮೂಲಪ್ರಕೃತಿಯೆಂದು ಕರೆಸಿಕೊಳ್ಳುವ, ನಿತ್ಯಗಳಾದ ಅಕಾರಾದಿಸರ್ವವರ್ಣಗಳಿಗೆ ಮುಖ್ಯಾಭಿಮಾನಿಯೇ, ಕ್ಷೀರಸಾಗರಶಾಯಿಯಾದ, ಶ್ರೀ ವಿಜಯವಿಠ್ಠಲನ ಜೊತೆ ಲೀಲೆಮಾಡುವ ನಾನಾಭರಣಭೂಷಿತೆಯೇ । ನೀನು ಪೂರ್ಣಳೆಂದು ಕರೆಸಿಕೊಳ್ಳುವಿ.[6]

---

5. ಶ್ರುತಿತತಿನುತೆ, ಶುಕ್ಲಶೋಣಿತರಹಿತೆ ಅ। ಪ್ರತಿಹತೆ, ಸರ್ವದಾಸಂಚಾರಿಣಿ, ಚತುರೆ,। ಚತುರಕಪರ್ದಿಯೆ, ಅಂಭ್ರಿಣೀ, ಹ್ರೀ। ಉತ್ಪತ್ತಿ, ಸ್ಥಿತಿ–ಲಯ ಕರ್ತೆ, ಶುಭ್ರಶೋಭನ ಗಾತ್ರೇ। ಪತಿತ ಪಾವನೆ, ಧನ್ಯೆ, ಸರ್ವೌಷಧಿಯಲ್ಲಿದ್ದು। ಹತಮಾಡು ಕಾಡುವ ರೋಗಂಗಳಿಂದ। ಕ್ಷಿತಿಯೊಳು ಸುಖದಲ್ಲಿ ಬಾಳುವ ಮತಿಯಿತ್ತು। ಸತತ ಕಾಯಲಿಬೇಕು, ದುರ್ಗೇ ದುರ್ಗೇ ಚ್ಯುತಿದೂರ ವಿಜಯವಿಠ್ಠಲರೇಯನ ಪ್ರೀಯೆ, ಕೃತಾಂಜಲಿಯಿಂದಲಿ ತಲೆಬಾಗಿ ನಮಿಸುವೆ ॥5॥

6 ಅಟ್ಟತಾಳ– ಶ್ರೀಲಕ್ಷ್ಮೀ – ಕಮಲಾ – ಪದ್ಮಾ – ಪದ್ಮಿನೀ – ಕಮ।ಲಾಲಯಾ, ರಮಾ, ವೃಷಾಕಪೀ, ಧನ್ಯಾ, ವೃದ್ಧಿ, ವಿ।ಶಾಲಾ, ಯಜ್ಞಾ, ಇಂದಿರೆ, ಹಿರಣ್ಯೆ, ಹರಿಣಿ। ವಾಲಯಾ ಸತ್ಯನಿತ್ಯಾನಂದೆ ತ್ರಯಿ ಸುಧಾ।ಶೀಲೆ, ಸುಗಂಧಸುಂದರಿ, ವಿದ್ಯಾ ಸು।ಶೀಲೆ, ಸುಲಕ್ಷಣದೇವಿ, ನಾನಾರೂಪ।ಗಳಿಂದ ಮೆರೆವ ಮೃತ್ಯುನಾಶೆ। ಓಲಗ (ವಾಲಗ) ಕೊಡು ಸಂತರ ಸನ್ನಿಧಿಯಲ್ಲಿ। ಕಾಲಕಾಲಕೆ ಎನ್ನಭಾರವೊಹಿಸುವ ತಾಯಿ। ಮೇಲು ಮೇಲು ನಿನ್ನ ಶಕ್ತಿ ಕೀರ್ತಿ ಬಲು। ಕೇಳಿ ಕೇಳಿ ಬಂದೆ, ಕೇವಲ ಈ ಮನ। ಗಾಳಿಯಂತೆ ಪರದ್ರವ್ಯಕ್ಕೆ ಪೋಪುದು। ಏಳಲಮಾಡದೆ ಉದ್ಧಾರಮಾಡು। ಕೈಲಾಸಪುರದಲ್ಲಿ ಪೂಜೆಗೊಂಬದೇವಿ। ಮೂಲಪ್ರಕೃತಿ, ಸರ್ವವರ್ಣಾಭಿಮಾನಿ। ಪಾಲಸಾಗರಶಾಯಿ ವಿಜಯವಿಠ್ಠಲನೊಳು। ಲೀಲೆಯಾಡುವ ನಾನಾಭರಣಭೂಷಣೆ ಪೂರ್ಣೆ ॥6॥

Rarest Archiver

ನಂದಗೋಪನ ಮಡದಿ ಯಶೋದಾದೇವಿಯಲ್ಲಿ ಅವತರಿಸಿದವಳೇ, ನಿತ್ಯ ಮುಕ್ತಳೇ, ದೈತ್ಯರ ಸಮೂಹಕ್ಕೆ ಸಂತಾಪಕೊಡುವ ಮಹಾಕಠೋರಳೇ, ಉಗ್ರರೂಪಧರಿಸಿದ ವಿಲಕ್ಷಣಳೇ, ಅಜ್ಞಾನಕ್ಕೆ ಅಭಿಮಾನಿ ದೇವತೆಯೇ, ಸಜ್ಜನರ ತಾಪತ್ರಯ (ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ) ಗಳನ್ನು ವಿನಾಶಗೊಳಿಸುವಳೇ, ಓಂಕಾರ ವಾಚ್ಯಳೇ, ಹೂಂಕಾರವಾಚ್ಯಳೇ, ಪಾಪಿಯಾದ ಕಂಸನಿಗೆ ಭಯವನ್ನುಂಟುಮಾಡಿದವಳೇ, ಬಾಲಲೀಲೆಯಿಂದ ಅಚ್ಚರಿಪಡಿಸಿದವಳೇ, ವ್ಯಾಪ್ತಳಾದವಳೇ, ಸಜ್ಜನರನ್ನು ಧರ್ಮಮಾರ್ಗದಲ್ಲಿ ಪ್ರೇರಿಸುವವಳೇ, ಅಪ್ರಾಕೃತಸ್ವರೂಪಳೇ, ನಿದ್ದೆಯಲ್ಲಿ ನಿನ್ನನ್ನು ಸ್ಮರಿಸಿದ ಭಕ್ತನಿಗೆ ಅಪಾರವಾದ (ಮೇರೆ ಇಲ್ಲದ) ಸಮುದ್ರದಂತೆ ಮಹಾಆಪತ್ತು ಬಂದಿದ್ದಾದರೆ ಅವು ನಷ್ಟವಾಗುತ್ತವೆ. ಸಪ್ತದ್ವೀಪಗಳಿಗೆ ಅಧಿಪತಿಯೇ, ನರಕದ ಸಂಬಂಧವಿಲ್ಲದವಳೇ, ಭಕ್ತ ಜನರಿಂದ ಕರ್ಮವಶಾತ್ ತಮೋಗುಣದ ಕಾರ್ಯ ಮಾಡಿಸಿ ಅದರ ಫಲವನ್ನು ದೈತ್ಯರಿಗೆ ಕೊಟ್ಟು ಈ ಮುಕ್ತಿಯೋಗ್ಯ ಜೀವರಿಗೆ ದುಷ್ಕರ್ಮಗಳ ಫಲಲೇಪವಿಲ್ಲದಂತೆ ಮಾಡಿ ಅವರಿಗೆ ಪುಣ್ಯಕ್ಕೆ ಸೋಪಾನ ಮಾಡಿಕೊಡುವ ಸೌಭಾಗ್ಯವಂತೆ. [7]

ನೀನು ನನ್ನ ಮನಸ್ಸಿನಲ್ಲಿ ನಿಂತು ದುಃಖದ ಮಡುವಿನಿಂದ ನನ್ನನ್ನು ಎತ್ತಿ ಈ ಜನ್ಮವನ್ನೇ ಕೊನೆಯದನ್ನಾಗಿ ಮಾಡು. ಸೌಪರ್ಣಿ, ವಾರುಣಿಯರು ನಿತ್ಯದಲ್ಲಿ ನಿನ್ನ ಪಾದದಿಂದ ಮಸ್ತಕದವರೆಗೆ ಸೇವೆ ಮಾಡಿ ಕೃತಾರ್ಥರಾದರು. ನಾನು ಹೇಳುವದೇನಿದೆ? ಧರ್ಮರಾಜನ ಸ್ತುತಿಗೆ ಪ್ರಸನ್ನಳಾಗಿ ಪಾಂಡವರ ಮನೋಭಿಷ್ಟವನ್ನು ಅನುಗ್ರಹಿಸಿದವಳೇ, ಈ ಪಾಂಚಭೌತಿಕ ಶರೀರದಲ್ಲಿ ಯಾವ ಸಾಧನವನ್ನು ನಾ ಕಾಣೆ, ಶ್ರೀಪತಿಯ ನಾಮಸ್ಮರಣೆಯನ್ನು ನನ್ನ ನಾಲಿಗೆತುದಿಯಲ್ಲಿ ಬರುವಂತೆ ಮಾಡು, ರುದ್ರಾದಿಗಳಿಗೆ ವರಕೊಡುವವಳೇ, ತಪಸ್ಸನ್ನು,ಆಚರಿಸುವ ಸಜ್ಜನರಿಗೆ ಪ್ರಿಯನಾದ ಶ್ರೀ ವಿಜಯವಿಠ್ಠಲಮೂರ್ತಿಯ ಪಾದಕಮಲಗಳ ಅರ್ಚನೆಯನ್ನು ಮಾಡುವ ಶ್ರೀ ಭೂ,ದುರ್ಗಾರೂಪತ್ರಯಳು ನೀನಾಗಿರುವಿ.[8]

---

7. ಆದಿತಾಳ–ಗೋಪಿನಂದನೆ ಮುಕ್ತೆ, ದೈತ್ಯಸಂತತಿಗೆ ಸಂ।ತಾಪ ಕೊಡುತಿಪ್ಪ ಮಹಾಕಠೋರೆ ಉಗ್ರ್ರ ರೂಪ ವೈಲಕ್ಷಣೆ, ಅಜ್ಞಾನಕ್ಕಭಿಮಾನಿನಿ। ತಾಪತ್ರಯವಿನಾಶೆ, ಓಂಕಾರೆ, ಹೂಂಕಾರೆ। ಪಾಪಿಕಂಸಗೆ ಭಯತೋರಿದ ಬಾಲಲೀಲೆ। ವ್ಯಾಪುತೆ, ಧರ್ಮಮಾರ್ಗಪ್ರೇರಕೆ, ಅಪ್ರಾಕೃತೆ। ಸ್ವಾಪದಲಿ ನಿನ್ನ ನೆನಿಸಿದ ಶರಣನಿಗೆ ಅಪಾರಪಾರವಾಗಿದ್ದ ಶರಧಿಯಂತೆ ಮಹಾ। ಆಪತ್ತು ಬಂದಿರಲು ಹಾರಿಪೋಗೋವು, ಸಪ್ತದ್ವೀಪನಾಯಿಕೆ, ನರಕನಿರ್ಲೇಪೆ, ತಮೋಗುಣದ। ವ್ಯಾಪಾರ ಮಾಡಿಸಿ ಭಕ್ತ ಜನಕೆ ಪುಣ್ಯ। ಸೋಪಾನ ಮಾಡಿಕೊಡುವ ಸೌಭಾಗ್ಯವಂತೆ.॥7॥

8. ಪ್ರಾಮುತವಾಗಿ ಎನ್ನ ಮನದಲಿ ನಿಂದು ದುಃಖ। ಕೂಪದಿಂದಲಿ ಎತ್ತಿ ಕಡೆಮಾಡು ಜನ್ಮ, ವಾಣಿ। ಸೌಪರ್ಣಿ ಮಿಗಿಲಾದ ಸತಿಯರು, ನಿತ್ಯ ನಿನ್ನ। ಆಪಾದ ಮೌಳಿತನಕ ಭಜಿಸಿ ಭವ್ಯರಾದರು। ನಾ ಪೇಳುವದೇನು ಪಾಂಡವರ ಮನೋಭೀಷ್ಟೇ। ಈ ಪಂಚಭೌತಿಕದಲ್ಲಿ ಆವಸಾಧನಕಾಣೆ। ಶ್ರೀಪತಿನಾಮ ಒಂದೇ ಜಿಹ್ವಾಗ್ರದಲಿನೆನೆವ। ಔಪಾಸನಕೊಡು ರುದ್ರಾದಿಗಳ ವರದೆ। ತಾಪಸಜನಪ್ರೀಯೆ, ವಿಜಯವಿಠ್ಠಲಮೂರ್ತಿಯ ಶ್ರೀಪಾದಅರ್ಚನೆಮಾಳ್ಪ ಶ್ರೀಭೂದುರ್ಗಾ ವರ್ಣಾತ್ರಯೇ ॥8॥

Rarest Archiver

ದುರ್ಗಾದೇವಿಯೇ, ಹಾ ದುರ್ಗೆಯೇ ! ಮಂಗಳಪ್ರದದುರ್ಗೆಯೇ, ನನಗೆ ದುರ್ಗತಿಯನ್ನು ನೀನು ಕೊಡದಿರು, ನೀನು ಶ್ರೀವಿಜಯವಿಠ್ಠಲಗೆ ಪ್ರಿಯಳಾಗಿದ್ದೀ.[9]

---

9. ಜತೆ– ದುರ್ಗೆ ಹಾ ಹೆ ಹೊ ಹಾ ದುರ್ಗೆ ಮಂಗಳ ದುರ್ಗೆ। ದುರ್ಗತಿಕೊಡದಿರು ವಿಜಯವಿಠ್ಠಲಪ್ರಿಯೆ॥

****

ಶ್ರೀ ವಿಜಯದಾಸಾರ್ಯ ವಿರಚಿತ
ಶ್ರೀ ದುರ್ಗಾಸ್ತೋತ್ರಸುಳಾದಿ ವಿಶೇಷಾರ್ಥಗಳು

ಒಂದನೆಯ ನುಡಿ

ದುರ್ಗಾ – ಈ ದುರ್ಗಾ ಶಬ್ದಕ್ಕೆ ಶ್ರೀ ವಾದಿರಾಜತೀರ್ಥಪೂಜ್ಯಚರಣರು ಅನೇಕ ಅರ್ಥಗಳನ್ನು ತಿಳಿಸಿದ್ದಾರೆ.

ದುರ್ಜ್ಞೇಯತ್ವಾತ್ ದುಃಖದತ್ವಾತ್ ದುಷ್ಪ್ರಾಪ್ಯತ್ವಾಚ್ಚ ದುರ್ಜನೈಃ।
ಸತಾಮಭಯಭೂಮಿತ್ವಾತ್ ದುರ್ಗಾ ತ್ವಂ ಹೃದ್ಗುಹಾಶ್ರಯಾತ್ ॥

ಪಶ್ಚಿಮ ಪ್ರಬಂಧ–ಶ್ಲೋಕ–20

1. ದುರ್ಜ್ಞೇಯತ್ವಾತ್ ದುರ್ಗಾ– ಸಾಕಲ್ಯೇನ ಬ್ರಹ್ಮಾದಿಗಳಿಂದ ತಿಳಿಯಲಶಕ್ಯಳು.
2. ದುಃಖದತ್ವಾತ್– ದುರ್ಗಾ ದುಷ್ಟ ಜನರಿಗೆ ದುಃಖಕೊಡುವವಳು.
3. ದುಷ್ಪ್ರಾಪ್ಯತ್ವಾಚ್ಚ – ದುರ್ಗಾ ದುಷ್ಟಜನರಿಂದ ಹೊಂದಲ ಶಕ್ಯಳು.
4. ಸತಾಮಭಯಭೂಮಿತ್ವಾತ್–ದುರ್ಗಾ ಸಜ್ಜನರಿಗೆ ಶ್ವೇತದ್ವೀಪ, ಅನಂತಾಸನ, ವೈಕುಂಠವೆಂಬ ತ್ರಿಧಾಮರೂಪಳಾಗಿ ಅಭಯ ಸ್ಥಾನೀಯಳು.
5. ಹೃದ್ಗುಹಾಶ್ರಯತ್ವಾತ್ – ದುರ್ಗಾ–ಸಕಲ ಜೀವರ ಹೃದಯಗಳಲ್ಲಿ ನಿಯಾಮಕತ್ವೇನ ನೆಲೆಸಿದವಳು.

ಸಂಸ್ಕೃತಿ – ಸಂಸಾರ
ಕರ್ಗಳಿಂದಲಿ – ಕರಗಳಿಂದಲಿ
ನೀರ್ಗುಡಿದಂತೆ – ನೀರು ಕುಡಿದಂತೆ

ಎರಡನೆಯ ನುಡಿ

ಅರಿದರಾಂಕುಶ – ಚಕ್ರ, ಶಂಖ, ಅಂಕುಶ (ಆಯುಧಗಳು)
ಪರಶು – ಚಪ್ಪಗೊಡಲಿ
ಮುದ್ಗರ – ಭಾರವಾದ ಡೊಣ್ಣೆ
ಚಾಪ – ಬಿಲ್ಲು

Rarest Archiver

ಮಾರ್ಗಣ - ಬಾಣ
ಮುಸಲ - ಒನಕೆ, ಗದೆ
ಸರುವ - ಸರ್ವ

ಮೂರನೆಯ ನುಡಿ

ಕರಾಳ ವದನೆ - ಭಯಂಕರ ಮುಖವುಳ್ಳವಳು.
ರಾತ್ರಿ - ರತಿ ಸುಖವನ್ನು ಕೊಡುವುದರಿಂದ ಶ್ರೀವಿಷ್ಣುವೇ ಮುಖ್ಯವಾಗಿ ರಾತ್ರಿಯೆಂದು ಹೇಳಲ್ಪಡುತ್ತಾನೆ. ಆ ಹರಿಯನ್ನೇ ಸದಾಕಾಲ ಆಶ್ರಯಿಸಿಕೊಂಡಿರುವುದರಿಂದ ದುರ್ಗಾದೇವಿಯು ಕೂಡ ರಾತ್ರಿಯೆನಿಸಿದ್ದಾಳೆ.
- ರತಿದತ್ವಾತ್ ಪರೋ ವಿಷ್ಣುರ್ಮುಖ್ಯತೋ ರಾತ್ರಿರುಚ್ಯತೇ ।
ತದಾಶ್ರಯತ್ವಾತ್ ದುರ್ಗಾಽಪಿ ರಾತ್ರಿರಿತ್ಯಭಿದೀಯತೇ ॥
ಐತರೇಯ ಭಾಷ್ಯ (3–2–4)

ರಾತ್ರಿಂಚರಣೆ - ರಾತ್ರಿಯಲ್ಲಿ ತಾನು ಸಂಚಾರ ಮಾಡಿ,ರಾತ್ರಿ ಸಂಚರಿಸುವ ದುಷ್ಟ ಶಕ್ತಿಗಳನ್ನು ಸಂಹರಿಸಿ ಸಜ್ಜನರನ್ನು ಉದ್ಧರಿಸುವವಳು,
ಹಸ್ತಿಗಮನೆ - ಮಂದಗಮನೆ, ಗಜಗಮನೆ,
ಪ್ರತಿಕೂಲಭೇದೇ - ಸಜ್ಜನರ ಸಾಧನಕ್ಕೆ ಅಡ್ಡಿ ಬರುವ ಕರ್ಮನಾಶಕಳು.
ಶತಪತ್ರನಯನೆ - ಕಮಲನಯನೆ,
- ಸಹಸ್ರಪತ್ರಂ ಕಮಲಂ ಶತಪತ್ರಂ ಕುಶೇಶಯಮ್ ।
ಪಂಕೇರುಹಂ ತಾಮರಸಂ ಸಾರಸಂ ಸರಸೀರುಹಮ್ ॥
ಅಮರಕೋಶ

ಚತುರಕಪರ್ದಿಯೆ - ನಾಲ್ಕು ಹೆರಳುಗಳುಳ್ಳವಳು
- ಚತುಷ್ಕಪರ್ದಾಯುವತಿಃ ಸುಪೇಶಾ
ಘೃತಪ್ರತೀಕಾ ವಯನಾನಿ ವಸ್ತೇ॥ಐತರೇಯಭಾಷ್ಯ (3–1–6)
ಚ್ಯುತಿದೂರ - ನಾಶರಹಿತ (ಚತುರ್ವಿಧನಾಶರಹಿತ ಶ್ರೀಹರಿ)
- ಅನಿತ್ಯತ್ವಂ ದೇಹಹಾನಿಃ ದುಃಖಪ್ರಾಪ್ತಿರಪೂರ್ಣತಾ ।
ನಾಶಶ್ಚತುರ್ವಿಧ ಪ್ರೋಕ್ತಃ ತದಭಾವೋ ಹರೇಃ ಸದಾ ॥

ನಾಲ್ಕನೆಯ ನುಡಿ

ಧನ್ಯಾ - ಧನ್ಯಳು, ಏನನ್ನೂ ಅಪೇಕ್ಷಿಸದವಳು
ನಿರಪೇಕ್ಷಗುಣ್ಯೈಃಪೂರ್ಣೋ ಧನ್ಯಇತ್ಯುಚ್ಯತೇ ಬುಧೈಃ ॥
ಏಳಲ - ಉದಾಸೀನ
ಪಾಲಸಾಗರಶಾಯಿ - ಕ್ಷೀರಾಬ್ಧಿಶಾಯಿ

ಐದನೆಯ ನುಡಿ

ತಾಪತ್ರಯ - ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ
ಅಪ್ರಾಕೃತೆ - ಪ್ರಾಕೃತ ಗುಣಗಳಾದ ಸತ್ವ, ರಜ, ತಮೋಗುಣ ರಹಿತೆ

Rarest Archiver

ತಮೋಗುಣದ ವ್ಯಾಪಾರ ಮಾಡಿಸಿ ಭಕ್ತ ಜನಕೆ ಪುಣ್ಯಸೋಪಾನ ಮಾಡಿ ಕೊಡುವ ಸೌಭಾಗ್ಯವಂತೆ	ಸಾತ್ವಿಕಾದಿ ಜೀವರಿಗೆ ಅನಾದಿಕಾಲದಿಂದ ಅವಿದ್ಯಾಕಾಮ ಕರ್ಮಾದಿಗಳುಂಟು, ದುರ್ಗಾದೇವಿಯು ಮುಕ್ತಿಯೋಗ್ಯ ಸಾತ್ವಿಕ ಜೀವರಿಗೆ ಒದಗುವ ತಮೋಗುಣದ ಕಾರ್ಯವನ್ನು ಮಾಡಿಸಿದರೂ ಆ ತಮೋಗುಣವ್ಯಾಪಾರದ ಫಲವನ್ನು ದೈತ್ಯರಿಗೆ ಕೊಟ್ಟು ಈ ಮುಕ್ತಿಯೋಗ್ಯ ಜೀವರಿಗೆ ದುಷ್ಕರ್ಮಫಲ ಲೇಪವಿಲ್ಲದಂತೆ ಮಾಡಿ ಪುಣ್ಯ ಸೋಪಾನ ಮಾಡಿಕೊಟ್ಟು ಆನಂದಪಡಿಸುವ ಸೌಭಾಗ್ಯವಂತೆಯು.
ಪಾಂಡವರ ಮನೋಭೀಷ್ಟೆ-	ಅಜ್ಞಾತವಾಸವನ್ನು ಪ್ರಾರಂಭಿಸುವ ಮೊದಲು ಪಾಂಡವರು ತಮ್ಮ ಅಸ್ತ್ರಶಸ್ತ್ರಗಳನ್ನು ಸ್ಮಶಾನದ ಹತ್ತಿರ ಶಮೀವೃಕ್ಷದಲ್ಲಿ ಶವಾಕಾರವಾಗಿ ಬಿಗಿದುಕಟ್ಟಿ ಇಟ್ಟು- ವಿರಾಟನಗರವನ್ನು ಸೇರುವ ಮುನ್ನ ವೇಷ, ನಾಮಗಳನ್ನು ಬದಲಿಸಿಕೊಂಡು ತಮ್ಮ ಅಜ್ಞಾತವಾಸದ ಅವಧಿ ನಿರ್ವಿಘ್ನವಾಗಿ ಮುಗಿದು, ಕುರುಕ್ಷೇತ್ರ ಯುದ್ಧದಲ್ಲಿ ತಮಗೆ ಜಯತಂದು ಕೊಡಬೇಕೆಂದು ದುರ್ಗಾದೇವಿಯನ್ನು ಪ್ರಾರ್ಥಿಸಿ ಸ್ತೋತ್ರ ಮಾಡಿದರು, ಅವರ ಸ್ತುತಿಗೆ ಪ್ರಸನ್ನಳಾದ ದುರ್ಗಾದೇವಿಯು ಪಾಂಡವರನ್ನು ಅನುಗ್ರಹಿಸಿದಳು ಈ ಕಾರಣದಿಂದ ಅವಳು ಪಾಂಡವರ ಮನೋಭೀಷ್ಟೆ.

ಆರನೆಯ ನುಡಿ

ದುರ್ಗತಿ– ದುರವಸ್ಥೆ, ಕೆಟ್ಟ ಗತಿ, ದುಃಖದ ಸ್ಥಿತಿ.

ಶ್ರೀ ವಿಜಯದಾಸಾರ್ಯ ವಿರಚಿತ ಪ್ರಾಣದೇವರ ಚರಣಮಹಿಮಾ ಸುಳಾದಿ.

ಇಲ್ಲಿ ಶ್ರೀ ಪ್ರಾಣದೇವರು ಅವತಾರತ್ರಯದಲ್ಲಿ ಮಾಡಿದ ಕಾರ್ಯಗಳನ್ನು ವರ್ಣಿಸುತ್ತ ಶ್ರೀ ವಾಯುದೇವರ ಅದ್ಭುತ ಮಹಿಮೆಯನ್ನು ವರ್ಣಿಸಿದ್ದಾರೆ.

ಅಂದಿಗೆ ಪೊಂಗೆಜ್ಜೆಗಳಿಂದ ಶೋಭಿಸುವ ಝುಗಝುಗಿಸುವ ಕೆಂಪಾದ ಕಾಂತಿಯಿಂದ ಕೂಡಿದ ಪಾದವುಳ್ಳ, ಚಂದ್ರನ ಕಾಂತಿಯನ್ನು ಸೋಲಿಸುವ ಶ್ರೀ ಪ್ರಾಣದೇವರು ಬ್ರಹ್ಮಾಂಡದಲ್ಲಿ ಬೆಳಗುತ್ತಾರೆ. ತಂದೆ, ತಾಯಿ, ನೀನೆ ಎಂದು ಶ್ರೀ ಹರಿಯ ಮುಂದೆ ಕೈಯಲ್ಲಿ ಕಿನ್ನರಿವಾದ್ಯ ಧರಿಸಿ ಅಂದವಾಗಿ ನರ್ತಿಸುತ್ತಾರೆ. ಶಿವಾದಿದೇವತೆಗಳಿಂದ ವಂದ್ಯರಾಗಿದ್ದಾರೆ. ಮಂದಮಾನವರನ್ನು ಪ್ರೀತಿಯಿಂದ ಸುಖ ಸಮುದ್ರದಲ್ಲಿಟ್ಟು ಕೃಪೆ ತೋರುತ್ತಾರೆ. ತಾಮಸ ಜನರಿಗೆ ಸಂಶಯ, ವಿಪರೀತ ಜ್ಞಾನಗಳನ್ನಿತ್ತು,

Rarest Archiver

ಸಂಸಾರದ ಬಂಧನದಲ್ಲಿಟ್ಟು ದುಃಖ ಪಡಿಸುತ್ತಾರೆ. (ತಮಸಿ ಸುಬಹುಲಂ ದುಃಖಯಸಿ ಅನ್ಯಥಾಜ್ಞಾನ್) ಮುಂದಿನ ಕಲ್ಪದಲ್ಲಿ ಚತುರ್ಮುಖಬ್ರಹ್ಮಪದವಿ ಪಡೆದು ಸತ್ಯಲೋಕದಲ್ಲಿ ಸಿಂಹಾಸನವನ್ನಲಂಕರಿಸಿ ಮೆರೆಯುತ್ತಾರೆ.[1]

ಶ್ರೀ ವಾಯುದೇವರ ಒಂದೊಂದು ಗುಣರೂಪ ಕ್ರಿಯೆಗಳು ಮನಸ್ಸಿಗೆ ಸುಲಭವಾಗಿ ತಿಳಿಯುವದಿಲ್ಲ ಸುಂದರರಾದ ಭಾರತೀದೇವಿಯರು ಏಕಾಂತದಲ್ಲಿ ಶ್ರೀ ವಾಯುದೇವರ ಪಾದಗಳನ್ನು ಸುಗಂಧದ್ರವ್ಯಗಳಿಂದ ಪೂಜಿಸಿ ಅಪ್ಪಿಕೊಳ್ಳುತ್ತಾರೆ. ತಂದೆ ತಾಯಿಗಳಂತೆ ಅವರು ಭಕ್ತರ ಅಭಿಲಾಷೆಗಳನ್ನು ಕರುಣೆಯಿಂದ ಪೂರೈಸುತ್ತಾರೆ. ಶರಣಾಗತರನ್ನು ವಿಶ್ವಾಸದಿಂದ ಬಂಧನ ಪರಿಹರಿಸಿ ಪಾಲಿಸುತ್ತಾರೆ. ಹೃತ್ಕಮಲ ಮಧ್ಯದಲ್ಲಿರುವ ಆಕಾಶದಲ್ಲಿ ಶ್ರೀದಾಸರಿಂದ ನಿತ್ಯ ಪೂಜೆಗೊಳ್ಳುತ್ತಾರೆ.ಮನ್ಮಥ (ಕಾಮನ) ತಂದೆಯಾದ ಶ್ರೀವಿಜಯವಿಠಲನಿಗೆ ಶ್ರೀಸೂತ್ರನಾಮಕ ಪ್ರಾಣದೇವರು ನಿತ್ಯದಲ್ಲಿ ಬಾಗಿ ನಮಸ್ಕರಿಸುತ್ತಾರೆ.[2]

ಶ್ರೀ ವಾಯುದೇವರು ಶ್ರೀಹರಿಯಾಜ್ಞೆಯಿಂದ ಅಂಜನಾದೇವಿಯಲ್ಲಿ ಅವತರಿಸಿ ಸೂರ್ಯನ ಕಡೆಗೆ ಹಾರಿದರು. ಸುಗ್ರೀವನನ್ನು ಭಕ್ತನೆಂದು ಸ್ವೀಕರಿಸಿ ಅವನ ಭಯವನ್ನು ಪರಿಹರಿಸಿ ಅವನಿಂದ ವಂದ್ಯರಾದರು. ಶ್ರೀರಾಮನನ್ನು ನೋಡಿ ಭಕ್ತಿವಶರಾಗಿ ನರ್ತಿಸಿದರು. ಇಂದ್ರಸುತನಾದ ವಾಲಿಯ ಗರ್ವವನ್ನು ಭಂಜಿಸಿದರು. ಮಧುರಭಾಷಿಯಾದ

---

1. ಧ್ರುವತಾಳ–ಅಂದಿಗೆ ಪೊಂಗೆಜ್ಜೆ ಬಿರುದಿನ ಕಾಲ್ಪೆಂಡೆ।ಯಿಂದ ಝುಗಝುಗಿಸುವ ಅರುಣಕಾಂತಿಯ ಚರಣ। ಇಂದುವಿನ ಸೋಲಿಸುವ ಪ್ರಕಾಶ ಮಣಿಪ್ರಭೆ।ಯಿಂದ ಬ್ರಹ್ಮಾಂಡವನ್ನು ಬೆಳಗುತ್ತಿಪ್ಪ ಚರಣ। ತಂದೆ ತಾಯಿ ಎಂದು ಕೈಲಿ ಕಿನ್ನರಿ ಧರಿಸಿ। ಅಂದವಾಗಿ ಶ್ರೀಹರಿಯ ಮುಂದೆ ಕುಣಿವ ಚರಣ। ಇಂದುಮೌಳಿಮುಖ ಸುರಾದ್ಯರಿಂದ ಆ। ನಂದದಿಂದಲಿ ನಿತ್ಯ ಪೂಜೆಗೊಂಬ ಚರಣ। ಮಂದಮಾನವರಿಗೆ ಪ್ರೀತಿ ಬಡಿಸಿ ಸುಖ। ಸಿಂಧುವಿನೊಳಗಿಟ್ಟು ದಯಮಾಳ್ಪುದೀ ಚರಣ। ಸಂದೇಹ ವಿಪರೀತ ಜ್ಞಾನ ದುರ್ಜೀವರಿಗೆ। ಬಂಧನದೊಳು ಪೊಗಿಸಿ ಕಷ್ಟಪಡಿಸುವ ಚರಣ। ಮುಂದೆ ಬೊಮ್ಮನಾಗಿ ದ್ವಿಸಪ್ತಲೋಕದಲ್ಲಿ। ಮೃಗೇಂದ್ರ ಗದ್ದಿಗೆ ಮೇಲೆ ಓಲಗಗೊಂಬ ಸುಂದರ ಚರಣ।

2. ಒಂದೊಂದು ಗುಣರೂಪ ಕ್ರಿಯಾ ಸಮೂಹಗಳು ಅತೀಂದ್ರಿಯವಾಗಿ ಮನಕೆ ತೋರುವ ಸಿರಿಚರಣ। ಸುಂದರ ಭಾರತೀದೇವಿ ಏಕಾಂತದಲಿ ನೋಡಿ। ಗಂಧ ಪರಿಮಳ ಪೂಸಿ ಅಪ್ಪಿಗೊಂಬುವ ಚರಣ। ತಂದೆ ತಾಯಿಗಳಂತೆ ತಪ್ಪದೇ ಅನುದಿನ। ಅಂದದಿ ಅಭಿಲಾಷೆ ಕೊಡುವ ಕಮನೀಯ ಚರಣ। ಅಂದಿಗಂದಿಗೆ ಸಮವಾಗಿ ಸಾಧ್ಯವಾಗಿ। ಒಂದೇಪ್ರಕಾರವಾಗಿ ಭಕ್ತರಿಗೆ ಒಲಿವ ಚರಣ। ಇಂದು ಹೃತ್ಕಮಲಮಧ್ಯದಹರಾಕಾಶದಲಿ। ಎನ್ನಿಂದ ಪೂಜಿತವಾದ ಮಂಗಲಚರಣ। ಕಂದರ್ಪಪಿತ ನಮ್ಮ ವಿಜಯವಿಠ್ಠಲಗೆ ಶರಣೆಂದು ಬಾಗುವ ಸೂತ್ರಪ್ರಾಣನ ಚರಣ॥

Rarest Archiver

ಶ್ರೀರಾಮನ ಆಜ್ಞೆಯನ್ನು ಸ್ವೀಕರಿಸಿ ಕಪಿಸಮೂಹದೊಡನೆ ಸೀತಾಕೃತಿಯ ಅನ್ವೇಷಣೆಗೆ ತೆರಳಿದರು. ಸಮುದ್ರಮಥನಕಾಲದಲ್ಲಿ ಹಾಲಾಹಲವಿಷವನ್ನು ಆಸ್ವಾದಿಸಿದ ಶ್ರೀ ವಾಯುದೇವರ ಕುಮಾರರಾದ ಧೀರ ಹನುಮಂತದೇವರು ಪರ್ವತವನ್ನು ಮೆಟ್ಟಿ ಜಿಗಿದು ಸಮುದ್ರವನ್ನು ಲೀಲೆಯಿಂದ ದಾಟಿದರು. [3]

ಪ್ರಳಯ ಮಾರುತನಂತೆ ಆರ್ಭಟಿಸುತ್ತ ಲಂಕೆಯನ್ನು ಪ್ರವೇಶಿಸಿ ಸೀತೆಯ ಸಲುವಾಗಿ ರಾಜಧಾನಿಯಲ್ಲಿ (ಲಂಕೆಯಲ್ಲಿ) ಸಂಚರಿಸಿದರು. ಸ್ವಲ್ಪವೂ ಭಯವಿಲ್ಲದೇ ಲಂಕೆಯನ್ನು ಅಗ್ನಿಗೆ ಉಣಿಸಿದರು. ಸ್ವಾಮಿಕಾರ್ಯದಲ್ಲಿಯೂ ಸಹ ಸೇವೆಮಾಡುತ್ತ ಶಿವನವರದಿಂದ ಕೊಬ್ಬಿದ ದೈತ್ಯರನ್ನು ಸಂಹರಿಸಿದರು. ಅರ್ಜುನನ ರಥದ ಧ್ವಜಕ್ಕೆ ಹಾರಿದರು. ಹೃತ್ಕಮಲವಾಸಿಯಾದ ಶ್ರೀವಿಜಯವಿಠ್ಠಲನ ಪಾದಕಮಲಗಳಲ್ಲಿ ಭೃಂಗದಂತೆ ಇರುವ ಹನುಮಂತದೇವರು ತಮ್ಮ ಸುವರ್ಣವರ್ಣದ ಪಾದಗಳಿಂದ ಶೋಭಿಸಿದರು.[4]

ಶ್ರೀ ಭೀಮಸೇನದೇವರು ದೇವತೆಗಳಲ್ಲಿ ಶ್ರೇಷ್ಠರು ಅವತಾರ ಮಾಡಿದ ಕ್ಷಣದಲ್ಲಿ ಪರ್ವತವನ್ನು ಶತಶೃಂಗವುಳ್ಳದ್ದನ್ನಾಗಿ ಮಾಡಿದರು. ಬಾಲ್ಯದಲ್ಲಿ ಗಿಡದ ಮೇಲೆ ಇದ್ದ ದುರ್ಯೋಧನಾದಿ ಕೌರವರನ್ನು ಕೆಳಗೆ ಕೆಡವಿದರು. ಗಂಗೆಯ ಮಡುವಿನಲ್ಲಿ ವಿಷಪೂರಿತ ಸರ್ಪಗಳನ್ನು ದೂರ ಅಟ್ಟಿದರು. ಅರಗಿನಮನೆಯಿಂದ ಬಂದು ಹಿಡಿಂಬಾಸುರನನ್ನು

---

3. ಮಟ್ಟತಾಳ–ಅಂಜನಾದೇವಿಯಲಿ ಉದಭವಿಸಿ ಬಂದು। ಕಂಜಸಖನೆಡೆಗೆ ಹಾರಿದ್ದುದೀ ಚರಣ। ಕಂಜಮಿತ್ರನ ಸುತನ ಕರೆದು ಮನ್ನಿಸಿ ಅವನ। ಅಂಜಿಕೆಯನು ಬಿಡಿಸಿ ಎರಗಿಸಿಕೊಂಡ ಚರಣ। ಕಂಜನಾಭನಕಂಡು ಪರವಶದಲಿ ಹಾಹಾ। ರಂಜಿಸುತಲಿ ಎರಗಿ ಜಿಗಿದಾಡಿದ ಚರಣ। ಕುಂಜರನಾಥನ ಮಗನ ಮಹಾಗರ್ವ। ಭಂಜನ ಮಾಳ್ಪುದಕೆ ನಡೆದಾಡಿದ ಚರಣ। ಮಂಜುಭಾಷಣರಾಮ ಹೇಳಿದಾಕ್ಷಣ ಕಪಿ।ಪುಂಜರ ಒಡಗೊಂಡು ತೆರಳಿದ್ದೀ ಚರಣ। ನಂಜುಸವಿದ ಧೀರ ಗಿರಿಯ ಜಿಗಿದುನೋಡಿ। ಅಂಜದೆ ಜಲಧಿಯ ಲಂಘಿಸಿದ ಚರಣ॥

4. ಝುಂಝಾನಿಲನಂತೆ ದೈತ್ಯ ಪಟ್ಟಣಪೊಕ್ಕು ಕಂಜಮುಖಿಗೋಸುಗ ಸಂಚರಿಸಿದ ಚರಣ। ಗುಂಜಿ ತೂಕದಿನಿತು ಭಯವಿಲ್ಲದೆ ಪುರ ಧ।ನಂಜಯ ಗುಣಿಸುತ್ತ ಓಡ್ಯಾಡಿದ ಚರಣ। ವ್ಯಂಜಕ ತಾನಾಗಿ ಸ್ವಾಮಿ ಕಾರ್ಯದಲಿ ಮೃತ್ಯುಂಜಯ ಶಿಷ್ಯರನುದರಿಸಿದ ಬಲು ಚರಣ। ಭುಂಜಿಪ ಎಡೆಗೊಂಡು ದೇವನಲಿ ಇಡಲು। ಎಂಜಲನೆ ವೈದು ಮರವೇರಿದ ಚರಣ। ಅಂಜಲಿ ಪುಟಬಿಟ್ಟು ಬಿಂಕದಲಿ, ಧನಂಜಯನ ರಥಕೆ ಬಂದೇರಿದ ಚರಣ। ಕಿಂಜಲ್ಕವಾಸ ಶ್ರೀವಿಜಯವಿಠ್ಠಲನಂಘ್ರಿ ಕಂಜ ಮಧುಪ ಹನುಮನ ಕನಕವರ್ಣ ಚರಣ ॥

Rarest Archiver

ಸಂಹರಿಸಿ ಹಿಡಿಂಬೆಯನ್ನು ಸ್ವೀಕರಿಸಿ ಅವಳಿಂದ ಪೂಜಿತರಾದರು. ಏಕಚಕ್ರನಗರದಲ್ಲಿ ಭಿಕ್ಷಾನ್ನ ಬೇಡುತ್ತ ದುಷ್ಟ ಬಕಾಸುರನನ್ನು ಸಂಹರಿಸಿದರು. ಅರಸನ ಸಭೆಯಲ್ಲಿ ಹುಂಕರಿಸಿದರು. ದ್ರೌಪದಿಯನ್ನು ಪತ್ನಿಯನ್ನಾಗಿ ಸ್ವೀಕರಿಸಿದರು. ಧರ್ಮರಾಜನು ರಾಜಸೂಯಯಾಗ ಮಾಡಲು ದೇಶದೇಶಗಳಲ್ಲಿ ರಾಜರಿಂದ ವಂದ್ಯರಾದರು ಸರ್ಪರೂಪೀ ನಹುಷನ ಸೆಳೆತಕ್ಕೆ ಸಿಕ್ಕು ಅವನನ್ನು ಉದ್ಧರಿಸಿದ ಚರಣ. ದೇವತೆಗಳಲ್ಲಿ ಅಧಿಕ ಪ್ರೀತಿತೋರುವ ಚರಣ. ವನವಾಸದಲ್ಲಿ ದ್ರೌಪದಿಗೆ ಪುಷ್ಪಗಳನ್ನು ತರಲು ಸೌಗಂಧಿಕಾವನಕ್ಕೆ ಹೋದಾಗ ಅನೇಕ ಮಣಿಮಂತಾದಿ ದೈತ್ಯರನ್ನು ಸಂಹರಿಸಿದರು. ಅಜ್ಞಾತವಾಸದಲ್ಲಿ ವಿರಾಟನಗರದಲ್ಲಿದ್ದುಕೊಂಡು ಕೀಚಕನನ್ನು ಕೊಂದು ವೀರಾಧಿವೀರರಾಗಿ ಮೆರೆದರು.[5]

ಕುರುಕ್ಷೇತ್ರ ಯುದ್ಧದಲ್ಲಿ ಅನೇಕ ಭೀಷ್ಮಾದಿಯೋಧರನ್ನು ಸಂಹರಿಸಿ ಅಪ್ರತಿಹತ ವೀರರೆನಿಸಿದರು. ಪಾಂಚಾಲಿಯ ಹೆರಳನ್ನು ಎಳೆದ ಖಳನಾದ ದುಃಶಾಸನನನ್ನು ಕೆಡವಿ ಅವನ ಎದೆಯ ಮೆಟ್ಟಿ ಕುಣಿದಾಡಿದರು. ದುರ್ಯೋಧನನನ್ನು ರಣಭೂಮಿಯಲ್ಲಿ ತಲೆ ಮೆಟ್ಟಿನಿಂತ ಅಪ್ರತಿಹತ ವೀರರು. ಶ್ರೀ ಭೀಮಸೇನದೇವರು ಶ್ರೀಹರಿಗೆ ಸನ್ಮುಖರಾಗಿ ಯುದ್ಧವೆಂಬ ಯಜ್ಞದಲ್ಲಿ ಶತ್ರುಗಳೆಂಬ ಪಶುಗಳನ್ನು ಹೋಮಿಸಿ ಶ್ರೀಹರಿಗೆ ಅರ್ಪಿಸಿ ನಾಟ್ಯವಾಡಿದರು. ಯುದ್ಧದಲ್ಲಿ ನಾರಾಯಣಾಸ್ತ್ರ ಪ್ರಯೋಗಸಮಯದಲ್ಲಿ ಕ್ಷಾತ್ರಧರ್ಮ ಮೆರೆದ ವೀರರು. ಪರಮಪುರುಷ ಶ್ರೀಕೃಷ್ಣರೂಪೀ ವಿಜಯವಿಠ್ಠಲಗೆ ಅವನ ಭಕ್ತರಲ್ಲಿ ಶ್ರೇಷ್ಠರಾದವರು ಶ್ರೀ ಭೀಮಸೇನದೇವರು ಎಂದು ಪ್ರಸಿದ್ಧಿಪಡೆದವರಾಗಿದ್ದಾರೆ.[6]

---

5. ತ್ರಿಪುಟತಾಳ –ಗಿರಿಯ ಮಧ್ಯದಿ ವದ್ದ ದಿವಿಜಗೂಳಿಚರಣ। ಮರದ ಮೇಲಿದ್ದವರ ಕೆಡಹಿದ ಚರಣ। ವರನದಿಯೊಳು ಬಿದ್ದು ಅಹಿಗಳಟ್ಟಿದ ಚರಣ। ನಿರುತ ಪರಿಪರಿಯಿಂದ ನಲಿದಾಡಿದ ಚರಣ। ಅರಗಿನ ಮನೆಯಿಂದ ಒಂದು ರಾತ್ರಿ ಹಿಡಿಂಬನ। ವರೆಸಿ ಸತಿ ಹಿಡಿಂಬೆಯಿಂದ ಅರ್ಚಿಸಿಗೊಂಡ ಚರಣ। ಪುರದೊಳಗೆ ಭಿಕ್ಷಾನ್ನ ಬೇಡುತ ತಿರುಗಿದ ಚರಣ। ದುರುಳ ಬಕನ ಒದ್ದ ದುಸ್ತರದ ಚರಣ। ಅರಸನ ಸಭೆಯಲಿ ಹೂಂಕರಿಸಿದ ಹರುಷದಲಿ। ನೆರೆದು ದ್ರೌಪದಿಯ ಬಂದು ಕಂಡ ಚರಣ। ನರನಾಥ ರಾಜಸೂಯಯಾಗ ಮಾಡಲು ಹೋಗಿ। ಧರೆಯಲ್ಲಿ ತಿರುಗಿ ವಂದಿಸಿಕೊಂಡ ಚರಣ। ಪುರುಷಮೃಗನ ಕೈಲಿಪಿಡಿಸಿಕೊಂಡ ಚರಣ ಸುರರೊಳು ಅಧಿಕ ದಭಿಮಾನ ಚರಣ। ತೆರಳಿ ವನದೊಳು ಕುಸುಮ ಘೋಷಯಾತ್ರಾ। ವರ ಮತ್ಸ್ಯಪುರದಲಿ ಮೆರೆದ ಮಂದಾರ ಚರಣ॥

6. ಧುರದೊಳಗೆ ನಿಂದು ಬಲ್ಲಿದರ ಅನ್ಯೋನ್ಯದಿ। ವರೆಸಿ ಮೆರೆದ ದಿವ್ಯ ಅಪ್ರತಿಹತ ಚರಣ। ತರುಣಿ ಪಾಂಚಾಲಿಯ ಎಳೆದ ಖಳನ ಕೆಡಹಿ ಉರದ ಮೇಲೆ ನಿಂದು ಕುಣಿದಾಡಿದ ಚರಣ। ದುರಿಯೋಧನ ಬಂದು ತರುಬಲಾಕ್ಷಣ ಅವನ। ತರಿದು ಬಿಸುಟು ಶಿರವ ಮೆಟ್ಟಿದ ಮಹಾಚರಣ। ಹರಿಗೆ ಸನ್ಮೊಗನಾಗಿ ಅಟ್ಟಹಾಸದಿ ನಿಂದಿರದೆ ನಿಂದಲ್ಲಿ ನಾಟ್ಯವಾಡಿದ ಚರಣ। ಅರಿಯ ಕಡೆಯಿಂದ ಹರಿ ಅಸ್ತ್ರ ಬರಲು ಶಿರವ ಬಾಗದೆ ಧರಣಿಯ ಮೇಲೆ ಕುಣಿದ ಚರಣ।ವರ ವೃಕೋದರನ ಚರಣ ಶರಣ ಪಾಲಕ ಚರಣ। ಪರಮ ಪುರುಷ ಕೃಷ್ಣ ವಿಜಯವಿಠ್ಠಲರೇಯನ ಶರಣರೊಳಗಧಿಕನಾದ ಭೀಮಸೇನನ ಚರಣ ॥

Rarest Archiver

ಶ್ರೀ ವಾಯುದೇವರು ಶ್ರೀ ಮಧ್ವಾವತಾರ ಮಾಡಿ ಶ್ರೀ ಮಧ್ಯಗೇಹಭಟ್ಟರ ಮನೆಯನ್ನು ಪವಿತ್ರವನ್ನಾಗಿ ಮಾಡಿದರು. ಸ್ವಪ್ರಕಾಶದಿಂದ ಹೊಳೆಯುತ್ತಿದ್ದರು. ಬಾಲ್ಯದಲ್ಲಿ ತಾಯಿಯು ಪ್ರೇಮದಿಂದ ಕರೆಯಲು ತತ್‌ಕ್ಷಣ ದುರ್ಗಾಬೆಟ್ಟದಿಂದ ಜಿಗಿದು ಬಂದರು. ಮಣಿಮಂತ ದೈತ್ಯನು ಇವರನ್ನು ಸಂಹರಿಸಲು ಸರ್ಪರೂಪದಿಂದ ಬರಲು ಅವನ ಹೆಡೆಯನ್ನು ಮೆಟ್ಟಿವರೆಸಿಹಾಕಿದರು. ಉತ್ತರ ಭಾರತ ಯಾತ್ರೆಯಲ್ಲಿ ವನದಲ್ಲಿ ಬಂದ ಹೆಬ್ಬುಲಿಯನ್ನು ಎದುರಿಸಿದರು. ಯೋಗ ಶಕ್ತಿಯಿಂದ ಗಂಗೆಯನ್ನು ದಾಟಿದರು. ಭಕ್ತರಿಗೆ ತೃಪ್ತಿದಾಯಕರಾದ ಶ್ರೀ ಮಧ್ವಾಚಾರ್ಯರು ದರ್ಪದಿಂದ ಮೆರೆಯುವ ಮಹಾಮಾಯಿಜನಕ್ಕೆ ಚಪ್ಪಕೊಡಲಿಯಂತೆ ಭೀಕರರಾಗಿದ್ದರು[7]

ಬದರಿಕಾಶ್ರಮದಲ್ಲಿ ಅನೇಕ ಮುನಿಗಳು ಇವರನ್ನು ಪುಷ್ಪ ಧೂಪ ದೀಪಗಳಿಂದ ಪೂಜಿಸಿದರು. ಆಚಾರ್ಯರು ತಮ್ಮ ಭಕ್ತರಿಗೆ ತುಪ್ಪ ಸಕ್ಕರೆ, ಹಾಲು ಉಣ್ಣಿಸುವರು, ಪಾಠ ಹೇಳುವ ಸಮಯದಲ್ಲಿ ದೀಪಶಾಂತವಾಗಿ ಕಗ್ಗತ್ತಲೆ ಕವಿದಾಗ, ತಮ್ಮ ಕಾಲಿನ ಅಂಗುಷ್ಠದ ಪ್ರಕಾಶದಿಂದ ಅಪಾರ ಬೆಳಕು ಮಾಡಿ ಕತ್ತಲೆಯನ್ನು ನಾಶ ಮಾಡಿದರು ಸಜ್ಜೀವರಿಗೆ ಮೋಕ್ಷಸಾಧನ ಮಾರ್ಗವನ್ನು ಕನ್ನಡಿಯಂತೆ ತಮ್ಮ ಉಪದೇಶದಿಂದ ತೋರಿಸಿ ಕೊಟ್ಟರು. ಆ ಭಗವಂತನ ಸ್ಮರಣೆ ಮಾಡಲು ಮೋಕ್ಷಮಾರ್ಗ ಸುಲಭವೆಂದು ತಿಳಿಸಿದರು. ರುದ್ರದೇವರಿಂದ ವಂದ್ಯರಾದ, ಶ್ರೀ ಮಧ್ವಾಚಾರ್ಯರು ಹದಿನಾಲ್ಕು ಲೋಕಗಳ ಒಡೆಯನಾದ ಶ್ರೀವಿಜಯವಿಠ್ಠಲನಿಗೆ ಅತ್ಯಂತ ಆಪ್ತತಮರಾಗಿರುವರು. [8]

ಶ್ರೀ ವಾಯುದೇವರು ನಾಲ್ಕು ಯುಗಗಳಲ್ಲಿ ತಮ್ಮ ಮಹಿಮೆಯನ್ನು ತೋರಿ ಮೆರೆದ ಶ್ರೇಷ್ಠರು. 24 ತತ್ವಗಳನ್ನು ವ್ಯಾಪಿಸಿ ಇರುವ ಶ್ರೀ ವಾಯುದೇವರು ಸ್ತುತಿಸುವ ಭಕ್ತರಿಗೆ ಪಂಚಭೇದ ಜ್ಞಾನವನ್ನು ಕೊಟ್ಟು ಮೋಕ್ಷಕ್ಕೆ ಸನ್ಮಾರ್ಗದರ್ಶಕರು. ಪಾಪಿಯಾದರೂ,

---

7. ಅಟ್ಟತಾಳ – ವಿಪ್ರನ ಮನೆಯನ್ನು ಪಾವನ ಮಾಡಿದ। ಸ್ವಪ್ರಕಾಶದಿಂದ ಪೊಳೆವ ಸಿರಿಚರಣ। ಸುಪ್ರೇಮದಿಂದಲಿ ಜನನಿ ಕರೆಯಲು। ಕ್ಷಿಪ್ರತನದಲ್ಲಿ ಧುಮುಕಿದ ಚರಣ ಸರ್ಪವ ವರೆಸಿದ ಚರಣ ದಿವ್ಯ ಚರಣ। ತಪ್ಪದೆ ಹೆಬ್ಬುಲಿ ಕೂಡ ಚಲಿಸಿದ ಚರಣ। ಗುಪ್ತ ಮಾರ್ಗದಿಂದ ನದಿಯ ದಾಟಿದ ಚರಣ। ತೃಪ್ತಿಕೊಡುವದು ನಮಗೆ ಈ ಚರಣ। ದರ್ಪವುಳ್ಳ, ಮಹಾಮಾಯಿ ಅರಣ್ಯಕ್ಕೆ। ಛಪ್ಪ ಕೊಡಲಿಯಾಗಿ ಇರುತಿಪ್ಪುದೀ ಚರಣ॥

8. ಪುಷ್ಪಧೂಪದಿಂದ ಬದರಿಕಾಶ್ರಮದಲ್ಲಿ। ಸುಪ್ರೇಮದಿಂದಲಿ ಪೂಜೆಗೊಂಬುವ ಚರಣ। ತುಪ್ಪ ಸಕ್ಕರೆ ಹಾಲು ಉಣಿಸುವದೀ, ಚರಣ। ಕಪ್ಪು ಕಲ್ಮಷದಲಿ ಓದುವ ಜನಕೆ। ಅಪಾರ ಬೆಳಕು ಮಾಡಿದ ಚರಣ। ಗುಪುತವಿಲ್ಲದೇ ಜೀವನ ಸಾಧನಗಳ। ದರ್ಪಣದಂತೆ ತೋರಿಕೊಡುವ ಚರಣ। ಬಪ್ಪಪೋಗುವ ಶಕ್ತಿ ಏನು ಪೇಳಲಿ ಕಂ। ದರ್ಪನಯ್ಯನ ನೆನಸಲಾಗಿ ನೆಲೆತೋರುವ ಚರಣ। ಕಪ್ಪುಗೊರಳನಿಂದ ವಂದಿತವಾದ ಚರಣ ದ್ವಿಸಪ್ತ ಭುವನೇಶ ವಿಜಯವಿಠ್ಠಲರೇಯಗೆ ಆಪ್ತರಾದ ಶ್ರೀಮದಾನಂದತೀರ್ಥರ ಚರಣ ॥

Rarest Archiver

ಶ್ರೀ ವಾಯುದೇವರು ಶ್ರೀಹರಿಗೆ ಮುಖ್ಯಪ್ರತಿಬಿಂಬರು ಎಂದು ಒಂದು ಸಾರಿ ತಿಳಿದರೆ ಅವನನ್ನು ಇವರು ರಕ್ಷಿಸುತ್ತಾರೆ. ಯಾವಾಗಲೂ ವಾಯುದೇವರೇ ಮುಖ್ಯಗುರುವೆಂದು (ತಸ್ಮಾದ್ ಬ್ರಹ್ಮಾ ಗುರುರ್ಮುಖ್ಯಃ) ತಿಳಿದು ವಾಯುದೇವರಲ್ಲಿ ಭಕ್ತಿ ಮಾಡಿದ ಭಕ್ತನನ್ನು ವಜ್ರಪಂಜರದಂತೆ ರಕ್ಷಿಸುವರು. ಭೂಮಂಡಲದಲ್ಲಿ ಇವರೇ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ ಎನಿಸಿದ್ದಾರೆ,[9]

ಜನ್ಮ ಜನ್ಮಾಂತರದಲ್ಲಿ ಇವರನ್ನೇ ನಂಬಿದ್ದಾದರೆ ಇವರು ಪ್ರೀತಿಯಿಂದ ತಂದೆ ತಾಯಿಗಳಂತೆ ಸಲುಹಿ ಸದ್ಗತಿಯನ್ನೀಯುವರು, (ವಿಷ್ಣುರ್ಹಿದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ) ಸಂಸಾರದಲ್ಲಿ ಆರ್ತರಾದ ಜನರ ಸಂತಾಪಗಳನ್ನು ಕಳೆಯುವರು. ಉತ್ತಮ ಶ್ಲೋಕನಾದ ಶ್ರೀಹರಿಯನ್ನು ತೋರಿಸಿ ಅಜ್ಞಾನವನ್ನು ಕಳೆದು ಪ್ರೀತಿಯಿಂದ ಸುಜ್ಞಾನ, ಭಕ್ತಿಗಳನ್ನಿತ್ತು ಸುಖಪಡಿಸುವರು. ಚ್ಯುತಿರಹಿತನಾದ ನಮ್ಮ ವಿಜಯವಿಠ್ಠಲರೂಪೀ ಶ್ರೀಕೃಷ್ಣನನ್ನು ಶ್ರೀ ಮಧ್ವಮುನಿಗಳು ಉಡುಪಿಯಲ್ಲಿ ಅವನ ಸೇವಕರಾಗಿ ಧ್ಯಾನಮಾಡುವ ಮಾನ್ಯರಾದ ಗುರುಗಳು ಇವರು.[10]

ಇಂಥ ಅವತಾರತ್ರಯ ತಾಳಿದ ವಾಯುದೇವರನ್ನು ಮನಸ್ಸಿನಲ್ಲಿ ನಂಬಿದ ಜನರಿಗೆ ಶ್ರೀವಿಜಯವಿಠ್ಠಲರೂಪೀ ಭಗವಂತನು ಆಯುಷ್ಯ, ನಿತ್ಯಉತ್ಸವಗಳನ್ನು ದಯಪಾಲಿಸುವನು.[11]

=ಶ್ರೀಮಧ್ವೇಶಾರ್ಪಣಮಸ್ತು=

---

9. ಆದಿತಾಳ– ಚತುರ್ಯುಗದಲಿ ಮಹಿಮೆ ತೋರುವ ಚರಣ। ಚತುರವಿಂಶತಿ ತತ್ವವ್ಯಾಪಿ ಇಪ್ಪ ಚರಣ। ಸ್ತುತಿಸುವ ಜನಕೆ ಭೇದ ಜ್ಞಾನವ ಕೊಟ್ಟು। ಗತಿಗೆ ಸತ್ಪಥವನ್ನೇ ತೋರಿಸುವ ಚರಣ ಪತಿತನಾದರು ಒಂದು ಸಾರಿ ನಾರಾಯಣಗೆ ಮುಖ್ಯ। ಪ್ರತಿಬಿಂಬ ಎನಲು ಪಾಲಿಸುವದೀ ಚರಣ। ಸತತ ಈತನೆ ಮುಖ್ಯ ಗುರುವೆಂದು ತಿಳಿದು ಅವನ। ರತಿಯಲ್ಲಿ ಇಪ್ಪಗೆ ವಜ್ರಪಂಜರ ಚರಣ। ಕ್ಷಿತಿಯೊಳಗಿದೇ ಸುರಧೇನುವೆನಿಸುವ ಚರಣ। ಪ್ರತಿಗಾಣೆ ನನಗಿದೆ ಸುರತರು ಈ ಚರಣ।

10. ಮತ್ತೊಂದೆನಗಿಲ್ಲ ಇದೇ ಚಿಂತಾಮಣಿ ಚರಣ। ಅತಿಶಯದಿ ಜನ್ಮ ಜನ್ಮಾಂತರದಿಂದ ನಂಬಿಕೊಂಡಿಹ ಚರಣ। ಅರ್ಥಿಯಿಂದಲಿ ತಂದೆ ತಾಯಿಯಂತೆ ಪೊರೆದು ಸದ್ಗತಿಯನಿತ್ತು ಸುಖ ಉಣಿಸುವದೀ, ಚರಣ। ಆರ್ತಜನರ ಸಂತಾಪ ಕಳೆವುದೀ ಚರಣ। ಉತ್ತಮಶ್ಲೋಕನ ತೋರಿಸಿ ಉತ್ತಮನ ಮಾಳ್ಪುದೀಚರಣ। ಕತ್ತಲೆ ಹರಿಸಿ ಅರ್ಥಿಯಿಂದಲಿ ಸುಜ್ಞಾನ ಭಕುತಿ। ಇತ್ತು ಸಂತತ ಸುಖಪಡಿಸುವದೀ ಚರಣ ಚ್ಯುತಿವಿದೂರ ನಮ್ಮ ವಿಜಯವಿಠ್ಠಲನ ರ। ಜತ ಪೀಠಪುರದಿ ಭೃತ್ಯನಾಗಿ ಧ್ಯಾನ ಮಾಡುತಿಪ್ಪ ಮಧ್ವಮುನಿಯ ಮುದ್ದುಚರಣ

11. ಜತೆ–ಚಿತ್ತದಲಿ ಚರಣನಂಬಿದ ಜನರಿಗೆ। ನಿತ್ಯಾಯು ಉತ್ಸಾಹ ವಿಜಯವಿಠ್ಠಲನೀವ॥
=ಶ್ರೀ ಮಧ್ವೇಶಾರ್ಪಣಮಸ್ತು=

Rarest Archiver

ಶ್ರೀ ವಿಜಯದಾಸಾರ್ಯ ವಿರಚಿತ
ಪ್ರಾಣದೇವರ ಚರಣ ಮಹಿಮಾ ಸುಳಾದಿ
ವಿಶೇಷಾರ್ಥಗಳು

ಶ್ರೀವಾಯುದೇವರ ಮೂಲಾವತಾರ ವರ್ಣನೆ

ಇಂದುಮೌಳಿ – ಶಿವ
ಅಂದಿಗೆ – ಪಾದದಲ್ಲಿ ಧರಿಸುವ ಆಭರಣ
ಕಾಲ್ಪೆಂಡೆ – ಕಾಲಲ್ಲಿ ಧರಿಸುವ ಆಭರಣ
ಸುಖಸಿಂಧು – ಆನಂದಸಾಗರ
ಗದ್ದಿಗೆ – ಸಿಂಹಾಸನ
ಕಮನೀಯ – ಮನೋಹರ
ಕಂದರ್ಪಪಿತ – ಕಾಮನತಂದೆ (ಶ್ರೀಕೃಷ್ಣ)

ಹನುಮದವತಾರ ವರ್ಣನೆ

ಕಂಜಸಖ – ಸೂರ್ಯ
ಕಂಜಮಿತ್ರಸುತ – ಸುಗ್ರೀವ
ಕಂಜನಾಭ – ಪದ್ಮನಾಭ
ಕುಂಜರನಾಥನ ಮಗ – ವಾಲಿ
ನಂಜುಸವಿದಧೀರ – ವಿಷತಿಂದ ವಾಯುದೇವ
ಝುಂಝಾನಿಲ – ಪ್ರಳಯಕಾಲದಗಾಳಿ
ಧನಂಜಯ – ಅಗ್ನಿ
ವ್ಯಂಜಕ – ಸಹಕಾರಿ
ಅಂಜಲಿಪುಟ – ಕರಪುಟ
ಕಿಂಜಲ್ಕ – ಹೃತ್ಕಮಲ

ಭೀಮಾವತಾರ ವರ್ಣನೆ

ಮತ್ಸ್ಯಪುರ – ವಿರಾಟನಗರ
ಪಾಂಚಾಲಿ – ದ್ರೌಪದಿ
ಹರಿಅಸ್ತ್ರ – ನಾರಾಯಣಾಸ್ತ್ರ

ಶ್ರೀಮಧ್ವಾವತಾರ ವರ್ಣನೆ

ವಿಪ್ರನಮನೆ – ಮಧ್ಯಗೇಹಭಟ್ಟರಮನೆ
ಕ್ಷಿಪ್ರತನದಲ್ಲಿ – ಶೀಘ್ರದಲ್ಲಿ
ಚಪ್ಪಗೊಡಲಿ – ಚಪ್ಪಟೆಯಾದ ಹರಿತವಾದ ಕೊಡಲಿ

Rarest Archiver

ಓದುವ ಜನಕೆ ಅಪಾರ ಬೆಳಕು ಮಾಡಿದ ಚರಣ	–	ಶ್ರೀ ಮಧ್ವರು ರಾತ್ರಿ ದೀಪದ ಬೆಳಕಿನಲ್ಲಿ ಪಾಠ ಹೇಳುತ್ತಿದ್ದಾಗ ದೀಪ ಶಾಂತವಾಗಲು ಕರುಣಾಸಮುದ್ರರಾದ ಅವರು ತಮ್ಮ ಪಾದದ ಹೆಬ್ಬೆರಳಿನ ಉಗುರಿನ ತುದಿಯಿಂದ ಹೊರಹೊಮ್ಮಿದ ಅಪೂರ್ವ ಪ್ರಕಾಶದಿಂದಲೇ ತಮ್ಮ ಶಿಷ್ಯರಿಗೆ ಪಾಠ ಹೇಳಿದರಂತೆ. ವ್ಯಾಖ್ಯಾತಾ ನಿಶಿ ಸ ಕದಾಚನ ಪ್ರದೀಪೇ ಸಂಶಾಂತೇ ಪುನರಪಿ ವಾಚಯಾಂ ಬಭೂವ। ಶಿಷ್ಯಾನ್ ಸ್ವಾನ್ ಪುರುಕರುಣಾಂಬುಧಿರ್ನಿಜಾಂಘ್ರೇ ರಂಗುಷ್ಠ ಸ್ಫುಟನಖರಾಂತ ರೋಚಿಷ್ಯೈವ॥ ಶ್ರೀ ಸು.ವಿ. (16–6)
ಕಂದರ್ಪ	–	ಮನ್ಮಥ, ಕಾಮ
ಕಪ್ಪುಗೊರಳ	–	ನೀಲಕಂಠ, ರುದ್ರ.
ಭೇದಜ್ಞಾನ	–	ಪಂಚಬೇಧಗಳು ಇವೆ ಎಂಬ ಜ್ಞಾನ
	–	ಜೀವೇಶಯೋರ್ಭಿದಾ ಚೈವ ಜೀವ ಭೇದಃ ಪರಸ್ಪರಮ್ । ಜಡೇಶಯೋರ್ಜಡಾನಾಂ ಚ ಜಡಜೀವ ಭಿದಾ ತಥಾ ॥ತಾ.ನಿ. (1.70) ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸುಸರ್ವಶಃ ॥
	–	(ಜೀವ–ಈಶ–ಭೇದ, ಜೀವಜೀವ, ಜಡ–ಜಡ, ಜಡ–ಈಶ, ಜಡ–ಜೀವ ಭೇದ)
ಅರ್ಥಿಯಿಂದಲಿ	–	ಪ್ರೀತಿಯಿಂದಲಿ
ಆರ್ತಜನರ	–	ದುಃಖಿತರಾದ ಜನರ
ಉತ್ತಮ ಶ್ಲೋಕ	–	ಉತ್ತಮಕೀರ್ತಿಯುಳ್ಳ ಶ್ರೀಹರಿ
ಕತ್ತಲೆ	–	ಅಜ್ಞಾನ, ವಿಪರೀತ ಜ್ಞಾನ
ಚ್ಯುತಿದೂರ	–	ಚತುರ್ವಿಧ ನಾಶರಹಿತ
ರಜತಪೀಠಪುರದಿ	–	ಉಡುಪಿಯಲ್ಲಿ
ಚರಣ	–	ಪಾದ॥ ಈ ಸುಳಾದಿಯಲ್ಲಿ ಎಲ್ಲ ಕಡೆಗೆ ಚರಣ ಎಂಬುದಾಗಿ ಹೇಳಿದ್ದಾರೆ ಕಾರಣ ಹೀಗಿದೆ
	–	ಉತ್ತಮಾನಾಂ ಸ್ವರೂಪಂ ತು ಪಾದ ಶಬ್ದೇನ ಭಣ್ಯತೇ ॥ ಜೀವೋತ್ತಮರಾದ ವಾಯುದೇವರ ಸ್ವರೂಪ, ಇತ್ಯಾದಿ ಹೇಳಲು ಹೊರಟಂಥ ದಾಸರು ಚರಣ ಶಬ್ದವನ್ನು ಉಪಯೋಗಿಸಿದ್ದಾರೆ.

****

Rarest Archiver

38) ದಾಸಸಾಹಿತ್ಯ ನಿತ್ಯಾಚರಣೆಗಳು (ವೈಜ್ಞಾನಿಕ ದೃಷ್ಟಿಯಲ್ಲಿ)	15-00
39) ವ್ಯಾಸ-ದಾಸ ವಾಣಿಯಲ್ಲಿ ದೈನಂದಿನ ಆಚರಣೆ	20-00
40) ಭಾರತೀಯ ಸಂಸ್ಕೃತಿಯಲ್ಲಿ ಗೋವು	25-00
41) ಶ್ರೀಮಂಗಲಾಷ್ಟಕಮಂಜರೀ	15-00
42) ಶ್ರೀ ದ್ವಾದಶಸ್ತೋತ್ರ-ಚಿಂತನ ಮಂಥನ	20-00
43) ಶ್ರೀಮದ್ ಭಾಗವತಸೂಕ್ತಿಸುಧಾನಿಧಿ (ಕನ್ನಡಾನುವಾದ ಸಹಿತ)	20-00
44) ಶ್ರೀಕರಾವಲಂಬನಸ್ತೋತ್ರಮಂಜರೀ (17 ಸ್ತೋತ್ರಗಳು ಮೂಲ ಮಾತ್ರ)	20-00
45) ಶ್ರೀಸುಮಧ್ವವಿಜಯ ಮಹಾಕಾವ್ಯ ಚಿಂತನ ಮಂಥನ	25-00
46) ಸ್ಮರಿಸು ಸಂತತ ಹರಿಯ (ಶ್ರೀ ಜಗನ್ನಾಥದಾಸರ ಒಂದು ಪದ್ಯದ ವಿವರಣೆ)	15-00
47) ಶ್ರೀವೈಕುಂಠವರ್ಣನೆ ಸಾರಸಂಗ್ರಹ	20-00
48) ಋಗ್ವೇದೀಯ ಶ್ರಾದ್ಧವಿಧಾನ (ಪಿಂಡಪ್ರದಾನ,ಸಂಕಲ್ಪ ಶ್ರಾದ್ಧಗಳ ವಿವರಣೆ ಸಹಿತ)	25-00
49) ಶ್ರೀ ಸತ್ಯಧರ್ಮತೀರ್ಥರು (ಚರಿತ್ರೆ,ಸ್ತೋತ್ರಗಳು)	20-00
50) ಗೋಪೀಚಂದನ, ಊರ್ಧ್ವಪುಂಡ್ರ,ಮುದ್ರಾಧಾರಣೆಗಳ ಅವಶ್ಯಕತೆ	30-00
51) ಧಾರ್ಮಿಕ ಆಚರಣೆಗಳ ಹಿನ್ನೆಲೆ (ಪ್ರಮಾಣ ಸಹಿತ)	10-00
52) ಶ್ರೀ ವೆಂಕಟೇಶಮಹಾತ್ಮೆ ಸಾರಸಂಗ್ರಹ (ನವರಾತ್ರಿ ಸಂಕಲ್ಪ ಸಹಿತ)	15-00
53) ಶ್ರೀ ಕಾಠಕೋಪನಿಷತ್ (ಒಂದು ಅಧ್ಯಯನ)	30-00
54) ಇತಿಹಾಸ ಪುರಾಣಗಳಲ್ಲಿ ಸ್ತ್ರೀಧರ್ಮಗಳು (ಸ್ತ್ರೀಜಪಕ್ರಮ ಸಹಿತ)	15-00
55) ದಾಸಸಾಹಿತ್ಯದ ಹಿನ್ನೆಲೆ(ವಿಶ್ವಮಧ್ವಮಹಾಪರಿಷತ್,ಬೆಂಗಳೂರು ಪ್ರಕಟಿತ)	30-00
56) ಜೀವನಯಜ್ಞ (ಆಯುರ್ಯಜ್ಞ)	10-00
57) ಭಗವತ್ತತ್ತ್ವಚಿಂತನೆ	40-00
58) ಶ್ರೀಹಯವದನವಿಠ್ಠಲಾಂಕಿತರ ಕೃತಿಗಳು	15-00
59) ಈಶಾವಾಸ್ಯೋಪನಿಷತ್ ಒಂದು ಅಧ್ಯಯನ	20-00
60) ದೇಹರಥ-ದೇವರಥ (60ವರ್ಷದ ಶಾಂತಿ ವಿವರಣೆ ಸಹಿತ)	20-00
61) ಶ್ರೀಪ್ರಹ್ಲಾದರಾಜರ ಉಪದೇಶ ಸಾರಸಂಗ್ರಹ	15-00
62) ಸತ್ಸಂಗ (ಸಾಧು ಸಜ್ಜನರ ಸಂಗ)	15-00
63) ಶ್ರೀವೇದವ್ಯಾಸ ಕರಾವಲಂಬನ ಸ್ತೋತ್ರಮ್(ಕನ್ನಡಾನುವಾದ)	15-00
64) ದೇವಪೂಜಾ ಸಾಮಗ್ರಿಗಳು-ಪರಿಚಯ	20-00
65) ಶ್ರೀಸರ್ವಮೂಲ ಸೌರಭ (ಸರ್ವಮೂಲಗ್ರಂಥಗಳ ಸಂಕ್ಷಿಪ್ತ ಪರಿಚಯ; ಸರ್ವಮೂಲ ಆದ್ಯಂತ ಶ್ಲೋಕಗಳ ಕನ್ನಡಾನುವಾದ ಸಹಿತ)	20-00
66) ಕಪಿಲಗೀತಾ ಸಾರಸಂಗ್ರಹ	20-00
67) ಮಂತ್ರಪುಷ್ಪ ಅಷ್ಟಾವಧಾನ ಸಹಿತ	15-00
68) ಸದಾಚಾರಸ್ಮೃತಿ - ಒಂದು ಅಧ್ಯಯನ	20-00
69) ಶ್ರೀಮಜ್ಜಯತೀರ್ಥಸ್ತುತಿಃ ಹಾಗೂ ಶ್ರೀಮಜ್ಜಯತೀರ್ಥ ವಿಜಯಃ	10-00
70) ಅಧಿಕಮಾಸದ ಆಚರಣೆ (33 ಹಾಡುಗಳ ಸಹಿತ)	15-00
71) ಇತಿಹಾಸ ಪುರಾಣಾದಿಗಳಲ್ಲಿ ಪುರುಷ ಸೂಕ್ತಾರ್ಥ ವಿವರಣೆ	25-00
72) ಶ್ರೀಹಯವದನ ವಿಠ್ಠಲಾಂಕಿತರ ಕೃತಿಗಳು ಭಾಗ-2	20-00
73) ರಾತ್ರಿಸೂಕ್ತ	10-00
74) ಸ್ತವರಾಜ ಸ್ತೋತ್ರಮಂಜರೀ	20-00
75) ಪ್ರಣವ ಪ್ರತಿಪಾದ್ಯ ಪ್ರಹ್ಲಾದ ವರದ (ಶ್ರೀ ಜಗನ್ನಾಥದಾಸರ ಒಂದು ಪದ್ಯದ ವಿವರಣೆ)	15-00

Rarest Archiver

ಇದೇ ಲೇಖಕರ ಪ್ರಕಟಿತ ಕೃತಿಗಳು (ಮುಂದುವರಿದುದು)

76)	ದಾಸಸಾಹಿತ್ಯ ಕುಸುಮಾಂಜಲಿ	30-00
77)	ಜೀವತತ್ವಚಿಂತನೆ	50-00
78)	ಶ್ರೀ ವಿಜಯಧ್ವಜತೀರ್ಥರು (ಜೀವನ,ಕೃತಿಗಳಪರಿಚಯ)	15-00
79)	ತಿಥಿತ್ರಯ ಆಚರಣೆ	20-00
80)	ಶ್ರೀಮದ್ ಭಾಗವತಾಂತರ್ಗತ ಜಾಯಂತೇಯೋಪಾಖ್ಯಾನ ಸಾರಸಂಗ್ರಹ (ವಿವರಣೆ ಸಹಿತ)	20-00
81)	ಶ್ರೀನರಸಿಂಹಜಯಂತೀವ್ರತಪೂಜಾವಿಧಾನ (ನರಸಿಂಹಪ್ರಾದುರ್ಭಾವಕಥಾ ಸಹಿತ)	20-00
82)	ಶ್ರೀಅಷ್ಟೋತ್ತರಶತನಾಮಸ್ತೋತ್ರಮಂಜರೀ (ಅಪೂರ್ವ ಸ್ತೋತ್ರ ಸಂಗ್ರಹ)	25-00
83)	ಶ್ರೀಮನ್ಮಹಾಭಾರತ ನಿರೂಪಿಸಿದ ಧರ್ಮರಹಸ್ಯಗಳು (ಸದಾಚಾರಧರ್ಮನಿರೂಪಣೆ ಸಹಿತ)	25-00
84)	ಶ್ರೀಮದ್ಭಾಗವತದ ಮಧುಬಿಂದುಗಳು	25-00
85)	ತ್ರಿಸುಪರ್ಣಸೂಕ್ತಮ್ ಹಾಗೂ ಶ್ರೀನಾರಾಯಣ ಸೂಕ್ತಮ್ (ಶ್ರೀಧೀರೇಂದ್ರತೀರ್ಥರ ವ್ಯಾಖ್ಯಾನುಸಾರಿ ಕನ್ನಡಾನುವಾದ ಸಹಿತ)	15-00
86)	ಶ್ರೀಶ್ರೀನಿವಾಸ ಕಲ್ಯಾಣ (ಕಿರುನಾಟಕ)	15-00
87)	ತೀರ್ಥಶ್ರಾದ್ಧ ವಿಧಾನ (ಗಂಗಾಪೂಜಾ, ತೀರ್ಥಕ್ಷೇತ್ರ ಮಹಿಮಾಶ್ಲೋಕಗಳ ಸಹಿತ)	40-00
88)	ಶ್ರೀ ವಿಜಯದಾಸಾರ್ಯರ ಪಂಚರತ್ನ ಸುಳಾದಿಗಳು - ಅಧ್ಯಯನ	30-00

ಶ್ರೀನಿವಾಸೇಽಸ್ತು ಮೇ ಮನಃ